ಗುರುವಾರ, ಅಕ್ಟೋಬರ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 299 | ಪುಟ 14

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೋಹಿತ್‌ಗೆ ಅಗ್ರಸ್ಥಾನ



ಭಾರತ ಕ್ರಿಕೆಟ್ ತಂಡದ ರೋಹಿತ್ ಶರ್ಮಾ ಅವರು ತಮ್ಮ ವೃತ್ತಿಜೀವನದಲ್ಲಿ ಇದೇ ಮೊದಲ ಸಲ ಐಸಿಸಿ ಏಕದಿನ ಕ್ರಿಕೆಟ್ ರ್‍ಯಾಂಕಿಂಗ್ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ

ಜಾನುವಾರು ಮೇಳ...



ರಾಜಸ್ಥಾನದಲ್ಲಿ ನಡೆಯಲಿರುವ ಪುಷ್ಕರ್ ಜಾನುವಾರು ಮೇಳಕ್ಕೆ ಬಂದಿರುವ ಕೇವಲ 16 ಇಂಚು ಎತ್ತರವಿರುವ ಹಸು ಪ್ರಮುಖ ಆಕರ್ಷಣೆಯಾಗಿದೆ

ಸೆನ್ಸೆಕ್ಸ್ 84,997 | ನಿಫ್ಟಿ 26,053 | $/₹ 88.22 | ಚಿನ್ನ (Std. 10g) ₹1,25,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,56,500 (ಬೆಂಗಳೂರು)

ಪುನರ್‌ರಚನೆ: 'ಕೈ' ತಳಮಳ

ಸಚಿವ ಸ್ಥಾನ ಕೈತಪ್ಪುವ ಭೀತಿಯಲ್ಲಿ ಇರುವವರಿಂದ ದೆಹಲಿಯಲ್ಲಿ ಲಾಬಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್‌ನಲ್ಲಿ 'ಅಧಿಕಾರ ಹಸ್ತಾಂತರ'ದ ಗದ್ದಲ ನವೆಂಬರ್ ಹತ್ತಿರ ವಾಗುತ್ತಿ ದ್ದಂತೆಯೇ ಬಿರುಸು ಪಡೆದುಕೊಂಡಿದೆ. ನವೆಂಬರ್‌ನಲ್ಲೇ ಸಚಿವ ಸಂಪುಟ ಪುನರ್ ರಚನೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಉಮೇದು ತೋರಿದ್ದಾರೆ. ಇದರ ನಡುವೆಯೇ, ಸಚಿವ ಸ್ಥಾನದ ಆಕಾಂಕ್ಷಿಗಳು ಹಾಗೂ ಸಚಿವ ಸ್ಥಾನ ಕೈ ತಪ್ಪುವ ಆತಂಕದಲ್ಲಿರುವವರು ಹೈಕಮಾಂಡ್ ಮಟ್ಟದಲ್ಲಿ ತೀವ್ರ ಲಾಬಿ ನಡೆಸಿದ್ದಾರೆ.

ಸುಮಾರು 15 ಸಚಿವರನ್ನು ಕೈಬಿಟ್ಟು ಹಿರಿಯರು ಹಾಗೂ ಹೊಸಬರಿಗೆ ಅವಕಾಶ ನೀಡಿ ಸಂಪುಟ ಪುನರ್ ರಚನೆ ಮಾಡುವ ಬಗ್ಗೆ 'ಕೈ' ಪಾಳಯದಲ್ಲಿ ಚರ್ಚೆ ಆರಂಭವಾಗಿದೆ. ಸಚಿವರ ಸಾಧನೆ ಬಗ್ಗೆ ಹೈಕಮಾಂಡ್ ವರದಿ ತರಿಸಿಕೊಂಡಿದೆ. ಹಲವು ಸಚಿವರು ತಮ್ಮ ಇಲಾಖೆಗಳ ಸಾಧನೆಯ ವರದಿ ಸಲ್ಲಿಸಿದ್ದಾರೆ. ಪಕ್ಷ ಸಂಘಟನೆಗೆ ಹೆಚ್ಚಿನ ಕೊಡುಗೆ ನೀಡದ, ಪಕ್ಷದ ಕಾರ್ಯಕರ್ತರ ಕೈಗೆ ಸಿಗದ ಸಚಿವರನ್ನು ಕೈಬಿಡಬೇಕು ಎಂಬ ಬೇಡಿಕೆಯು ಮತ್ತೆ ಮುನ್ನೆಲೆಗೆ ಬಂದಿದೆ. ಸಚಿವ ಸ್ಥಾನ ಕಳೆದುಕೊಳ್ಳಲಿದ್ದಾರೆ ಎಂಬ 'ಪಟ್ಟಿ'ಯಲ್ಲಿರುವ ಸಚಿವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ತಮ್ಮ 'ಸಾಧನೆ' ಹೇಳಿಕೊಂಡಿದ್ದಾರೆ. ಕೆಲವರು ಗುಟ್ಟಾಗಿ ಬಂದು ರಾಷ್ಟ್ರೀಯ ನಾಯಕರನ್ನು ಕಂಡಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಬಳಿಕ ರಾಷ್ಟ್ರೀಯ ನಾಯಕರು ರಾಜ್ಯದ ಕಡೆಗೆ ಗಮನಹರಿಸಬಹುದು ಎಂಬ ನಿರೀಕ್ಷೆಯಲ್ಲಿ ರಾಜ್ಯದ ನಾಯಕರು ಇದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನವೆಂಬರ್ 15ರಂದು ದೆಹಲಿಗೆ ಬರಲಿದ್ದಾರೆ.

4

ಸಚಿವರಿಂದ ದೆಹಲಿ ಯಾತ್ರೆ

- ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್
- ಅರಣ್ಯ ಸಚಿವ ಈಶ್ವರ ಖಂಡ್ರೆ
- ಕಂದಾಯ ಸಚಿವ ಕೃಷ್ಣ ಬೈರೇಗೌಡ
- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್
- ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್
- ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಪರವಾಗಿ ಪುತ್ರ ರವಿ ಬೋಸರಾಜು
- ಮಾಜಿ ಸಚಿವ ಕೆ.ಎನ್.ರಾಜಣ್ಣ ಪರವಾಗಿ ಪುತ್ರ ರಾಜೇಂದ್ರ

'ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯ'

ಬೆಂಗಳೂರು: 'ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಕಾಂಗ್ರೆಸ್‌ಗೆ ಅನಿವಾರ್ಯ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ವ್ಯಾಖ್ಯಾನಿಸಿದರು.

ಮುಖ್ಯಮಂತ್ರಿಯ ಆಪ್ತ ವಲಯದಲ್ಲಿರುವ ಶಾಸಕ ಕೆ.ಎನ್. ರಾಜಣ್ಣ ಕೂಡಾ ಇತ್ತೀಚೆಗೆ, 'ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯ' ಎಂದಿದ್ದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಲಾಡ್, 'ಸಿದ್ದರಾಮಯ್ಯ ನಾಯಕತ್ವ ಬೇಕೇ ಬೇಕು. ನಿರ್ವಿವಾದವಾಗಿ ಇಡೀ ರಾಜ್ಯಕ್ಕೆ ಅವರ ನಾಯಕತ್ವ ಬೇಕು. ಅವರು ರಾಜ್ಯ ರಾಜಕಾರಣದಿಂದ ನಿವೃತ್ತಿಯಾಗದೆ, ಸಕ್ರಿಯರಾಗಿಯೇ ಇರಬೇಕು' ಎಂದು ಅಭಿಪ್ರಾಯಪಟ್ಟರು.

'ಮುಂದಿನ ಅವಧಿಯಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಸಿದ್ದರಾಮಯ್ಯ ಅವರು ಹೇಳಿದರೂ ನಾವು ಒಪ್ಪಲ್ಲ. ಅವರು ಜನಪ್ರಿಯ ನಾಯಕ. ಕಾಂಗ್ರೆಸ್ ಪಕ್ಷಕ್ಕೆ ಮುಖ ಇದ್ದಂತೆ. ಖಂಡಿತವಾಗಿಯೂ ಅವರ ಅಗತ್ಯ ಕಾಂಗ್ರೆಸ್ ಪಕ್ಷಕ್ಕೆ ಇದೆ. ರಾಜಕಾರಣದಿಂದ ಅವರು ಹೊರಗೆ ಉಳಿಯಬಾರದು ಎನ್ನುವುದು ನನ್ನ ವಾದ' ಎಂದರು.

4

ಸಿ.ಎಂ, ಪರಮೇಶ್ವರ, ಮಹದೇವಪ್ಪ ಚರ್ಚೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರಾದ ಜಿ. ಪರಮೇಶ್ವರ ಮತ್ತು ಎಚ್‌.ಸಿ. ಮಹದೇವಪ್ಪ ಜೊತೆ ಕೆಲಹೊತ್ತು ಸಮಾಲೋಚನೆ ನಡೆಸಿದರು. ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವದ ಬದಲಾವಣೆಯ ಚರ್ಚೆ ಜೋರಾಗುತ್ತಿರುವ ನಡುವೆ ಈ ಮೂವರು ವಿಚಾರ ವಿನಿಮಯ ನಡೆಸಿರುವುದು ಕುತೂಹಲ ಮೂಡಿಸಿದೆ.

ಒಳ ಮೀಸಲಾತಿ ಕುರಿತು ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಬುಧವಾರ ಮಧ್ಯಾಹ್ನ 1 ಗಂಟೆಗೆ ಸಭೆ ನಿಗದಿಯಾಗಿತ್ತು. ಆ ಸಭೆಗೆ ಪರಮೇಶ್ವರ ಮತ್ತು ಮಹದೇವಪ್ಪ ಬಂದಿದ್ದರು. ಸಭೆಯನ್ನು 4 ಗಂಟೆಗೆ ಮುಂದೂಡಿದ ಮುಖ್ಯಮಂತ್ರಿ, ಸಚಿವರಿಬ್ಬರ ಜೊತೆ ರಾಜ್ಯ ಕಾಂಗ್ರೆಸ್‌ನಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಸಮಾಲೋಚನೆ ನಡೆಸಿದರು.

'ಹಣೆಯಲ್ಲಿ ಬರೆದಿದ್ದರೆ ಸಿ.ಎಂ ಆಗುತ್ತಾರೆ'

'ಅಣ್ಣನ ಹಣೆಯಲ್ಲಿ ಬರೆದಿದ್ದರೆ ಮುಖ್ಯಮಂತ್ರಿ ಆಗುತ್ತಾರೆ, ಇಲ್ಲದಿದ್ದರೆ ಇಲ್ಲ' ಎಂದು ಡಿ.ಕೆ. ಶಿವಕುಮಾರ್ ಅವರ ಸಹೋದರ, ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಣ್ಣ ಮುಖ್ಯಮಂತ್ರಿ ಆಗಬೇಕು ಎಂಬ ಆಸೆ ಇದೆ. ಪಕ್ಷ ಹೇಳಿದಂತೆ ಅಣ್ಣ ನಡೆದುಕೊಳ್ಳುತ್ತಾರೆ. ಪಕ್ಷದ ಅಧ್ಯಕ್ಷರಾಗಿ, ಉಪ ಮುಖ್ಯಮಂತ್ರಿಯಾಗಿ ಪಕ್ಷದ ಏಳಿಗೆಗೆ, ಘನತೆಗೆ ಚ್ಯುತಿ ಬರದಂತೆ, ಪಕ್ಷನಿಷ್ಠರಾಗಿದ್ದಾರೆ. ಪಕ್ಷದ ಅಧ್ಯಕ್ಷರಾಗಿ ಎಲ್ಲರನ್ನೂ ಸಮಾನವಾಗಿ ನೋಡಬೇಕಿರುವುದು ಅವರ ಕರ್ತವ್ಯ' ಎಂದು ಹೇಳಿದರು.

'ನವೆಂಬರ್ 15ರ ನಂತರ ಸರ್ಕಾರದಲ್ಲಿ ಏನಾದರೂ ಬದಲಾವಣೆ ಆಗುತ್ತದೆಯೇ' ಎಂಬ ಪ್ರಶ್ನೆಗೆ, 'ಈ ಪ್ರಶ್ನೆಯನ್ನು ಪಕ್ಷದ ಅಧ್ಯಕ್ಷರು, ಮುಖ್ಯಮಂತ್ರಿ, ಎಐಸಿಸಿ ನಾಯಕರಿಗೆ ಕೇಳಬೇಕು' ಎಂದರು.

4

ಒಳಮೀಸಲಾತಿ ಸಮರ್ಪಕ ಅನುಷ್ಠಾನಕ್ಕೆ ಕಾಯ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಯ ಸಮರ್ಪಕ ಅನುಷ್ಠಾನಕ್ಕೆ ಕಾಯ್ದೆ ರೂಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಸಂಬಂಧಿಸಿದ ಕರಡು ಮಸೂದೆಗೆ ಸಮ್ಮತಿ ಪಡೆಯಲಿದೆ.

ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಅನುಷ್ಠಾನ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದ್ದು, ಸಂಪುಟ ಸಭೆಯ ತೀರ್ಮಾನಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ.

ಸುದ್ದಿಗಾರರ ಜತೆ ಸಭೆಯ ನಂತರ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, 'ಅ.31ಕ್ಕೆ ಅಲೆಮಾರಿ ಸಮುದಾಯಗಳ ಸಭೆ ನಡೆಸಲಾಗುವುದು. ಸುಪ್ರೀಂ ಕೋರ್ಟ್ ಆದೇಶದಂತೆ ಒಳ ಮೀಸಲಾತಿ ರೂಪಿಸಲಾಗಿದ್ದು, ಕೋರ್ಟ್ ನಿರ್ದೇಶನದಂತೆಯೇ ಕಾಯ್ದೆ ರೂಪಿಸುವುದರಿಂದ ಅನುಷ್ಠಾನಕ್ಕೆ ಇರುವ ಎಲ್ಲ ತೊಡಕುಗಳೂ ನಿವಾರಣೆಯಾಗಲಿವೆ. ಸಂಬಂಧಿಸಿದ ಇಲಾಖೆಗಳ ಜತೆಗೆ ಈಗಾಗಲೇ ಚರ್ಚೆ ಮಾಡಲಾಗಿದೆ' ಎಂದರು.

7

ರಫೇಲ್‌ನಲ್ಲಿ ಸಂಚಾರ

ಪಿಟಿಐ ಚಿತ್ರ



ರಫೇಲ್ ಜೆಟ್ ಯುದ್ಧವಿಮಾನದಲ್ಲಿ ಸಂಚರಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪೈಲಟ್ ದಿರಿಸು ಧರಿಸಿ ಹರಿಯಾಣದ ಅಂಬಾಲ ವಾಯುನೆಲೆಗೆ ಬುಧವಾರ ಆಗಮಿಸಿದ್ದು ಹೀಗೆ...


ಕೀಳು ಹೇಳಿಕೆ ನೀಡಿದವರು ಉತ್ತಮ ನಾಗರಿಕರಲ್ಲ: 'ಸುಪ್ರೀಂ'

ಕನೇರಿ ಸ್ವಾಮೀಜಿಗೆ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಜಯಪುರ ಜಿಲ್ಲೆಗೆ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

'ಲಿಂಗಾಯತ ಮಠಾಧಿಪತಿಗಳ ವಿರುದ್ಧ ಆಕ್ಷೇಪಾರ್ಹ ನುಡಿಗಳನ್ನು ಆಡಿದ್ದಾರೆ' ಎಂಬ ಆರೋಪದ ಕಾರಣ ಸ್ವಾಮೀಜಿಯವರು ಡಿ. 14ರವರೆಗೆ ವಿಜಯಪುರ ಜಿಲ್ಲೆ ಪ್ರವೇಶಿಸ ಬಾರದು ಎಂದು ವಿಜಯಪುರ ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಇತ್ತೀಚೆಗೆ ಎತ್ತಿ ಹಿಡಿದಿತ್ತು.



ಕಾಡಸಿದ್ದೇಶ್ವರ ಸ್ವಾಮೀಜಿ

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಹಾಗೂ ಪ್ರಸನ್ನ ಬಿ.ವರಾಳೆ ಪೀಠವು ಸ್ವಾಮೀಜಿ ಅವರನ್ನು ತರಾಟೆಗೆ ತೆಗೆದುಕೊಂಡಿತು.

'ನೀವು ಜಿಲ್ಲೆಯಿಂದ ದೂರವಿದ್ದು ಆಧ್ಯಾತ್ಮಿಕ ವಿಷಯಗಳಲ್ಲಿ ತೊಡಗಿಸಿ ಕೊಳ್ಳಲು ಇದು ಒಂದು ಅವಕಾಶ. ನೀವು ಬೇರೆ ಯಾವುದಾದರೂ ಮಠದಲ್ಲಿ ಕುಳಿತು ಧ್ಯಾನ ಮಾಡಬೇಕು. ಈ ನಿರ್ದಿಷ್ಟ ಜಿಲ್ಲೆಗೆ ಹೋಗಬೇಕೆಂದು ನೀವು ಏಕೆ ಒತ್ತಾಯಿಸುತ್ತೀರಿ' ಎಂದು ಪೀಠವು ಸ್ವಾಮೀಜಿ ಅವರನ್ನು ಪ್ರಶ್ನಿಸಿತು.

4

'ಭಾರತದ ಜೊತೆ ವ್ಯಾಪಾರ ಒಪ್ಪಂದ'

ಸೋಲ್ (ಪಿಟಿಐ): ಅಮೆರಿಕವು ಭಾರತದ ಜೊತೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ. ಒಪ್ಪಂದದ ವಿಚಾರವಾಗಿ ಅಮೆರಿಕ ಮತ್ತು ಭಾರತದ ಅಧಿಕಾರಿಗಳ ನಡುವೆ ಮಾತುಕತೆ ನಡೆಯುತ್ತಿದೆ.

10

ಚಿನಕುರುಳಿ ಪ್ರಕಾಶ್ ಶೆಟ್ಟಿ



ನಟ ದರ್ಶನ್‌ಗೆ ತಿಂಗಳಿಗೆ ಒಮ್ಮೆ ಬೆಡ್‌ಶೀಟ್, ಬಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ಜೈಲಿನಲ್ಲಿ ಕೆಲವು ಸೌಲಭ್ಯ ಕಲ್ಪಿಸುವಂತೆ ಮಾಡಿದ್ದ ಮನವಿಗೆ ಕೋರ್ಟ್ ಮನ್ನಣೆ ನೀಡಿಲ್ಲ.



ದರ್ಶನ್

'ಆರೋಗ್ಯ ಸರಿಯಿಲ್ಲ. ಬೆನ್ನು ನೋವು ಇದೆ. ಜತೆಗೆ ಜೈಲಿನಲ್ಲಿ ಮೂಲ ಸೌಕರ್ಯಗಳ ಕೊರತೆಯಿದೆ. ಆದ್ದರಿಂದ ಹೆಚ್ಚುವರಿ ಹಾಸಿಗೆ, ದಿಂಬು ಮತ್ತು ಬೆಡ್‌ಶೀಟ್ ನೀಡಲು ಜೈಲಿನ ಅಧಿಕಾರಿಗಳಿಗೆ ಸೂಚಿಸಬೇಕು' ಎಂದು ಕೋರಿ ನ್ಯಾಯಾಲಯಕ್ಕೆ ದರ್ಶನ್ ಅವರು ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ನಗರದ 57ನೇ ಸಿಸಿಎಚ್ ನ್ಯಾಯಾಲಯವು ಆದೇಶವನ್ನು ಕಾಯ್ದಿರಿಸಿತ್ತು. ಹೆಚ್ಚುವರಿ ಸೌಲಭ್ಯ ಕಲ್ಪಿಸುವುದಕ್ಕೆ ನ್ಯಾಯಾಲಯ ನಿರಾಕರಿಸಿದೆ. ಜೈಲು ಕೈಪಿಡಿ ಪ್ರಕಾರವೇ ಸೌಲಭ್ಯ ಕಲ್ಪಿಸಬಹುದು ಎಂದು ಹೇಳಿದೆ.

ತಿಂಗಳಿಗೊಮ್ಮೆ ಮನೆಯಿಂದ ಬೆಡ್‌ಶೀಟ್ ಹಾಗೂ ಬಟ್ಟೆ ಒದಗಿಸಲು ಕೋರ್ಟ್ ಸೂಚನೆ ನೀಡಿದೆ. ಬೇರೆ ಬ್ಯಾರಕ್‌ಗೆ ಸ್ಥಳಾಂತರ ಮಾಡುವಂತೆಯೂ ದರ್ಶನ್ ಅವರು ಮನವಿ ಮಾಡಿದ್ದರು. ಅಗತ್ಯವಿದ್ದರೆ ಕ್ವಾರಂಟೈನ್ ಬ್ಯಾರಕ್‌ನಿಂದ ಬೇರೆ ಬ್ಯಾರಕ್‌ಗೆ ಸ್ಥಳಾಂತರ ಮಾಡುವ ನಿರ್ಧಾರವನ್ನು ಜೈಲು ಅಧಿಕಾರಿಗಳೇ ಕೈಗೊಳ್ಳಬಹುದು ಎಂದು ನ್ಯಾಯಾಲಯ ತಿಳಿಸಿದೆ.

ದರ್ಶನ್ ಅವರಿಗೆ ಕನಿಷ್ಠ ಸೌಲಭ್ಯ ನೀಡದ ಆರೋಪಕ್ಕೆ ಸಂಬಂಧಿಸಿದಂತೆ ಕಾರಾಗೃಹದಲ್ಲಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ಕಾನೂನು ಸೇವಾ ಪ್ರಾಧಿಕಾರಕ್ಕೆ ಸೂಚಿಸಿತ್ತು.

ಪ್ರಾಧಿಕಾರದ ಬೆಂಗಳೂರು ಜಿಲ್ಲಾ ವಿಭಾಗದ ಸದಸ್ಯ ಕಾರ್ಯದರ್ಶಿ ಬಿ.ವರದರಾಜು ನೇತೃತ್ವದ ತಂಡವು ಕಾರಾಗೃಹದಲ್ಲಿ ಪರಿಶೀಲನೆ ನಡೆಸಿ ಅಕ್ಟೋಬರ್ 17ರಂದು ವರದಿ ಸಲ್ಲಿಸಿತ್ತು.

'ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರಿಗೆ ಬಿಸಿಲಿನಲ್ಲಿ ನಡಿಗೆಗೆ ಅವಕಾಶ ಹೊರತುಪಡಿಸಿ, ಜೈಲಿನ ಕೈಪಿಡಿ ಅನುಸಾರವೇ ಸೌಲಭ್ಯ ಕಲ್ಪಿಸಲಾಗುತ್ತಿದೆ' ಎಂದು ತಂಡವು ವರದಿ ಸಲ್ಲಿಸಿತ್ತು.

'ದರ್ಶನ್ ಅವರನ್ನು ಇರಿಸಲಾಗಿರುವ ಬ್ಯಾರಕ್‌ನಲ್ಲಿ ಭಾರತೀಯ ಹಾಗೂ ಪಾಶ್ಚಿಮಾತ್ಯ ಶೈಲಿಯ 2 ಶೌಚಾಲಯಗಳಿವೆ. ವಿಚಾರಣಾಧೀನ ಕೈದಿಗೆ ಹಾಸಿಗೆ, ದಿಂಬಿಗೆ ಅವಕಾಶ ಇಲ್ಲ. ನಿಯಮದಂತೆ ದರ್ಶನ್ ಅವರಿಗೆ ಒಂದು ತಾಸು ನಡಿಗೆ, ಆಟವಾಡಲು ಅವಕಾಶ ನೀಡಬಹುದು' ಎಂದು ವರದಿ ತಿಳಿಸಿದೆ.

7

ನಡೆಯದ ಚುನಾವಣೆ: ಆಯೋಗದ ಅಸಹಾಯಕತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸ್ಥಳೀಯ ಸಂಸ್ಥೆಗಳಿಗೆ ನಿಗದಿತ ಅವಧಿಯಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವಂತಾಗಬೇಕು ಎಂದು ಕಳೆದ ನಾಲ್ಕೈದು ವರ್ಷಗಳಿಂದ ಸತತವಾಗಿ ಕಾನೂನು ಹೋರಾಟ ನಡೆಸಲಾಗುತ್ತಿದೆ. ಆದರೂ, ಪ್ರಯೋಜನವಾಗುತ್ತಿಲ್ಲ' ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ಗೆ ತನ್ನ ಅಸಹಾಯಕತೆ ವ್ಯಕ್ತಪಡಿಸಿದೆ.

'ಅವಧಿ ಮುಗಿಯಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ 40ಕ್ಕೂ ಹೆಚ್ಚು ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠ, 'ಅವಧಿ ಮುಗಿಯುವ ಮುನ್ನವೇ ಏಕೆ ಚುನಾವಣೆ ನಡೆಸಿಲ್ಲ' ಎಂಬ ಪ್ರಶ್ನೆಗೆ ಉತ್ತರಿಸಿದ ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಿಗದಿತ ಅವಧಿಯಲ್ಲಿ ನಡೆಯುವಂತಾಗಬೇಕು ಎಂಬುದೇನೊ ಸರಿ. ಆದರೆ, ಇದಕ್ಕೆಲ್ಲಾ ಸರ್ಕಾರವೇ ಅನುವು ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಚುನಾವಣಾ ಆಯೋಗ ಕಳೆದ ನಾಲ್ಕೈದು ವರ್ಷಗಳಿಂದ ಸತತವಾಗಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಲೇ ಬರುತ್ತಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಮೀಸಲು ನಿಗದಿ ಹಾಗೂ ಕ್ಷೇತ್ರ ಪುನರ್ವಿಂಗಡಣೆಯನ್ನು ಯಾವಾಗ ಮುಗಿಸಿ ಅದರ ಪಟ್ಟಿ ನೀಡುತ್ತೀರಿ ಎಂಬುದನ್ನು ಇದೇ 3ರೊಳಗೆ ತಿಳಿಸಿ' ಎಂದು ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ನವೆಂಬರ್ 3ಕ್ಕೆ ಮುಂದೂಡಿತು.

ಹುಲಿ ದಾಳಿ ಭೀತಿ: ಅರಣ್ಯದಂಚಿನ ಗ್ರಾಮಗಳಲ್ಲಿ ಬೆಳೆ ಕಟಾವು ವೇಳೆ ಪಹರೆ

ರೈತರಿಗೆ ಶಸ್ತ್ರಸಜ್ಜಿತ ಸಿಬ್ಬಂದಿ ಬೆಂಗಾವಲು

● ಬಾಲಚಂದ್ರ ಎಚ್.

ಚಾಮರಾಜನಗರ: ತಾಲ್ಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯದ ಅಂಚಿನ ಗ್ರಾಮಗಳಲ್ಲಿ ಬೆಳೆ ಕಟಾವಿಗಾಗಿ ಜಮೀನಿಗೆ ತೆರಳಲೂ ಭಯಪಡುತ್ತಿದ್ದ ಕೃಷಿಕರಿಗೆ ಈಗ ಅರಣ್ಯ ಇಲಾಖೆಯ ಶಸ್ತ್ರಸಜ್ಜಿತ ಸಿಬ್ಬಂದಿ ಬೆಂಗಾವಲಾಗಿ ನಿಂತು, ಕಟಾವು ಕಾರ್ಯಕ್ಕೆ ರಕ್ಷಣೆ ನೀಡುತ್ತಿದ್ದಾರೆ.

ಈ ಗ್ರಾಮಗಳ ಕೃಷಿಕರಿಗೆ ಕಾಡಿದ್ದ ಹುಲಿ ದಾಳಿ ಭೀತಿ ಇದಕ್ಕೆ ಕಾರಣ. ಕಲ್ಬುರ, ಹೆಗ್ಗೋಠಾರ, ಮೇಗಲಹುಂಡಿ, ಹಳೇಪುರ ಇನ್ನಿತರ ಗ್ರಾಮಗಳಲ್ಲಿ ಸಿಬ್ಬಂದಿ ರಕ್ಷಣೆಯಲ್ಲಿ ಕಟಾವು ಪ್ರಕ್ರಿಯೆ ನಡೆದಿದೆ.

ಟೊಮೆಟೊ, ಬಾಳೆ ಸೇರಿದಂತೆ ಇತರೆ ಬೆಳೆಗಳ ಕಟಾವು ವೇಳೆ ಶಸ್ತ್ರಸಜ್ಜಿತ ಸಿಬ್ಬಂದಿ ಜಮೀನಿನ ಸುತ್ತಲೂ ಭದ್ರತೆಗೆ ನಿಂತಿದ್ದು, ರೈತರು, ಕೂಲಿ ಕಾರ್ಮಿಕರು ನಿರಾತಂಕವಾಗಿ ಕಟಾವು ಮಾಡುತ್ತಿದ್ದಾರೆ.

> **ರೈತರು ಹೊಲಗಳಿಗೆ ತೆರಳಲೂ ಹೆದರುತ್ತಿದ್ದು. ಬೆಳೆ ಕಟಾವು ವೇಳೆ ರಕ್ಷಣೆ ನೀಡಲಾಗುತ್ತಿದೆ. ಕಾಡುಪ್ರಾಣಿಗಳಿಂದ ಜನರಿಗೆ ರಕ್ಷಣೆ ಕೊಡುವುದೂ ಇಲಾಖೆಯ ಕರ್ತವ್ಯ**
>
> **ಮಂಜುನಾಥ್,** ಪುಣಜನೂರು ಎಸಿಎಫ್

'ಬೆಳೆ ಕಟಾವು ಮಾಡುವ ಹಿಂದಿನ ದಿನ ಮಾಹಿತಿ ನೀಡಿದರೆ, ಬೆಳಿಗ್ಗೆಯೇ ಕೂಲಿಯಾಳುಗಳು ಬರುವ ವೇಳೆಗೆ, ಹೊಲಗಳಿಗೆ ಬರುವ ಸಿಬ್ಬಂದಿ, ಕಟಾವು ಮಾಡಲಾದ ಫಸಲನ್ನು ಮಾರುಕಟ್ಟೆಗೆ ಸಾಗಿಸುವವರೆಗೂ ಜೊತೆಗಿರುತ್ತಾರೆ' ಎಂದು ರೈತರು ಸಂತಸ ವ್ಯಕ್ತಪಡಿಸಿದ್ದಾರೆ.

ಭೀತಿಗೆ ಕಾರಣ: ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಪುಣಜನೂರು–ಬೇಡಗುಳಿ ಸಂಪರ್ಕ ರಸ್ತೆಯಲ್ಲಿ 15 ದಿನಗಳ ಹಿಂದೆ ಮೂರು ಮರಿಗಳನ್ನು ಬಿಟ್ಟು ತಾಯಿ ಹುಲಿ ನಾಪತ್ತೆಯಾಗಿತ್ತು. ಮರಿಗಳನ್ನು ರಕ್ಷಿಸಿದ್ದ ಅರಣ್ಯಾಧಿಕಾರಿಗಳು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ರವಾನಿಸಿ, ತಾಯಿ ಹುಲಿಗಾಗಿ ಶೋಧ ಆರಂಭಿಸಿದ್ದರು.



ಚಾಮರಾಜನಗರ ಜಿಲ್ಲೆಯ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಸುತ್ತಲಿನ ಗ್ರಾಮದ ಜಮೀನುಗಳಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಪಹರೆ ನಡೆಸಿದರು

ಥರ್ಮಲ್ ಡ್ರೋನ್, ಸಾಕಾನೆ, ಶ್ವಾನದಳ ಸಹಿತ ಸಿಬ್ಬಂದಿ 2 ವಾರಗಳಿಂದ ಶೋಧ ನಡೆಸಿದರೂ ತಾಯಿ ಹುಲಿ ಕಂಡುಬಂದಿರಲಿಲ್ಲ. ಇದು, ಗ್ರಾಮಗಳಲ್ಲಿ ಹುಲಿ ದಾಳಿ ಭೀತಿ ಮೂಡಿಸಿತ್ತು. ಜಮೀನುಗಳಲ್ಲಿ ಹುಲಿಯ ಹೆಜ್ಜೆ ಗುರುತುಗಳನ್ನು ಕಂಡು ರೈತರು ಹೊಲಗಳಿಗೆ ತೆರಳುವುದನ್ನು ನಿಲ್ಲಿಸಿದ್ದರು.

'ಕಷ್ಟಪಟ್ಟು ಬೆಳೆದಿದ್ದ ಬೆಳೆ ಕಟಾವು ಮಾಡಲಾಗದೇ ನಷ್ಟವಾಗುವ ಚಿಂತೆ ಕಾಡಿತ್ತು. ಸದ್ಯ, ಗ್ರಾಮಸ್ಥರ ನೆರವಿಗೆ ಅರಣ್ಯಾಧಿಕಾರಿಗಳು ಬಂದಿದ್ದಾರೆ. ರೈತರೂ ಕೂಲಿಯಾಳುಗಳಿಗೆ ಧೈರ್ಯ ತುಂಬಿ ಕೆಲಸಕ್ಕೆ ಕರೆತರುತ್ತಿದ್ದಾರೆ' ಎಂದು ಗ್ರಾಮದ ರೈತ ರಾಘವೇಂದ್ರ ತಿಳಿಸಿದರು.

ಹುಲಿಮರಿ ಸಾವು

'ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಆರೈಕೆಯಲ್ಲಿದ್ದ ಮೂರು ಮರಿಗಳಲ್ಲಿ ಒಂದು ಮೃತಪಟ್ಟಿದೆ. ಅಸ್ವಸ್ಥತೆಯಿಂದ ಬಳಲುತ್ತಿದ್ದ ಮರಿ ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಉಳಿದೆರಡು ಆರೋಗ್ಯವಾಗಿವೆ' ಎಂದು ಎಸಿಎಫ್ ಮಂಜುನಾಥ್ ತಿಳಿಸಿದರು.

ತಾತ್ಕಾಲಿಕ ಕ್ಯಾಂಪ್: ನಾಲ್ವರು ಸೋಲಿಗರನ್ನು ಒಳಗೊಂಡ 20 ಸಿಬ್ಬಂದಿಯ ತಂಡ, ಅತ್ತ ತಾಯಿ ಹುಲಿಯ ಪತ್ತೆ ಕಾರ್ಯಾಚರಣೆಯಲ್ಲಿ ತೊಡಗಿದೆ. ಪೂರಕವಾಗಿ ಕಲ್ಬುರ ಗ್ರಾಮದ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ತಾತ್ಕಾಲಿಕ ಕ್ಯಾಂಪ್ ಅನ್ನು ಹಾಕಲಾಗಿದೆ.

'ಶ್ವಾನದಳದ ನೆರವು ಪಡೆದಿದ್ದು, ಥರ್ಮಲ್ ಡ್ರೋನ್ ಬಳಸಲಾಗಿದೆ. ಬೋನು ಇರಿಸಲಾಗಿದೆ. ಹುಲಿ ಹೆಜ್ಜೆ ಜಾಡು ಗುರುತಿಸುತ್ತಿದ್ದು, ಹುಲಿ ನೆಲೆ ಪತ್ತೆಯಾದರೆ ಸಾಕಾನೆಗಳನ್ನು ಕಾರ್ಯಾಚರಣೆಗೆ ಬಳಸಲಿದ್ದೇವೆ' ಎಂದು ನೇತೃತ್ವ ವಹಿಸಿರುವ ಪುಣಜನೂರು ಎಸಿಎಫ್ ಮಂಜುನಾಥ್ ಮಾಹಿತಿ ನೀಡಿದರು.

ಗಡುವು ಮುಕ್ತಾಯ: ತೆವಳುತ್ತಿರುವ ಬಿಎಸ್‌ಆರ್‌ಪಿ

40 ತಿಂಗಳ ಗಡುವು ನೀಡಿದ್ದ ಪ್ರಧಾನಿ
ಶೇ 90ರಷ್ಟು ಕಾಮಗಾರಿ ಇನ್ನೂ ಬಾಕಿ



4 ಒಟ್ಟು ಕಾರಿಡಾರ್‌ಗಳ ಸಂಖ್ಯೆ | **148** ಕಿ.ಮೀ. ಒಟ್ಟು ಯೋಜನೆಯ ಉದ್ದ | **₹15,767** ಕೋಟಿ ಯೋಜನೆಯ ಅಂದಾಜು ವೆಚ್ಚ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯನ್ನು (ಬಿಎಸ್‌ಆರ್‌ಪಿ) 40 ತಿಂಗಳಲ್ಲಿ ಪೂರ್ಣಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಗಡುವು ಅ.19ಕ್ಕೆ ಕೊನೆಗೊಂಡಿದೆ. ಇಲ್ಲಿಯವರೆಗೆ ಶೇ 10ರಷ್ಟು ಕಾಮಗಾರಿ ನಡೆದಿದ್ದು, ಇನ್ನೂ 40 ತಿಂಗಳು ಕಳೆದರೂ ಪೂರ್ಣಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ.

ಐದು ವರ್ಷಗಳ ಹಿಂದೆ, ಅಂದರೆ 2020ರ ಅಕ್ಟೋಬರ್ 21ರಂದು ಬಿಎಸ್‌ಆರ್‌ಪಿಗೆ ಅಂತಿಮ ಅನುಮೋದನೆ ನೀಡಲಾಗಿತ್ತು. ಆದರೆ, ಕಾಮಗಾರಿ ಆರಂಭವಾಗುವುದು ಸುಮಾರು 2 ವರ್ಷ ವಿಳಂಬವಾಗಿತ್ತು. 2022ರ ಜೂನ್ 20ರಂದು ಪ್ರಧಾನಿ ನರೇಂದ್ರಮೋದಿ ಅವರು ಶಂಕುಸ್ಥಾಪನೆ ಮಾಡಿ, 40 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಘೋಷಿಸಿದ್ದರು.

ಯೋಜನೆ ಅನುಷ್ಠಾನಗೊಳಿಸಲು ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸರ್ಸ್ (ಕೆ- ರೈಡ್) ಸಂಸ್ಥೆಯನ್ನು ಹುಟ್ಟುಹಾಕಲಾಗಿತ್ತು.

ಬಳಿಕ ಕಾಮಗಾರಿ ಪ್ರಕ್ರಿಯೆಗಳು ಆರಂಭಗೊಂಡರೂ ಮಧ್ಯೆ ಬೇರೆ ಬೇರೆ ವಿಘ್ನಗಳು ಕಾಮಗಾರಿಯ ವೇಗವಾಗಿ ಸಾಗದಂತೆ ತಡೆದವು. ಒಟ್ಟು 148 ಕಿ.ಮೀ. ಉದ್ದದ ನಾಲ್ಕು ಕಾರಿಡಾರ್‌ಗಳ ಈ ಯೋಜನೆಯಲ್ಲಿ ಮೆಜೆಸ್ಟಿಕ್‌ನಿಂದ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣ ಸಂಪರ್ಕಿಸುವ ಕಾರಿಡಾರ್–1 ಬಹಳ ಮಹತ್ವದ, ಜನರಿಗೆ ಹೆಚ್ಚು ಉಪಯೋಗವಾಗುವ ಕಾರಿಡಾರ್ ಆಗಿತ್ತು. ಆದರೆ, ಬಿಎಂಆರ್‌ಸಿಎಲ್‌ನ ಪತ್ರಕ್ಕೆ ಮನ್ನಣೆ ನೀಡಿದ ಸರ್ಕಾರಗಳು ಕಾರಿಡಾರ್–1 ಬದಲು, 2ರ ಕಾಮಗಾರಿ ಮೊದಲು ಆರಂಭಿಸುವಂತೆ ಸೂಚಿಸಿದ್ದವು.

ಅದರಂತೆ ಚಿಕ್ಕಬಾಣಾವರ ದಿಂದ ಬೆನ್ನಿಗಾನಹಳ್ಳಿ ಸಂಪರ್ಕಿಸುವ ಕಾರಿಡಾರ್–2ರ ಕಾಮಗಾರಿ ಆರಂಭಿಸಲಾಗಿತ್ತು. ಇದ್ದಿದ್ದರಲ್ಲಿ ಇದೊಂದೇ ಕಾಮಗಾರಿ ಪ್ರಗತಿಯಲ್ಲಿತ್ತು, ಶೇ 30ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಇನ್ನೊಂದು ವರ್ಷದ ಒಳಗೆ ಚಿಕ್ಕಬಾಣಾವರದಿಂದ ಯಶವಂತಪುರದವರೆಗೆ ರೈಲು ಸಂಚಾರ ಆರಂಭಿಸುವ ಗುರಿಯನ್ನು ಕೆ-ರೈಡ್ ಇಟ್ಟುಕೊಂಡಿತ್ತು. ಈ ಮಧ್ಯೆ ಎಲ್ ಆ್ಯಂಡ್ ಟಿ ಕಂಪನಿ ಗುತ್ತಿಗೆಯಿಂದ ಹೊರ ನಡೆದ ಕಾರಣ ಕಾಮಗಾರಿ ಸ್ಥಗಿತಗೊಂಡಿದೆ. ಇದಾಗಿ ಏಳು ತಿಂಗಳು ಕಳೆದರೂ ಕಾಮಗಾರಿಗೆ ಮರುಚಾಲನೆ ದೊರೆತಿಲ್ಲ.

ಕಾರಿಡಾರ್–1ರ ಅಷ್ಟೇ ಅಲ್ಲದೆ, ಕೆಂಗೇರಿ–ವೈಟ್‌ಫೀಲ್ಡ್ ಸಂಪರ್ಕದ ಕಾರಿಡಾರ್–3ರಲ್ಲಿ ಕೂಡ ಯಾವುದೇ ಪ್ರಗತಿ ಕಂಡಿಲ್ಲ. ಹೀಲಲಿಗೆ–ರಾಜಾನುಕುಂಟೆ ಸಂಪರ್ಕದ ಕಾರಿಡಾರ್–4ರ ಕಾಮಗಾರಿ ಟೆಂಡರ್ ಪ್ರಕ್ರಿಯೆ ಮುಗಿದು, ಜಮೀನು ಹಸ್ತಾಂತರ ಪ್ರಕ್ರಿಯೆ ನಡೆದಿದೆ.

‘ಚಿಕ್ಕಬಾಣಾವರದಿಂದ ಯಶವಂತಪುರದವರೆಗಿನ ನಿಲ್ದಾಣಗಳ ಕಾಮಗಾರಿ ನಡೆಯುತ್ತಿದೆ. ಹಳಿ ಕಾಮಗಾರಿ ನಡೆಸಬೇಕಾಗಿರುವವರು ಗುತ್ತಿಗೆಯಿಂದ ಹೊರಹೋಗುತ್ತಿರುವುದಾಗಿ ತಿಳಿಸಿ ಕೋರ್ಟ್‌ಗೆ ಹೋಗಿದ್ದಾರೆ. ಮರು ಟೆಂಡರ್ ಕರೆಯಲು ಒಪ್ಪಿಗೆ ಸಿಕ್ಕಿದೆ. ಟೆಂಡರ್ ಕರೆಯಬೇಕಿದೆ. ಕಾಮಗಾರಿ ಯಾವಾಗ ಮುಗಿಯಲಿದೆ ಎಂದು ಹೇಳಲು ಸದ್ಯಕ್ಕೆ ಸಾಧ್ಯವಿಲ್ಲ’ ಎಂದು ಕೆ-ರೈಡ್ ಅಧಿಕಾರಿಯೊಬ್ಬರು ತಿಳಿಸಿದರು.

‘ಬಿಎಸ್‌ಆರ್‌ಪಿ ಕಾಮಗಾರಿ ಸಾಗುತ್ತಿರುವ ಗತಿ ನೋಡಿದರೆ ದಶಕ ಕಳೆದರೂ ಪೂರ್ಣಗೊಳ್ಳುವ ಸಾಧ್ಯತೆ ಇಲ್ಲ. ಕಾಮಗಾರಿ ಕುಂಟುತ್ತಿರುವುದಲ್ಲ, ತೆವಳುತ್ತಿರುವುದನ್ನು ನೋಡಿದರೆ, ನನ್ನ ಜೀವಿತಾವಧಿಯಲ್ಲಿ ಉಪನಗರ ರೈಲು ಸಂಚರಿಸುವುದನ್ನು ನೋಡಲು ಆಗುವುದಿಲ್ಲ’ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳ ನಿರ್ಲಕ್ಷ್ಯ

‘ಬೆಂಗಳೂರು ಉಪನಗರ ರೈಲು ಯೋಜನೆ ನನೆಗುದಿಗೆ ಬೀಳಲು ಜನಪ್ರತಿನಿಧಿಗಳ ನಿರ್ಲಕ್ಷ್ಯವೇ ಕಾರಣ. ಪ್ರಚಾರಕ್ಕಾಗಿ ಗಿಮಿಕ್ ಮಾಡುವ ಬದಲು, ಕಾಲಕಾಲಕ್ಕೆ ಪ್ರಗತಿ ಪರಿಶೀಲನೆ ಮಾಡಿದ್ದರೆ, ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸಿದ್ದರೆ ಇಂಥ ಸ್ಥಿತಿ ಬರುತ್ತಿರಲಿಲ್ಲ’ ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ ರಾಜಕುಮಾರ್ ದುಗಾರ್ ದೂರಿದರು.

‘ಬಿಎಸ್‌ಆರ್‌ಪಿ ಯೋಜನೆ ಬಂದಾಗ ನಾವೇ ತಂದಿದ್ದು ಎಂದು ಹೇಳಿಕೊಂಡು ತಿರುಗಿದ್ದ ಇಬ್ಬರು ಸಂಸದರು ಆ ನಂತರ ಎಷ್ಟು ಬಾರಿ ಪ್ರಗತಿ ಪರಿಶೀಲಿಸಿದ್ದಾರೆ? ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಉತ್ತರ ಕ್ಷೇತ್ರದ ಸಂಸದರು ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿಎಸ್‌ಆರ್‌ಪಿ ಹಾದು ಹೋಗುತ್ತದೆ ಎಂಬುದನ್ನೇ ಮರೆತುಬಿಟ್ಟಿದ್ದಾರೆ’ ಎಂದು ಟೀಕಿಸಿದರು.

ಪ್ರಧಾನಿಯವರ ಮಾತು ಉಳಿಸುವ ಜವಾಬ್ದಾರಿ ಈ ಐವರು ಸಂಸದರದ್ದಾಗಿತ್ತು. ಅವರು ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ. ಇನ್ನು ರಾಜ್ಯಕ್ಕೆ ಬಂದರೆ ಮೂಲಸೌಕರ್ಯ ಇಲಾಖೆಯ ಅಡಿ ಈ ಯೋಜನೆ ಬರುತ್ತದೆ. ಆ ಇಲಾಖೆಯ ಸಚಿವರು ಕ್ರಿಯಾಶೀಲರು ಎಂದು ಹೆಸರಿದ್ದರೂ ಬಿಎಸ್‌ಆರ್‌ಪಿ ಬಗ್ಗೆ ಮುತುವರ್ಜಿ ವಹಿಸಿಲ್ಲ. ಎರಡೂವರೆ ವರ್ಷಗಳಲ್ಲಿ ಐದು ಬಾರಿ ಪ್ರಗತಿ ಪರಿಶೀಲಿಸಿದ್ದರೆ ಹೆಚ್ಚು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಸಿ.ಎಂ ಜೊತೆ ಬಿಜೆಪಿಯ ರವಿಕುಮಾರ್ ಪ್ರಯಾಣ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಕಾರಿನಲ್ಲಿ ವಿಧಾನಸೌಧಕ್ಕೆ ಬುಧವಾರ ಬಂದಿದ್ದು ಗಮನ ಸೆಳೆಯಿತು.

ಗಂಭೀರ ವಿಚಾರವೊಂದರ ಕುರಿತು ಮನವಿ ಸಲ್ಲಿಸಲು ರವಿಕುಮಾರ್ ಅವರು ಮುಖ್ಯಮಂತ್ರಿ ನಿವಾಸ ‘ಕಾವೇರಿ’ಗೆ ತೆರಳಿದ್ದರು. ಅಲ್ಲಿಂದ ಮುಖ್ಯಮಂತ್ರಿಯ ಜೊತೆ ಅವರ ಕಾರಿನಲ್ಲಿ ವಿಧಾನಸೌಧಕ್ಕೆ ತೆರಳಿ ವಿವರ ನೀಡಿದ್ದಾರೆ ಎಂದು ಗೊತ್ತಾಗಿದೆ.

ರಾಜ್ಯದಲ್ಲಿ 30ಕ್ಕೂ ಹೆಚ್ಚು ಮಕ್ಕಳು ಮತ್ತು ಯುವಜನ ಅತಿ ವಿರಳವಾದ ‘ಗುಚೆರ್’ ಎಂಬ ಕಾಯಿಲೆಯಿಂದ ಬಳಲುತ್ತಿದ್ದು, ಇದರ ಚಿಕಿತ್ಸೆಗೆ ಮಾಸಿಕ ಲಕ್ಷಾಂತರ ಹಣ ವೆಚ್ಚವಾಗುತ್ತಿದೆ. ಈ ಕಾಯಿಲೆಯಿಂದ ಬಳಲುತ್ತಿರುವವರಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕು ಹಾಗೂ ಕಾಯಂ ಆಗಿ ಅನುದಾನ ಮೀಸಲಿಡುವಂತೆ ಮನವಿ ಸಲ್ಲಿಸಲು ರವಿಕುಮಾರ್ ಅವರು ಬುಧವಾರ ಸಂಜೆ 3.50ರ ವೇಳೆಗೆ ಮುಖ್ಯಮಂತ್ರಿಯ ನಿವಾಸಕ್ಕೆ ತೆರಳಿದ್ದರು.

ಆಗ ಮುಖ್ಯಮಂತ್ರಿ, ಮಾತನಾಡೋಣ ಬನ್ನಿ ಎಂದು ಆಹ್ವಾನಿಸಿದ ಕಾರಣಕ್ಕೆ ವಿಧಾನಸೌಧದವರೆಗೆ ಮುಖ್ಯಮಂತ್ರಿಯ ಕಾರಿನಲ್ಲೇ ರವಿಕುಮಾರ್ ಅವರು ಪ್ರಯಾಣಿಸಿ ಸಮಸ್ಯೆ ಬಗ್ಗೆ ವಿವರಿಸಿದರು ಎಂದು ಗೊತ್ತಾಗಿದೆ.

ಪಾರ್ಶ್ವವಾಯು ಜಾಗೃತಿ



ಕೆ.ಆರ್.ಪುರ: ವೈಟ್‌ಫೀಲ್ಡ್‌ನ ಮೆಡಿಕವರ್ ಆಸ್ಪತ್ರೆಯಲ್ಲಿ ವಿಶ್ವ ಪಾರ್ಶ್ವವಾಯು ದಿನದ ಅಂಗವಾಗಿ ಪಾರ್ಶ್ವವಾಯು ಬಗ್ಗೆ ಜಾಗೃತಿ ಮೂಡಿಸಲಾಯಿತು.

ಪಾರ್ಶ್ವವಾಯು ಸಂಭವಿಸಿದಾಗ ಯಾವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆರೋಗ್ಯ ಶೈಲಿ, ನಿಯಮಿತ ವ್ಯಾಯಾಮ, ಯೋಗ ಮಾಡುವುದು. ಸಮತೋಲನ ಆಹಾರ ಪದ್ಧತಿ ಬಗ್ಗೆ ತಿಳಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ವೈಟ್ ಫೀಲ್ಡ್ ವಿಭಾಗದ ಎಸಿಪಿ ರೀನಾ ಸುವರ್ಣ, ‘ಸಣ್ಣ ಕಾಯಿಲೆಯನ್ನು ನಿರ್ಲಕ್ಷ್ಯ ಮಾಡಿದರೆ ದೊಡ್ಡ ಕಾಯಿಲೆಗೆ ಕಾರಣವಾಗಬಹುದು. ಆರೋಗ್ಯದ ಬಗ್ಗೆ ಸದಾ ಕಾಳಜಿ ವಹಿಸಿ’ ಎಂದರು.

ಆಸ್ಪತ್ರೆಯ ಮುಖ್ಯಸ್ಥ ಕೃಷ್ಣಮೂರ್ತಿ, ಉಪಾಧ್ಯಕ್ಷೆ ಡಾ.ಸಮರ್ಪಿತಾ, ಡಾ.ದೀಪಕ್, ಡಾ.ಗಣೇಶ್ ಮೂರ್ತಿ, ಡಾ.ಸುರಭಿ, ಡಾ.ರಶ್ಮಿ, ಡಾ.ಕುಶಾಲ್, ಡಾ.ನಿತ್ಯ ಅಚ್ಚಯ್ಯ ಇದ್ದರು.

ವಿದೇಶಿಯರ ಬಂಧನ ಕೇಂದ್ರ ಉದ್ಘಾಟನೆ ಇಂದು

ಬೆಂಗಳೂರು: ದೊಡ್ಡಗುಬ್ಬಿ ಗ್ರಾಮದ ಆರ್‌ಆರ್‌ಸಿ ರಸ್ತೆ ಹೋಂ ಆಫ್ ಹೋಪ್ಸ್‌ನಲ್ಲಿ ನಿರ್ಮಿಸಿರುವ ವಿದೇಶಿಯರ ಬಂಧನ ಕೇಂದ್ರವನ್ನು ಅ.30ರಂದು ಸಂಜೆ 4.30ಕ್ಕೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಉದ್ಘಾಟಿಸಲಿದ್ದಾರೆ.

ನ್ಯೂ ಆರ್ಕ್ ಮಿಷನ್ ಆಫ್ ಇಂಡಿಯಾ ಸಂಸ್ಥೆಯು ಸರ್ಕಾರದ ಸಹಕಾರದೊಂದಿಗೆ ಮೂರು ವರ್ಷಗಳಿಂದ ಸುಮಾರು 30 ಬೆಡ್‌ಗಳೊಂದಿಗೆ ಸಣ್ಣದಾಗಿ ವಿದೇಶಿಯರ ಬಂಧನ ಕೇಂದ್ರ ನಡೆಸುತ್ತಿತ್ತು. ಈಗ ಅದನ್ನು 200 ಹಾಸಿಗೆಯ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ ಎಂದು ನ್ಯೂ ಆರ್ಕ್ ಮಿಷನ್ ಆಫ್ ಇಂಡಿಯಾ ಸಂಸ್ಥಾಪಕ ಆಟೊ ರಾಜ ತಿಳಿಸಿದರು.

ಪಾಸ್‌ಪೋರ್ಟ್ ಅವಧಿ ಮುಗಿದ ಮತ್ತು ಅಕ್ರಮವಾಗಿ ವಾಸವಾಗಿರುವ ವಿದೇಶಿಯರನ್ನು ಪೊಲೀಸರು ಬಂಧಿಸಿದಾಗ ಅವರಿಗೆ ಇಲ್ಲಿ ವಸತಿ ಕಲ್ಪಿಸಲಾಗುತ್ತದೆ. ಬಳಿಕ ಎಫ್‌ಆರ್‌ಆರ್‌ಒ ಮೂಲಕ ಅವರ ದೇಶಕ್ಕೆ ಕಳುಹಿಸಲಾಗುತ್ತಿದೆ. ಇಲ್ಲಿಯವರೆಗೆ 325ಕ್ಕೂ ಅಧಿಕ ವಿದೇಶಿಯರನ್ನು ಈ ರೀತಿ ಗಡಿಪಾರು ಮಾಡಲಾಗಿದೆ ಎಂದರು.

ನಗರದಲ್ಲಿ ಇಂದು

ಅವರ್ ಡಿಜಿಟಲ್ ಫ್ಯೂಚರ್ ಫೆಸ್ಟ್: ಆಯೋಜನೆ ಮತ್ತು ಸ್ಥಳ: ಇನ್ಫೊಸಿಸ್ ಸೈನ್ಸ್ ಫೌಂಡೇಷನ್, ಬೆಳಿಗ್ಗೆ 8.45

ರಾಷ್ಟ್ರೀಯ ವಿಜ್ಞಾನ ವಿಚಾರಗೋಷ್ಠಿ–2025: ‘ಕ್ವಾಂಟಮ್ ಯುಗದ ಪ್ರಾರಂಭ–ಸಾಮರ್ಥ್ಯಗಳು ಮತ್ತು ಸವಾಲುಗಳು’ ಅತಿಥಿಗಳು: ಉರ್ಬಸಿ ಸಿನ್ಹಾ, ಪಿ.ಸಿ. ದೇಶಮುಖ್, ಆಯೋಜನೆ: ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯಗಳ ಪರಿಷತ್ತು, ಸ್ಥಳ: ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಬಾ ರಸ್ತೆ, ಬೆಳಿಗ್ಗೆ 9

ವಿಶ್ವ ಆಹಾರ ದಿನಾಚರಣೆ: ಉದ್ಘಾಟನೆ: ಆರ್. ಗಿರೀಶ್, ಎಸ್. ನಂದಾ, ಅತಿಥಿಗಳು: ಸಿ.ಎನ್. ಶಿವಪ್ರಕಾಶ್, ಮೋಹನ್ ನಾಯಕ್, ಚಂದ್ರಶೇಖರ್ ಎಂ. ಬಿರಾದಾರ್, ಅಧ್ಯಕ್ಷತೆ: ಎ.ಬಿ. ಪಾಟೀಲ್, ‘ಜೀವಮಾನ ಸಾಧನೆ ಪ್ರಶಸ್ತಿ’ ಸ್ವೀಕರಿಸುವವರು: ಎಸ್.ಎಂ. ಶಾಂತವೀರಯ್ಯ, ಅಯೋಜನೆ ಮತ್ತು ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

‘ಕ್ರಿಸಿಂಡು’, ‘ಬ್ರಹ್ಮಾಸ್ತ್ರ’ ಉತ್ಸವ: ರುಕ್ಮಿಣಿ ವಸಂತ್, ವಿರಾಟ್, ಆಯೋಜನೆ ಮತ್ತು ಸ್ಥಳ: ಸಿಂಧಿ ಕಾಲೇಜು, ಬೆಳಿಗ್ಗೆ 10.30



ರುಕ್ಮಿಣಿ ವಸಂತ್

ಸುಮಂಗಲಿ ಸೇವಾ ಆಶ್ರಮದ ಸುವರ್ಣ ಸಂಭ್ರಮ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಬಸವಲಿಂಗ ಪಟ್ಟದೇವರು, ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ವಿ. ಸೋಮಣ್ಣ, ಬಿ.ಎಸ್. ಸುರೇಶ್, ಕೆ. ನಾರಾಯಣ, ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಉಪಸ್ಥಿತಿ: ಎಸ್.ಜಿ. ಸುಶೀಲಮ್ಮ, ಆಯೋಜನೆ: ಸುಮಂಗಲಿ ಸೇವಾ ಆಶ್ರಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಬೆಳ್ಳಿ ಮಹೋತ್ಸವ: ಅಧ್ಯಕ್ಷತೆ: ಎನ್. ವಿನಯ ಹೆಗ್ಡೆ, ಅತಿಥಿಗಳು: ಶಶಿ ಶೇಖರ್ ವೆಂಪತಿ, ಕೆ.ಜಿ. ಸುರೇಶ್, ಎನ್.ಆರ್. ಶೆಟ್ಟಿ, ಆಯೋಜನೆ ಮತ್ತು ಸ್ಥಳ: ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಆವರಣ, ಯಲಹಂಕ, ಬೆಳಿಗ್ಗೆ 11

ಪ್ರಸನ್ನ ಅವರ ‘ನಾಟಕವು ಬದುಕಿನೊಳಗೋ ಬದುಕು ನಾಟಕದೊಳಗೋ’ ಕಲಾಕೃತಿಗಳ ಪ್ರದರ್ಶನಕ್ಕೆ ಚಾಲನೆ: ರವೀಂದ್ರ ತ್ರಿಪಾಠಿ, ಅಧ್ಯಕ್ಷತೆ: ಪ.ಸ. ಕುಮಾರ್, ಅತಿಥಿಗಳು: ಅರುಣ್ ರಾಮನ್, ಆರತಿ ಎಚ್.ಎನ್., ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 4

ದಾಸರ ಪದಗಳ ಗಾಯನ: ಅವನಿ ಭಟ್, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಎನ್. ಮೋಹನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 5.15

‘ಕಾಲಜ್ಞಾನಿ ಕನಕ’ ನಾಟಕ ಪ್ರದರ್ಶನ: ರಚನೆ: ಕಿ.ರಂ. ನಾಗರಾಜ, ನಿರ್ದೇಶನ: ಸಿಜಿಕೆ, ಮರು ನಿರ್ದೇಶನ: ಟಿ. ರಘು, ಆಯೋಜನೆ: ಪ್ರಯೋಗರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

32ನೇ ವಾರ್ಷಿಕ ಸಂಗೀತೋತ್ಸವ: ಗಾಯನ: ಭರತ್ ಸುಂದರ್, ಪಿಟೀಲು: ಕೇಶವ್ ಮೋಹನ್ ಕುಮಾರ್, ಮೃದಂಗ: ಅರ್ಜುನ್ ಕುಮಾರ್, ಖಂಜೀರಾ: ಜಿ. ಗುರು ಪ್ರಸನ್ನ, ಆಯೋಜನೆ: ನಾದಸುರಭಿ, ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಆವರಣ, ಕೋರಮಂಗಲ, ಸಂಜೆ 6

‘ವಿಜಯದಾಸರ ಚರಿತ್ರೆ ಮತ್ತು ಕಾರ್ತೀಕ ಮಾಸ ಮಹಾತ್ಮೆ’ ಧಾರ್ಮಿಕ ಪ್ರವಚನ: ಕಾಂತಾಚಾರ್ಯ, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ, ಐದನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ಸಂಜೆ 6

‘ಆಧುನಿಕ ಯಾಂತ್ರಿಕ ಬದುಕಿನಲ್ಲಿ ಮಾನಸಿಕ ಆರೋಗ್ಯದ ಮಹತ್ವ’ ಉಪನ್ಯಾಸ: ಡಾ.ಸಿ.ಎಲ್. ಶಿವಮೂರ್ತಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿದಾಸ ಝೇಂಕಾರ: ಗಾಯನ: ಶ್ರೀಲಕ್ಷ್ಮೀ ಹರೀಶ್, ಕೀ–ಬೋರ್ಡ್: ರಾಜೇಂದ್ರ ಬೆಂಡೆ, ತಬಲಾ: ಶ್ರೀನಿವಾಸ ಕೃಷ್ಣ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಬನಶಂಕರಿ ಆರನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನ.1ರಿಂದ ಶ್ವಾನ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿ ಕೆನಲ್ ಕ್ಲಬ್ ಹಾಗೂ ಬೆಂಗಳೂರು ಕೆನೈನ್ ಕ್ಲಬ್‌ನಿಂದ ಅಖಿಲ ಭಾರತ ಶ್ವಾನ ಪ್ರದರ್ಶನ ಹಾಗೂ ಚಾಂಪಿಯನ್‌ಶಿಪ್ ಅನ್ನು ಯಲಹಂಕ ಈಶಾ ಫಾರ್ಮ್ಸ್‌ನಲ್ಲಿ ನ.1 ಮತ್ತು 2ರಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಆಯೋಜಿಸಲಾಗಿದೆ.

ಸುಮಾರು 50 ತಳಿಯ 450ರಿಂದ 500 ಶ್ವಾನಗಳು ಪ್ರದರ್ಶನದಲ್ಲಿ ಇರಲಿವೆ. ಉತ್ತರ ಕರ್ನಾಟಕದ ಅತ್ಯಂತ ಜನಪ್ರಿಯ ತಳಿಯಾಗಿರುವ ಮುಧೋಳ ನಾಯಿಗಳು ಗಮನ ಸೆಳೆಯಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಾಹಿತಿಗೆ 9845553226, 9538583827 ಸಂಪರ್ಕಿಸಬಹುದು.

ಕೇಂದ್ರದ ಉದ್ಯಮಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಚ್ಚರಿಕೆ

‘ರಾಜ್ಯೋತ್ಸವ ಆಚರಿಸದಿದ್ದರೆ ಕ್ರಮಕ್ಕೆ ಶಿಫಾರಸು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯೋತ್ಸವ ಆಚರಣೆಗೆ ಅವಕಾಶ ನೀಡದ ಕೇಂದ್ರ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಎಚ್ಚರಿಸಿದ್ದಾರೆ.

ರಾಜ್ಯೋತ್ಸವ ಆಚರಣೆಗೆ ಅನುಮತಿ ನೀಡದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಸಂಸ್ಥೆಯ (ಬಿ.ಎಚ್.ಇ.ಎಲ್) ನಡೆ ಖಂಡಿಸಿರುವ ಅವರು, ಈ ಬಗ್ಗೆ ಸಂಸ್ಥೆಯ ಉನ್ನತ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

‘ಸಂಸ್ಥೆಯ ಆಡಳಿತ ವರ್ಗದ ಧೋರಣೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ. ನೌಕರರ ಸಂಘಟನೆಗಳಿಗೆ ಯಾವುದೇ ಷರತ್ತು ವಿಧಿಸದೆ, ರಾಜ್ಯೋತ್ಸವ ಆಚರಣೆಗೆ ಅನುಮತಿ ನೀಡುವುದು ನೆಲದ ಭಾಷೆಗೆ ಗೌರವ ನೀಡುವ ವಿಷಯವಾಗಿದೆ. ಸಂಸ್ಥೆ ಅನುಮತಿ ನೀಡಲು ನಿರಾಕರಿಸಿದಲ್ಲಿ, ರಾಜ್ಯ ಸರ್ಕಾರವು ತನ್ನ ಅಧಿಕಾರ ವ್ಯಾಪ್ತಿಯನ್ನು ಸಂಸ್ಥೆಗೆ ಮನನ ಮಾಡಿಕೊಡಬೇಕಾಗುತ್ತದೆ’ ಎಂದಿದ್ದಾರೆ.

‘ಯಾವುದೇ ಸಂಸ್ಥೆ ನವೆಂಬರ್ 1 ರಂದು ಕರ್ನಾಟಕ ರಾಜ್ಯೋತ್ಸವ ಆಚರಿಸಲು ಅನುಮತಿ ನಿರಾಕರಿಸಿದಲ್ಲಿ, ಖುದ್ದಾಗಿ ಸಂಸ್ಥೆಗೆ ಭೇಟಿ ನೀಡಿ ಕ್ರಮಕ್ಕೆ ಆಗ್ರಹಿಸುತ್ತೇನೆ’ ಎಂದು ಹೇಳಿದ್ದಾರೆ.

‘ಪ್ರಾಧಿಕಾರದ ನಿಯೋಗ ಬಿ.ಎಚ್.ಇ.ಎಲ್ ಸಂಸ್ಥೆಗೆ ಭೇಟಿ ನೀಡಿ, ಆಡಳಿತದಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನೂ ನಡೆಸಲಿದೆ. ಕನ್ನಡ ಕಡೆಗಣಿಸಿರುವುದು ಕಂಡುಬಂದಲ್ಲಿ ಸೂಕ್ತ ಕ್ರಮಕ್ಕೆ ಮುಂದಾಗಲಿದೆ’ ಎಂದಿದ್ದಾರೆ.

‘ಕರ್ನಾಟಕದ ನೆಲ–ಜಲ, ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡು ವ್ಯವಹಾರ ನಡೆಸುವ ಕೇಂದ್ರೋದ್ಯಮಗಳು, ಮೊದಲು ಇಲ್ಲಿನ ಭಾಷೆಗೆ ಗೌರವ ಕೊಡಬೇಕು. ಈ ಸಂಸ್ಥೆಗಳು ಒಕ್ಕೂಟ ತತ್ತ್ವವನ್ನು ಗೌರವಿಸುವುದು ವಿಫಲವಾದಲ್ಲಿ, ಅಂತಹ ವೈಫಲ್ಯಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಲಾಗುವುದು’ ಎಂದು ಹೇಳಿದ್ದಾರೆ.

‘ಸಿಎಜಿ ಕಚೇರಿಯಲ್ಲಿ ಕನ್ನಡ ಕಡೆಗಣನೆ’



ಪುರುಷೋತ್ತಮ ಬಿಳಿಮಲೆ

‘ಅನ್ಯ ಭಾಷಿಕ ಸಿಬ್ಬಂದಿಯಿಂದ ತುಂಬಿರುವ ಬೆಂಗಳೂರಿನ ಮಹಾಲೇಖಪಾಲರ (ಸಿಎಜಿ) ಕಚೇರಿ, ಕನ್ನಡಕ್ಕೆ ಮೊದಲ ಆದ್ಯತೆ ನೀಡುವುದನ್ನು ರೂಢಿಸಿಕೊಳ್ಳಬೇಕು. ಅನ್ಯ ಭಾಷಿಕ ಸಿಬ್ಬಂದಿ ಸ್ಥಳೀಯ ಸರ್ಕಾರಿ ನೌಕರರೊಂದಿಗೆ ವ್ಯವಹರಿಸುವಾಗ ಕನ್ನಡ ಬಳಸುವುದು ಅನಿವಾರ್ಯ. ಪ್ರಾಧಿಕಾರದ ನಿಯೋಗವು ಕಳೆದ ಭೇಟಿಯ ಸಂದರ್ಭದಲ್ಲಿ ಸ್ಪಷ್ಟ ಸೂಚನೆ ನೀಡಿದರೂ, ಈವರೆಗೂ ರಚನಾತ್ಮಕ ಬದಲಾವಣೆ ಕಾಣದಿರುವುದು ವಿಷಾದನೀಯ’ ಎಂದು ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಈ ಬಗ್ಗೆ ಪ್ರಧಾನ ಮಹಾಲೇಖಪಾಲ ರಾಜೀವ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ. ‘ಮಹಾಲೇಖಪಾಲರ ಕಚೇರಿಯಲ್ಲಿ ಕೂಡಲೇ ಕನ್ನಡ ಕಲಿಕಾ ಘಟಕಗಳನ್ನು ತೆರೆಯಬೇಕು. ಜಾಲತಾಣಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು. ರಾಜ್ಯದೊಳಗೆ ವ್ಯವಹರಿಸುವ ದೈನಂದಿನ ಪತ್ರಗಳಲ್ಲಿ ಕನ್ನಡವನ್ನು ಬಳಸಬೇಕು. ತ್ರಿಭಾಷಾ ಸೂತ್ರವನ್ನು ಕಡ್ಡಾಯವಾಗಿ ಅನುಸರಿಸಬೇಕು. ಇದನ್ನು ಪರಿಶೀಲಿಸಲು ಪ್ರಾಧಿಕಾರದ ನಿಯೋಗ ಶೀಘ್ರದಲ್ಲೇ ಮಹಾಲೇಖಪಾಲರ ಕಚೇರಿಗೆ ಭೇಟಿ ನೀಡಲಿದೆ’ ಎಂದು ತಿಳಿಸಿದ್ದಾರೆ.

ಬಿಎಚ್‌ಇಎಲ್‌ನಲ್ಲಿ ಕನ್ನಡ ರಾಜ್ಯೋತ್ಸವ: ನೋಟಿಸ್

ಕೇಂದ್ರ ಸರ್ಕಾರ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್ (ಬಿ.ಎಚ್.ಇ.ಎಲ್) ಆವರಣದಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವ ಆಚರಣೆಗೆ ಅನುಮತಿ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಬಿಎಚ್‌ಇಎಲ್ ಆಡಳಿತ ಮಂಡಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ‘ಬಿಎಚ್‌ಇಎಲ್ ನೌಕರರ ಕನ್ನಡ ಸಂಘ’ದ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಕೆಲ ಕಾಲ ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ ಬಿಎಚ್‌ಇಎಲ್ ಮುಖ್ಯ ಆಡಳಿತಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಗುರುವಾರಕ್ಕೆ (ಅ.30)ಕ್ಕೆ ಮುಂದೂಡಿತು.

ಏನಿದು ಅರ್ಜಿ?: ‘ಬಿಎಚ್‌ಇಎಲ್ ಆವರಣದಲ್ಲಿ 42 ವರ್ಷಗಳಿಂದ ಕನ್ನಡ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಿಕೊಂಡು ಬರಲಾಗುತ್ತಿದೆ. ಇದಕ್ಕೆ ಪ್ರತಿ ವರ್ಷ ಆಡಳಿತ ಮಂಡಳಿ ಆರ್ಥಿಕ ನೆರವು ನೀಡುತ್ತಾ ಬಂದಿದೆ. ಆದರೆ, ಈ ಬಾರಿ ನಮ್ಮ ಮನವಿಯನ್ನು ಪರಿಗಣಿಸಲಾಗಿಲ್ಲ. ನವೆಂಬರ್ 1ರಂದು ಬಿಎಚ್‌ಇಎಲ್ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ, ಕನ್ನಡ ಧ್ವಜಾರೋಹಣಕ್ಕೆ ಅನುಮತಿ ನೀಡಬೇಕು ಹಾಗೂ ಅದಕ್ಕೆ ಬೇಕಾದ ಅನುದಾನವನ್ನು ಮಂಜೂರು ಮಾಡಲು ಆಡಳಿತ ಮಂಡಳಿಗೆ ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಆರೋಪಿ ಮೇಲೆ ಕ್ರಮಕ್ಕೆ ಒತ್ತಾಯ

ಬೆಂಗಳೂರು: ಬ್ರೆಜಿಲ್‌ನ ರೂಪದರ್ಶಿಯೊಬ್ಬರಿಗೆ ಕಿರುಕುಳ ನೀಡಿದ ಆರೋಪಿಯನ್ನು ಬಂಧಿಸಿ, ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮಹಿಳಾ ಆಯೋಗ ಒತ್ತಾಯಿಸಿದೆ.

ಈ ಬಗ್ಗೆ ಉತ್ತರ ವಿಭಾಗದ ಡಿಸಿಪಿಗೆ ಪತ್ರ ಬರೆದಿದ್ದು, ‘ಆರ್.ಟಿ. ನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವಾಸವಿದ್ದ ರೂಪದರ್ಶಿಯು ಆನ್‌ಲೈನ್ ಮೂಲಕ ದಿನಸಿ ಪದಾರ್ಥಗಳನ್ನು ಮನೆಗೆ ತರಿಸಲು ಬುಕ್ ಮಾಡಿದ್ದರು. ಅವರನ್ನು ಮನೆಗೆ ತಲುಪಿಸಲು ತೆರಳಿದ್ದ ಕುಮಾರ್ ರಾವ್ ಪವಾರ್ ರೂಪದರ್ಶಿಯ ಖಾಸಗಿ ಭಾಗಗಳನ್ನು ಮುಟ್ಟಿ ಕಿರುಕುಳ ನೀಡಿದ್ದ. ಇದರಿಂದ ಆತಂಕಕ್ಕೆ ಒಳಗಾಗಿದ್ದ ರೂಪದರ್ಶಿ ಆತನನ್ನು ಮನೆಯಿಂದ ಹೊರಕ್ಕೆ ತಳ್ಳಿದ್ದರು’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಕೆಲ ದಿನಗಳ ನಂತರ ಸಂತ್ರಸ್ತೆಯು ಈ ವಿಚಾರವನ್ನು ಸಹದ್ಯೋಗಿ ಕಾರ್ತಿಕ್ ಅವರೊಂದಿಗೆ ಹಂಚಿಕೊಂಡಿದ್ದರು. ಕಾರ್ತಿಕ್ ಅವರು ಈ ಬಗ್ಗೆ ಆರ್.ಟಿ. ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ ಎಂದು ವರದಿಯಾಗಿದೆ. ಈ ಪ್ರಕರಣವನ್ನು ಕಾನೂನು ಪ್ರಕಾರ ಪರಿಶೀಲಿಸಿ, ಕ್ರಮ ಕೈಗೊಂಡು ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕು’ ಎಂದು ಪತ್ರದಲ್ಲಿ ಸೂಚಿಸಲಾಗಿದೆ.

ಚಿಟಿಕೆ ಸುದ್ದಿ

ಮೇಕೆದಾಟು ನ.6ಕ್ಕೆ ವಿಚಾರಣೆ



ನವದೆಹಲಿ: ಪ್ರಸ್ತಾವಿತ ಮೇಕೆದಾಟು ಯೋಜನೆ ಕುರಿತ ಅರ್ಜಿಯ ವಿಚಾರಣೆಯನ್ನು ನವೆಂಬರ್ 6ಕ್ಕೆ ಸುಪ್ರೀಂ ಕೋರ್ಟ್ ಮುಂದೂಡಿದೆ.

ಅರ್ಜಿಯ ತುರ್ತು ವಿಚಾರಣೆ ನಡೆಸಬೇಕು ಎಂದು ಕರ್ನಾಟಕ ಸರ್ಕಾರವು ಕೋರಿತ್ತು. ದೀಪಾವಳಿ ಬಳಿಕ ವಿಸ್ತೃತ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ಭರವಸೆ ನೀಡಿತ್ತು. ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠವು ಬುಧವಾರ ವಿಚಾರಣೆ ನಡೆಸಬೇಕಿತ್ತು. ಬೇರೆ ಪ್ರಕರಣ ವೊಂದರ ಬಗ್ಗೆ ಸಾಂವಿಧಾನಿಕ ಪೀಠದಲ್ಲಿ ವಿಚಾರಣೆ ಇದ್ದ ಕಾರಣ ಮೇಕೆದಾಟು ಅರ್ಜಿಯ ವಿಚಾರಣೆ ನಡೆಸಲಿಲ್ಲ. 6ರಂದು ವಿಚಾರಣೆಗೆ ಪಟ್ಟಿ ಮಾಡಲಾಯಿತು.

‘ಆರೈಕೆದಾರರ ಶ್ರೇಯೋಭಿವೃದ್ಧಿ ಅಗತ್ಯ’

ಅಂಗವಿಕಲರ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರನ್ನು ಆರೈಕೆ ಮಾಡುವವರ ಶ್ರೇಯೋಭಿವೃದ್ಧಿಗೆ ಸರ್ಕಾರ ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ತಿಳಿಸಿದರು.

ಬಾಲಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ಆರೈಕೆದಾರರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಅಂಗವಿಕಲರನ್ನು, ನಿಧಾನ ಕಲಿಕೆಯ ಮಕ್ಕಳನ್ನು ಆರೈಕೆ ಮಾಡುವುದು ಸುಲಭದ ಮಾತಲ್ಲ. ಅವರನ್ನು ನೋಡಿಕೊಳ್ಳುವುದರಲ್ಲೇ ಜೀವನ ಸವೆದು ಹೋಗುತ್ತದೆ. ವೈಯಕ್ತಿಕ ಜೀವನದ ನಲಿವನ್ನು ಈ ಮಕ್ಕಳಿಗಾಗಿ ಆರೈಕೆದಾರರು ಮುಡಿಪಾಗಿಟ್ಟಿರುತ್ತಾರೆ ಎಂದರು.

‘ಸದೃಢ ಆರೈಕೆದಾರರು–ಸದೃಢ ಸಮಾಜ’ ಎಂಬ ಘೋಷವಾಕ್ಯ ದೊಂದಿಗೆ ಆರೈಕೆದಾರರ ದಿನವನ್ನು ಆಚರಿಸ ಲಾಗುತ್ತಿದೆ. ನಿಧಾನ ಕಲಿಕೆಯ ಮಕ್ಕಳನ್ನು ಆರೈಕೆ ಮಾಡುವ ಪೋಷಕರಿಗೆ ತಿಂಗಳ ಭತ್ಯೆ ನೀಡುವ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ ಎಂದರು. ಬೆಂಗಳೂರಿನಲ್ಲಿ ಈ ಮಕ್ಕಳ ಸಬಲೀಕರಣಕ್ಕಾಗಿ ‘ಪರ್ಪಲ್ ಫೆಸ್ಟ್’ ಕಾರ್ಯಕಮವನ್ನು ಡಿಸೆಂಬರ್ 5, 6, 7ರಂದು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಮಾಜಿ ಆಯುಕ್ತ ರಾಜಣ್ಣ ಪ್ರಾಸ್ತಾವಿಕವಾಗಿ ಮಾತನಾಡಿ, ‘2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ವಿಶೇಷ ಬೆಂಬಲ ಅಗತ್ಯ ಇರುವವರು 13 ಲಕ್ಷ ಜನರಿದ್ದಾರೆ. ತೀವ್ರ ಪ್ರಮಾಣದ ಅಂಗವಿಕಲತೆ ಹೊಂದಿರುವವರು 3 ಲಕ್ಷ ಇದ್ದಾರೆ’ ಎಂದು ವಿವರ ನೀಡಿದರು.

ನಿಮ್ಹಾನ್ಸ್ ಹಿರಿಯ ನಿವೃತ್ತ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, ಮನೋವೈದ್ಯ ಡಾ. ಜಗದೀಶ ತೀರ್ಥಹಳ್ಳಿ, ಬೆಂಗಳೂರು ಚಾಣಕ್ಯ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿ ಡಾ.ಎಂ.ಕೆ. ಶ್ರೀಧರ್, ಮಾನಸಿಕ ಆರೋಗ್ಯ ಉಪ ನಿರ್ದೇಶಕಿ ಡಾ. ರಜನಿ, ಇಲಾಖೆಯ ಉಪ ನಿರ್ದೇಶಕಿಅಶ್ವಥಮ್ಮ, ಬಾಲಭವನ ಸೊಸೈಟಿ ನಿರ್ದೇಶಕ ಬಿ.ಆರ್. ನಾಯ್ಡು ಉಪಸ್ಥಿತರಿದ್ದರು.



ವಿಶ್ವ ಆರೈಕೆದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಆರೈಕೆದಾರರರಿಗೆ ಗೌರವಿಸಿ ಸನ್ಮಾನಿಸಲಾಯಿತು. ಪ್ರಜಾವಾಣಿ ಚಿತ್ರ

ದರ್ಗಾ, ಚಿಕ್ಕಣ್ಣ, ಕಪ್ಪಣ್ಣ, ಕಸ್ತೂರಿ ಶಂಕರ್‌ಗೆ ಪ್ರಶಸ್ತಿ


ಪ್ರಜಾವಾಣಿ ವಾರ್ತೆ



ರಂಜಾನ್ ದರ್ಗಾ



ಕಾ.ತ. ಚಿಕ್ಕಣ್ಣ



ಶ್ರೀನಿವಾಸ ಜಿ.ಕಪ್ಪಣ್ಣ



ಕಸ್ತೂರಿ ಶಂಕರ್

ಬೆಂಗಳೂರು: ಸಿ.ಸೋಮಶೇಖರ್–ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನವು ಜೀವಮಾನದ ಸಾಧನೆಗಾಗಿ ನೀಡುವ ‘ಸಂಸ್ಕೃತಿ ಸಂಗಮ’ ಪ್ರಶಸ್ತಿಗೆ 2025ನೇ ಸಾಲಿನಲ್ಲಿ ಒಂದು ಸಂಸ್ಥೆ ಮತ್ತು ನಾಲ್ವರು ಸಾಧಕರನ್ನು ಆಯ್ಕೆ ಮಾಡಿದೆ.

ಜಾನಪದ ಸಾಹಿತ್ಯ ಪ್ರಶಸ್ತಿಗೆ ರಾಮನಗರದ ಕರ್ನಾಟಕ ಜಾನಪದ ಪರಿಷತ್ತನ್ನು (ಜಾನಪದ ಲೋಕ) ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಸಿ. ಸೋಮಶೇಖರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಚನ ಸಾಹಿತ್ಯ ಪ್ರಶಸ್ತಿಗೆ ಬರಹಗಾರ ರಂಜಾನ್ ದರ್ಗಾ, ದಾಸ ಸಾಹಿತ್ಯ ಪ್ರಶಸ್ತಿಗೆ ಲೇಖಕ ಕಾ.ತ. ಚಿಕ್ಕಣ್ಣ, ಸಾಂಸ್ಕೃತಿಕ ಸಂಘಟನೆ ಪ್ರಶಸ್ತಿಗೆ ಸಂಘಟಕ ಶ್ರೀನಿವಾಸ ಜಿ. ಕಪ್ಪಣ್ಣ, ಸಂಗೀತ ಪ್ರಶಸ್ತಿಗೆ ಗಾಯಕಿ ಕಸ್ತೂರಿ ಶಂಕರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಗಾಂಧಿ ಭವನದಲ್ಲಿ ಅ.31ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡುವರು. ಗೃಹ ಸಚಿವ ಜಿ. ಪರಮೇಶ್ವರ ಕಾರ್ಯಕ್ರಮ ಉದ್ಘಾಟಿಸಿ, ‘ಸಂಸ್ಕೃತಿ ಸಂಗಮ’ ವಿಶೇಷ ಸಂಚಿಕೆ ಬಿಡುಗಡೆ ಮಾಡುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

‘ಲೋಕಾ’ ಬಲೆಗೆ ಪಬ್ಲಿಕ್ ಪ್ರಾಸಿಕ್ಯೂಟರ್

ಬೆಂಗಳೂರು: ಕ್ರಿಮಿನಲ್ ಪ್ರಕರಣ ಒಂದಕ್ಕೆ ಆಕ್ಷೇಪಣೆ ಸಲ್ಲಿಸಲು ₹1,100 ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಎಸ್. ಲತಾ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದರು. ಈ ಬಗ್ಗೆ ಎಂ. ರಾಜಾ ಅವರು ದೂರು ನೀಡಿದ್ದರು ಎಂದು ಮೂಲಗಳು ತಿಳಿಸಿವೆ. ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಡರ್ಲಾ: ಶೇ 83ರಷ್ಟು ಸ್ಥಳೀಯರಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದ ಹೊರ ವಲಯದಲ್ಲಿರುವ ‘ವಂಡರ್ಲಾ ಅಮ್ಯೂಸ್‌ಮೆಂಟ್ ಪಾರ್ಕ್’ನಲ್ಲಿ ಶೇಕಡ 83ರಷ್ಟು ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆ ಎಂದು ವಂಡರ್ಲಾ ಹಾಲಿಡೇಸ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿಟ್ಟಿಲಪ್ಪಿಲ್ಲಿ ತಿಳಿಸಿದರು.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಂಡರ್ಲಾ ಬೆಂಗಳೂರು’ ಇಪ್ಪತ್ತು ವರ್ಷಗಳ ಸಂಭ್ರಮದಲ್ಲಿದ್ದು, ಇದುವರೆಗೂ 1.82 ಕೋಟಿಗೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ. ಇದು ಭಾರತದ ನಂಬರ್ ಒನ್ ಅಮ್ಯೂಸ್‌ಮೆಂಟ್ ಪಾರ್ಕ್ ಆಗಿ ಬೆಳೆದಿದೆ. ಇದರಲ್ಲಿ ಸ್ಥಳೀಯ ಆಡಳಿತ ಹಾಗೂ ಜನರ ಸಹಕಾರ ಹೆಚ್ಚಿದೆ ಎಂದು ಮಾಹಿತಿ ನೀಡಿದರು.

‘ನಮ್ಮ ಸಂಸ್ಥೆಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಬಳಸಿಕೊಂಡು ಹಲವಾರು ಸಾಮಾಜಿಕ ಕೆಲಸಗಳನ್ನು ಮಾಡಲಾಗುತ್ತಿದೆ. ಸ್ಥಳೀಯ ಶಾಲಾ–ಕಾಲೇಜುಗಳ ಕಟ್ಟಡಗಳು, ಅಂಗನವಾಡಿ ಕಟ್ಟಡಗಳ ದುರಸ್ತಿ, ಶೌಚಾಲಯಗಳ ನಿರ್ಮಾಣ ಸೇರಿದಂತೆ ಸಮುದಾಯ ಭವನ ನಿರ್ಮಿಸುವ ಕಾರ್ಯಕ್ಕೂ ಚಾಲನೆ ನೀಡಲಾಗುತ್ತಿದೆ. ಶೈಕ್ಷಣಿಕ, ಆರೋಗ್ಯ ಕ್ಷೇತ್ರ ಸೇರಿದಂತೆ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡುತ್ತಿದ್ದೇವೆ’ ಎಂದು ಹೇಳಿದರು.

‘ವಂಡರ್ಲಾಗೆ ಬರುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಇಲ್ಲಿಗೆ ಬರುವ ಪ್ರತಿಯೊಬ್ಬರಿಗೆ ಮನರಂಜನೆಯ ಜೊತೆಗೆ ಸುರಕ್ಷತೆಯ ಭರವಸೆ ನೀಡುತ್ತಿದ್ದೇವೆ. ವಂಡರ್ಲಾ ನಗರದಿಂದ 28 ಕಿ.ಮೀ ದೂರದಲ್ಲಿದ್ದು, ಬಿಡದಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉದ್ಯೋಗ, ಪ್ರವಾಸೋದ್ಯಮ ಬೆಳೆಯಲು ಒತ್ತು ನೀಡುತ್ತಿದ್ದೇವೆ’ ಎಂದು ತಿಳಿಸಿದರು.

ವಂಡರ್ಲಾ ಬೆಂಗಳೂರಿನ ಮುಖ್ಯಸ್ಥ ಎಚ್.ಎಸ್. ರುದ್ರೇಶ್, ಧೀರನ್ ಚೌಧರಿ ಸುದ್ದಿಗೋಷ್ಠಿಯಲ್ಲಿದ್ದರು.

‘ತ್ರಿಭಾಷಾನೀತಿ ಸಾಕು: ಎರಡು ನುಡಿ ಕಲಿಕೆ ಬೇಕು’ ವಿಚಾರ ಸಂಕಿರಣ

‘ಶಿಕ್ಷಣದಲ್ಲಿ ದ್ವಿಭಾಷೆ ನೀತಿ ಜಾರಿಗೊಳ್ಳಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮಿಳುನಾಡು ಮಾದರಿಯಲ್ಲೇ ಕರ್ನಾಟಕವೂ ಶಿಕ್ಷಣದಲ್ಲಿ ದ್ವಿಭಾಷಾ ನೀತಿಯನ್ನು 2026–2027ನೇ ಶೈಕ್ಷಣಿಕ ವರ್ಷದಿಂದಲೇ ಜಾರಿಗೊಳಿಸುವ ಬದ್ಧತೆಯನ್ನು ತೋರಬೇಕು. ಇದಕ್ಕಾಗಿ ಗೋಕಾಕ್ ಮಾದರಿ ಚಳಿವಳಿ ಆರಂಭಿಸ ಬೇಕು’ ಎಂದು ಸಾಹಿತಿಗಳು, ಚಿಂತಕರು ಹೇಳಿದರು.

ಬನವಾಸಿ ಬಳಗವು ನಗರದ ಗಾಂಧಿ ಭವನದಲ್ಲಿ ‘ತ್ರಿಭಾಷಾನೀತಿ ಸಾಕು: ಎರಡು ನುಡಿ ಕಲಿಕೆ ಬೇಕು’ ಎನ್ನುವ ಕುರಿತು ಮಂಗಳವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ‘ತ್ರಿಭಾಷಾ ಸೂತ್ರ ನಮಗೆ ತ್ರಿಶೂಲವಿದ್ದ ಹಾಗೆ ಎಂದು ಕುವೆಂಪು ಎಚ್ಚರಿಸಿದ್ದರು. ನಮ್ಮಲ್ಲೂ ತಮಿಳುನಾಡಿನಂತೆ ದ್ವಿಭಾಷಾ ವ್ಯವಸ್ಥೆ ಜಾರಿಗೊಳಿಸಲು ಸರ್ಕಾರ ಗಟ್ಟಿ ನಿಲುವು ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರದ ಹಂಗಿಲ್ಲದೇ ರಾಜ್ಯ ಸರ್ಕಾರವೇ ಸಂಪುಟದಲ್ಲಿ ಚರ್ಚಿಸಿ ಈ ನಿರ್ಧಾರ ಕೈಗೊಳ್ಳಬೇಕು. ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಸಚಿವರು, ರಾಜಕೀಯ ನೇತಾರರಿಗೂ ಎಚ್ಚರಿಸಬೇಕು’ ಎಂದರು.

ಕಾದಂಬರಿಕಾರ ಕುಂ.ವೀರಭದ್ರಪ್ಪ ಮಾತನಾಡಿ, ‘ತಮಿಳುನಾಡಿನಲ್ಲಿ ಕೇಂದ್ರೀಯ ಹಾಗೂ ನವೋದಯ ಶಾಲೆಗಳಿಗೆ ಅವಕಾಶ ನೀಡದೇ ಎರಡೇ ಭಾಷೆಯ ಶಿಕ್ಷಣಕ್ಕೆ ಒತ್ತು ನೀಡಿದೆ. ನಮ್ಮ ನಾಡಿನ ರಾಜಕೀಯ ನಾಯಕರಿಗೆ ಭಾಷಾಭಿಮಾನ ಇಲ್ಲದೇ ಇರುವುದರಿಂದ ಇದು ಬೇಡಿಕೆಯಾಗಿಯೇ ಉಳಿದಿದ್ದು, ಗೋಕಾಕ್ ಮಾದರಿ ಚಳವಳಿ ರೂಪಿಸ ಬೇಕಿದೆ ಎಂದರು.

ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಮಾತನಾಡಿ, ‘ಸರ್ಕಾರಿ ಶಾಲೆಗಳ ಸಮೀಪದಲ್ಲೇ ಖಾಸಗಿ ಶಾಲೆ ತೆರೆಯಲು ಅನುಮತಿ ನೀಡುವುದಿಲ್ಲ, ಖಾಸಗಿ ಶಾಲೆಗಳು ರಾಜ್ಯ ಸರ್ಕಾರ ರೂಪಿಸಿದ ಪಠ್ಯವನ್ನೇ ಕಡ್ಡಾಯವಾಗಿ ಬಳಸಬೇಕು ಎನ್ನುವ ಆದೇಶ ತಂದು, ಎರಡು ನುಡಿ ಕಲಿಕೆಗೆ ಒತ್ತು ನೀಡಬೇಕು’ ಎಂದು ಅವರು ಹೇಳಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, ‘ತಮಿಳುನಾಡಿನವರು ಐವತ್ತು ವರ್ಷದ ಹಿಂದೆಯೇ ತಮಿಳು ಭಾಷಾ ಶಿಕ್ಷಣ, ಆಡಳಿತಕ್ಕೆ ಒತ್ತು ನೀಡಿದರು. ಅನಿವಾರ್ಯವಾಗಿ ಇಂಗ್ಲಿಷ್ ಅನ್ನು ಆಡಳಿತದಲ್ಲಿ ಸೇರಿಸಿಕೊಂಡರೂ ತಮಿಳು ಬಿಟ್ಟು ಬೇರೆ ಭಾಷೆಗೆ ಅವಕಾಶ ನೀಡಿಲ್ಲ’ ಎಂದರು,.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ‘ರಾಜ್ಯ ಶಿಕ್ಷಣ ನೀತಿಯಲ್ಲೇ ಭಾಷಾ ನೀತಿಯೂ ಒಂದು ಭಾಗವೇ ಆಗಿದೆ. ಈಗಾಗಲೇ ವರದಿಯನ್ನು ನೀಡಲಾಗಿದೆ. ದ್ವಿಭಾಷಾ ವ್ಯವಸ್ಥೆ ಜಾರಿಗೆ ಸರ್ಕಾರದ ಮೇಲೆ ಒತ್ತಡ ಹೇರಲು ಉನ್ನತ ಮಟ್ಟದ ಸಮಿತಿ ರಚಿಸಬೇಕು’ ಎಂದು ಅವರು ತಿಳಿಸಿದರು.

ಸಾಹಿತಿ ಗೊರುಚ, ಕಸಾಪ ಮಾಜಿ ಅಧ್ಯಕ್ಷ ನಲ್ಲೂರು ಪ್ರಸಾದ್, ನಟ ‘ಮುಖ್ಯಮಂತ್ರಿ’ ಚಂದ್ರು, ಸಂಗೀತ ನಿರ್ದೇಶಕ ಹಂಸಲೇಖ, ಕರೀಗೌಡ ಬೀಚನಹಳ್ಳಿ, ಹಿ.ಚಿ.ಬೋರಲಿಂಗಯ್ಯ, ಡಾ.ವಸುಂಧರಾ ಭೂಪತಿ, ಕವಿರಾಜ್, ಪದ್ಮಿನಿ ನಾಗರಾಜು, ಪ್ರಕಾಶ್ ಮೂರ್ತಿ, ರಾಜಶ್ರೀ, ಬನವಾಸಿ ಬಳಗದ ಅಧ್ಯಕ್ಷ ಜಿ.ಆನಂದ್ ಹಾಜರಿದ್ದರು.



ಬೆಂಗಳೂರಿನ ಗಾಂಧಿ ಭವನದಲ್ಲಿ ಮಂಗಳವಾರ ಬನವಾಸಿ ಬಳಗ ಆಯೋಜಿಸಿದ್ದ ತ್ರಿಭಾಷಾನೀತಿ ಸಾಕು ಎರಡು ನುಡಿ ಕಲಿಕೆ ಬೇಕು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಗಣ್ಯರು ಮನವಿ ಪತ್ರ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಸಂಪುಟದಲ್ಲಿ ಚರ್ಚೆ: ಸಿ.ಎಂ ಭರವಸೆ

ಸಭೆಯ ಬಳಿಕ ಪ್ರಮುಖರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಶಿಕ್ಷಣದಲ್ಲಿ ದ್ವಿ ಭಾಷಾ ನೀತಿ ಜಾರಿಗೆ ಕ್ರಮ ವಹಿಸಬೇಕು. ನವೆಂಬರ್ 1ರಂದು ಇದನ್ನು ಘೋಷಿಸಬೇಕು ಎಂದು ಮನವಿ ಮಾಡಿದರು.

ಈ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವೆ ಎಂದು ಸಿದ್ದರಾಮಯ್ಯ ಅವರು ನಿಯೋಗಕ್ಕೆ ಭರವಸೆ ನೀಡಿದರು.

ನ.2ರಂದು ಅಬ್ಬಿಗೆರೆಯಲ್ಲಿ ದೇವಸ್ಥಾನ ಉದ್ಘಾಟನೆ



ಪೀಣ್ಯ ದಾಸರಹಳ್ಳಿ: ಅಬ್ಬಿಗೆರೆಯಲ್ಲಿ ಪುನರುಜ್ಜೀವನವಾಗಿರುವ ಸೀತಾ ರಾಮಾಂಜನೇಯ ಸ್ವಾಮಿ ಹಾಗೂ ಪದ್ಮಾವತಿ ಸಮೇತ ವೆಂಕಟೇಶ್ವರ ಸ್ವಾಮಿ ದೇವಾಲಯ ನ.2 ರಂದು ಉದ್ಘಾಟನೆಯಾಗಲಿದೆ ಎಂದು ದೇಗುಲದ ಟ್ರಸ್ಟ್ ಮುಖ್ಯಸ್ಥ ಕೆ.ನಾಗಭೂಷಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಎಸ್.ಮುನಿರಾಜು, ಮಾಜಿ ಶಾಸಕ ಆರ್.ಮಂಜುನಾಥ್ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

ಅ.31 ರಿಂದ ನ.3 ರವರೆಗೆ 5 ದಿನಗಳ ಕಾಲ ದೇವಸ್ಥಾನ ಉದ್ಘಾಟನಾ ಕಾರ್ಯಕ್ರಮಗಳು ನಡೆಯಲಿದ್ದು, ನ.2 ರವರೆಗೆ ಕುಂಭಾಭಿಷೇಕ ಮತ್ತು ಪೂಜಾ ವಿಧಿ ವಿಧಾನಗಳು ನಡೆಯಲಿವೆ ಎಂದು ವಿವರಿಸಿದರು. ಮೊದಲಿಗೆ ಸೀತಾರಾಮಾಂಜನೇಯ ವಿಗ್ರಹಗಳಿದ್ದು ಈಗ ಪದ್ಮಾವತಿ ಸಮೇತ ವೆಂಕಟೇಶ್ವರ ಸ್ವಾಮಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ ಎಂದು ಹೇಳಿದರು.

ನಾಯಕತ್ವ, ವಿಸ್ತರಣೆ: 'ಹೈ' ಹಂತದಲ್ಲಿ ಚರ್ಚೆ

ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧ –ಸಚಿವ ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ




ಕೋಲಾರ: 'ಸಚಿವ ಸಂಪುಟ ವಿಸ್ತರಣೆ ಕುರಿತು ಮುಖ್ಯಮಂತ್ರಿ ಹಾಗೂ ಹೈಕಮಾಂಡ್ ಹಂತದಲ್ಲಿ ಚರ್ಚೆಯಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿ ಎಂದು ಸಿ.ಎಂ., ಡಿಸಿಎಂ ಮತ್ತು ಪಕ್ಷದ ನಾಯಕರು ಸೂಚಿಸಿದ್ದಾರೆ. ನಾವೆಲ್ಲ ಬದ್ಧರಾಗಿದ್ದೇವೆ' ಎಂದು ತಿಳಿಸಿದರು.

'ಸಿ.ಎಂ ಆಗಬೇಕೆಂದು ದಲಿತ ಸಮುದಾಯದವರು ಕೇಳುವುದರಲ್ಲಿ ತಪ್ಪೇನಿಲ್ಲ. ಕೆ.ಎಚ್.ಮುನಿಯಪ್ಪ ಅವರಿಗೆ ಸಿ.ಎಂ ಆಗುವ ಅರ್ಹತೆ ಇದೆ. ಸದ್ಯಕ್ಕೆ ಆ ಸ್ಥಾನ ಖಾಲಿ ಇಲ್ಲ. ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಇಳಿಸಿ ಎಂದೂ ಯಾರೂ ಕೇಳುತ್ತಿಲ್ಲ' ಎಂದು ಅಭಿಪ್ರಾಯಪಟ್ಟರು.

'ಬಿಜೆಪಿಯಲ್ಲೇ ನವೆಂಬರ್ ಕ್ರಾಂತಿ': 'ನವೆಂಬರ್ ಕ್ರಾಂತಿ ಕಾಂಗ್ರೆಸ್ಸಿನಲ್ಲಿ ಅಲ್ಲ; ಬಿಜೆಪಿಯಲ್ಲಿ ಆಗಲಿದೆ. ಬಿಜೆಪಿ ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಬಿ.ವೈ. ವಿಜಯೇಂದ್ರ ಮತ್ತು ಆರ್. ಅಶೋಕ ಕಿತ್ತಾಡುತ್ತಿದ್ದು, ಆ ಪಕ್ಷದಲ್ಲಿ ಕ್ರಾಂತಿ ಸಾಧ್ಯತೆ ಇದೆ ಎಂದು ಬೈರತಿ ಸುರೇಶ ಹೇಳಿದರು.



ದಲಿತ ಮುಖ್ಯಮಂತ್ರಿಯಾದರೆ, ಸಂತೋಷ. ಈಗ ಇರುವವರೇ ಕೆಲಸ ಮಾಡುತ್ತಿಲ್ಲ. ಯಾರೇ ಬಂದರೂ ಕರ್ನಾಟಕದ ಹಣೆಬರಹ ಕಾಂಗ್ರೆಸ್ ಕೈಯಲ್ಲಿ ಬದಲಾಗಲು ಸಾಧ್ಯವಿಲ್ಲ

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

ಖರ್ಗೆ ಸಿ.ಎಂ ಆಗ್ತಾರೆ: ಯತ್ನಾಳ



ಬೆಳಗಾವಿ: 'ಕಾಂಗ್ರೆಸ್‌ನಲ್ಲಿ ನವೆಂಬರ್ ಕ್ರಾಂತಿ ನಡೆಯಲಿದೆ. ಸಿ.ಎಂ ಹುದ್ದೆಗಾಗಿ ಲಾಬಿ ಮಾಡುವವರಿಗೆ ಅದು ಸಿಗಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಆಗುವರು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ಮುಖ್ಯಮಂತ್ರಿ ಹುದ್ದೆಗೆ ಲಾಬಿ ನಡೆದಿದೆ. ಇದರಲ್ಲಿ ಮಲ್ಲಿಕಾರ್ಜುನ ಖರ್ಗೆ ಇಲ್ಲ. ಆದರೆ, ಸಾರಥ್ಯ 'ಡಾರ್ಕ್‌ಹಾರ್ಸ್'ಗೆ ಸಿಗಲಿದೆ' ಎಂದು ಸುದ್ದಿಗಾರರಿಗೆ ಇಲ್ಲಿ ಹೇಳಿದರು.

'ಖರ್ಗೆ ಹೆಸರು ಬಂದಾಗ, ಡಿ.ಕೆ. ಶಿವಕುಮಾರ್, ಸತೀಶ ಜಾರಕಿಹೊಳಿ ಮತ್ತು ಇತರರು ಸ್ಪರ್ಧೆಯಿಂದ ಹೊರಗುಳಿಯುತ್ತಾರೆ' ಎಂದೂ ಹೇಳಿದರು.


'ಸಚಿವ ಸ್ಥಾನ ಸಿಗುವ ವಿಶ್ವಾಸ'



ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ನಾನು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ. ಈ ಸಂಬಂಧ ಪಕ್ಷದ ನಾಯಕರಿಗೆ ಕೋರಿದ್ದೇನೆ' ಎಂದು ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಬುಧವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅವರು, ಇವರು ಹೇಳಿದರೆ ಮಾತ್ರ ಸಚಿವ ಸ್ಥಾನ ಸಿಗಲ್ಲ. ಪಕ್ಷದ ಸಿದ್ಧಾಂತದ ಮೇಲೆ ನಂಬಿಕೆ ಇದೆ' ಎಂದರು.

'ತಾರ್ಕಿಕ ಅಂತ್ಯಕ್ಕೆ ಕುರ್ಚಿ ಕಾಳಗ'



ಚಿತ್ರದುರ್ಗ: 'ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಯ ಕಾಳಗ ನವೆಂಬರ್ ಅಂತ್ಯಕ್ಕೆ ತಾರ್ಕಿಕ ಅಂತ್ಯ ಕಾಣುವ ಮುನ್ಸೂಚನೆ ಸಿಕ್ಕಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಸಿದ್ದರಾಮಯ್ಯ ಮೊದಲು ಐದು ವರ್ಷ ನಾನೇ ಸಿ.ಎಂ ಎಂದರು. ಈಗ ಹೈಕಮಾಂಡ್ ಸೂಚಿಸಿದರೆ ಐದು ವರ್ಷ ಎನ್ನುತ್ತಿದ್ದಾರೆ. ಯಾವ ಕ್ಷಣದಲ್ಲಿ ಏನೂ ಬೇಕಾದರೂ ಆಗುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಬುಧವಾರ ಅಭಿಪ್ರಾಯಪಟ್ಟರು. 'ಕಾಂಗ್ರೆಸ್‌ನಲ್ಲಿನ ಆಂತರಿಕ ಕಚ್ಚಾಟ, ಬಣ ಕದನದಿಂದ ಆಡಳಿತ ಯಂತ್ರ ಸಂಪೂರ್ಣ ಕುಸಿದಿದೆ. ರೈತರ ಬಗ್ಗೆ ಕಿಂಚಿತ್ ಕಾಳಜಿ ಇಲ್ಲವಾಗಿದೆ' ಎಂದು ಟೀಕಿಸಿದರು.

ಚಿಟಿಕೆ ಸುದ್ದಿ

ಮಹಿಳೆಗೆ ಕಿರುಕುಳ: ಕಾಂಗ್ರೆಸ್ ಮುಖಂಡನ ಬಂಧನ

ಚಿಕ್ಕಮಗಳೂರು: ಮಹಿಳೆಯೊಬ್ಬರ ಫೋಟೋಗಳನ್ನು ಎಡಿಟ್ ಮಾಡಿ, ಸಾಮಾಜಿಕ ಮಾಧ್ಯಮದಲ್ಲಿ ಹಂಚಿ, ಕಿರುಕುಳ ನೀಡುತ್ತಿದ್ದ ಆರೋಪದಲ್ಲಿ ಕಾಂಗ್ರೆಸ್ ಕಾರ್ಯಕರ್ತ, ಆಲ್ದೂರಿನ ಶ್ರೀನಿವಾಸನಗರದ ಆದಿತ್ಯ (40) ಎಂಬಾತನನ್ನು ಚಿಕ್ಕಮಗಳೂರು ನಗರ ಪೊಲೀಸರು ಬಂಧಿಸಿದ್ದಾರೆ.

'ಆದಿತ್ಯ ನನಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ, ನನ್ನ ಫೋಟೋಗಳನ್ನು ಪಡೆದು ಎಡಿಟ್ ಮಾಡಿ ಸ್ನೇಹಿತರಿಗೆ ತೋರಿಸುತ್ತಿದ್ದ, ಜೀವ ಬೆದರಿಕೆ ಹಾಕಿದ್ದ' ಎಂದು ಪೊಲೀಸರಿಗೆ ಮಹಿಳೆ ದೂರು ನೀಡಿದ್ದಾರೆ.

ನಗರ ಠಾಣೆ ಪೊಲೀಸರು, ಆರೋಪಿ ಬಂಧಿಸಿದ್ದಾರೆ. ಆದಿತ್ಯ ಈ ಹಿಂದೆ ಯುವ ಕಾಂಗ್ರೆಸ್ ಆಲ್ದೂರು ಘಟಕದ ಉಪಾಧ್ಯಕ್ಷ ಆಗಿದ್ದ.

ಬಂಧನಕ್ಕೂ ಮುನ್ನ ಆರೋಪಿಯ ಮನೆಗೆ ಹೋಗಿದ್ದ ಕಾಂಗ್ರೆಸ್ ಕಾರ್ಯಕರ್ತರೇ ಅವನನ್ನು ಥಳಿಸಿದ್ದರು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ.

ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ನಾನೂ ಆಕಾಂಕ್ಷಿ: ಹಿಟ್ನಾಳ

ಬಳ್ಳಾರಿ: ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ (ರಾಬಕೊವಿ) ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ, ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅವರು ಹಾಲು ಮಹಾಮಂಡಳದ (ಕೆಎಂಎಫ್) ಪ್ರತಿನಿಧಿಯಾಗಿ (ಡೆಲಿಗೇಷನ್) ನಿಯೋಜನೆಗೊಂಡಿದ್ದಾರೆ. ರಾಬಕೊವಿಯ ಆಡಳಿತ ಮಂಡಳಿಯ ಸಭೆ ಬಳ್ಳಾರಿಯ ಕೇಂದ್ರ ಕಚೇರಿಯಲ್ಲಿ ಬುಧವಾರ ನಡೆಯಿತು. ಸಭೆಯಲ್ಲಿ 12 ಮತಗಳನ್ನು ಪಡೆದ ಹಿಟ್ನಾಳ ಪ್ರಾತಿನಿಧ್ಯ ತಮ್ಮದಾಗಿಸಿಕೊಂಡರು.



ರಾಘವೇಂದ್ರ ಹಿಟ್ನಾಳ

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನನ್ನ ಮೇಲೆ ವಿಶ್ವಾಸವಿಟ್ಟು ನಿರ್ದೇಶಕರು ಕೆಎಂಎಫ್‌ಗೆ ಪ್ರತಿನಿಧಿ ಮಾಡಿದ್ದಾರೆ. ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ನಾನೂ ಆಕಾಂಕ್ಷಿ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಈ ವಿಷಯದಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವರು' ಎಂದರು.

'ಮತಾಂತರ ಆದವರಿಗೂ ಮೀಸಲಾತಿ ನೀಡಿ'

ಬೆಂಗಳೂರು: 'ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಮತಾಂತರವಾದ ದಲಿತರಿಗೂ ರಾಜಕೀಯ, ಶೈಕ್ಷಣಿಕ ಮತ್ತು ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು. ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ತಡೆಗೆ ಕಾನೂನು ರೂಪಿಸಬೇಕು' ಎಂದು ಅಹಿಂದ ಚಳವಳಿ ಸಂಘಟನೆಯು ಒತ್ತಾಯಿಸಿದೆ.

ಸಂಘಟನೆಯ ಪರವಾಗಿ ಸಿ.ಎಂ. ಇಬ್ರಾಹಿಂ, ಮೊಹಿದ್ದೀನ್ ಬಾವ, ವಿಜಯಲಕ್ಷ್ಮಿ ಅರಸ್, ತನ್ವೀರ್ ಸೇಠ್ ಮತ್ತು ಐವನ್ ಡಿಸೋಜ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಆರ್.ಮಧುಸೂಧನ ನಾಯಕ್ ಅವರನ್ನು ಬುಧವಾರ ಭೇಟಿ ಮಾಡಿ, ಈ ಸಂಬಂಧ ಮನವಿ ಸಲ್ಲಿಸಿದ್ದಾರೆ.

'ಬೌದ್ಧ ಮತ್ತು ಸಿಖ್ ಧರ್ಮಕ್ಕೆ ಮತಾಂತರವಾದ ದಲಿತರಿಗೆ ರಾಜಕೀಯ, ಶೈಕ್ಷಣಿಕ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಈ ಸವಲತ್ತನ್ನು, ಕ್ರೈಸ್ತ, ಇಸ್ಲಾಂ ಧರ್ಮಗಳಿಗೆ ಮತಾಂತರವಾದ ದಲಿತರಿಗೂ ವಿಸ್ತರಿಸಬೇಕು. ಇದಕ್ಕಾಗಿ 1950ರ ರಾಷ್ಟ್ರಪತಿಯ ಆದೇಶಕ್ಕೆ ತಿದ್ದುಪಡಿ ತರಬೇಕು ಎಂದು ಆಗ್ರಹಿಸಿದೆ.

ಸುದ್ದಿ 2 ನಿಮಿಷ

ಮಾಹಿತಿಗೆ ಲಿಖಿತ ಕೋರಿಕೆ ಸಲ್ಲಿಸಲಿ: ಯು.ಟಿ.ಖಾದರ್

ಮಂಗಳೂರು: 'ವಿಧಾನಸಭಾ ಕಾರ್ಯಾಲಯದಿಂದ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಯಾರಿಗಾದರೂ ಸಂಶಯವಿದ್ದರೆ, ಮಾಹಿತಿ ಕೇಳುವುದಿದ್ದರೆ ಗುರುವಾರ (ಅ.30) ಬೆಂಗಳೂರಿನ ಕಚೇರಿಗೆ ಬಂದು ಲಿಖಿತವಾಗಿ ದೂರು ಸಲ್ಲಿಸಲಿ' ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಆರೋಪಗಳಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ಆರೋಪಗಳನ್ನು ಗಮನಿಸಿದ್ದೇನೆ. ಅವರಿಂದ ನಾನು ಎಲ್ಲೋ ಕುಳಿತು ಮಾತನಾಡಲು ಆಗುವುದಿಲ್ಲ. ಲಿಖಿತವಾಗಿ ನೀಡಿದರೆ ಪರಿಶೀಲಿಸುತ್ತೇನೆ. ಈ ಕುರಿತು ಸಕಾರಾತ್ಮಕ ಚರ್ಚೆಗೆ ಸಿದ್ಧ' ಎಂದರು.

'ಅಸೂಯೆಗೆ ಮದ್ದಿಲ್ಲ, ಮನೆ ನಿರ್ಮಿಸುವವರು ಕಟ್ಟಡಕ್ಕೆ ದೃಷ್ಟಿ ಬೀಳಬಾರದು ಎಂದು ದೃಷ್ಟಿಬೊಂಬೆ ಕಟ್ಟುತ್ತಾರೆ. ಕಾಗೇರಿ ಅವರ ಆರೋಪವೂ ದೃಷ್ಟಿಬೊಂಬೆ ಇದ್ದಂತೆ. ಅವರು ರಾಜಕೀಯವಾಗಿ ಮಾತು ಆಡಬಹುದು. ಆದರೆ ನಾನು ಸಾಂವಿಧಾನಿಕ ಹುದ್ದೆಯಲ್ಲಿದ್ದೇನೆ. ನಾನೀಗ ಪ್ರತಿಪಕ್ಷದ ಮಿತ್ರ' ಎಂದರು.



ಸಚಿವ ಸ್ಥಾನದ ಆಕಾಂಕ್ಷಿಯೇ ಎಂಬ ಪ್ರಶ್ನೆಗೆ ಅವರು, 'ಆಲೋಚನೆ ಮಾಡಿ ನಾಳೆ ಹೇಳುತ್ತೇನೆ, ನನಗೆ ಹೊಸ ಜವಾಬ್ದಾರಿ ನೀಡುವ ವಿಚಾರ ನನಗೆ ಗೊತ್ತಿಲ್ಲ' ಎಂದು ಪ್ರತಿಕ್ರಿಯಿಸಿದರು.

ತೇರ್ಗಡೆ ಕನಿಷ್ಠ ಅಂಕ ಶೇ 33: ಸಭಾಪತಿ ಹೊರಟ್ಟಿ ಆಕ್ಷೇಪ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಬೇಕಿರುವ ಕನಿಷ್ಠ ಅಂಕವನ್ನು ಶೇ 33ಕ್ಕೆ ನಿಗದಿ ಮಾಡಿದ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯಕ್ಕೆ, ವ್ಯಕ್ತಿತ್ವ ವಿಕಸನಕ್ಕೆ ಈಗಿರುವ ಪರೀಕ್ಷಾ ಪದ್ಧತಿ ಉತ್ತಮವಾಗಿದೆ. ದೀರ್ಘ ಕಾಲದ ಪರೀಕ್ಷಾ ಮಾನದಂಡದ ಆಧಾರದಲ್ಲಿ ತೇರ್ಗಡೆಯ ಕನಿಷ್ಠ ಅಂಕವನ್ನು ಶೇ 35ಕ್ಕೆ ನಿಗದಿ ಮಾಡಲಾಗಿದೆ. ಅದು ಸಮಂಜಸವಾಗಿದೆ. ಇಂತಹ ಮಾನದಂಡವನ್ನು ಶೇ 33ಕ್ಕೆ ಇಳಿಕೆ ಮಾಡಿರುವುದು ಸರಿಯಾದ ಕ್ರಮವಲ್ಲ. ಇಂತಹ ನಿರ್ಧಾರಗಳು ವಿದ್ಯಾರ್ಥಿಗಳ ಸ್ಪರ್ಧಾ ಮನೋಭಾವಕ್ಕೆ ಪೆಟ್ಟು ನೀಡುತ್ತವೆ. ಮಾನಸಿಕ ದೃಢತೆಯ ಕೊರತೆ ಎದುರಿಸಬೇಕಾಗುತ್ತದೆ. ವಿದ್ಯಾರ್ಥಿಗಳ ಮಧ್ಯೆ ಶೇ 35 ಅಂಕದ ವರ್ಗ, ಶೇ 33 ಅಂಕದ ವರ್ಗಗಳಾಗಿ ವಿಂಗಡಣೆಯಾಗುತ್ತದೆ. ಹಾಗಾಗಿ, ಈಗಿರುವ ಪದ್ಧತಿಯನ್ನೇ ಮುಂದುವರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಇಂತಹ ವಿಷಯಗಳತ್ತ ಗಮನಹರಿಸುವ ಬದಲು ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು. ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದ್ದಾರೆ.



ಪುನೀತ್ ರಾಜ್‌ಕುಮಾರ್ ಸಮಾಧಿಗೆ ಭೇಟಿ ನೀಡಿದ ಅಭಿಮಾನಿಗಳು

–ಪ್ರಜಾವಾಣಿ ಚಿತ್ರ

ಪುನೀತ್ ಪುಣ್ಯಸ್ಮರಣೆ: ಸಮಾಧಿಗೆ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರು ಅಗಲಿ ನಾಲ್ಕು ವರ್ಷಗಳು ಉರುಳಿವೆ. ಬುಧವಾರ (ಅ.29) ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ನಟ ಶಿವರಾಜ್‌ಕುಮಾರ್, ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ, ಯುವ ರಾಜ್‌ಕುಮಾರ್ ಸೇರಿದಂತೆ ಕುಟುಂಬದ ಸದಸ್ಯರು ಇಲ್ಲಿನ ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು.

ಪೂಜೆ ಸಲ್ಲಿಸಿದ ಬಳಿಕ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪುನೀತ್ ಅವರ ಇಷ್ಟದ ತಿಂಡಿ, ಸಿಹಿ ತಿನಿಸುಗಳನ್ನು ಎಡೆ ಇಟ್ಟರು. ಸಮಾಧಿಗೆ ಸಾವಿರಾರು ಜನರು ಭೇಟಿ ನೀಡಿ ನೆಚ್ಚಿನ ನಟನಿಗೆ ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಶಿವರಾಜ್‌ಕುಮಾರ್, 'ನಾಲ್ಕು ವರ್ಷವಲ್ಲ, ಎಷ್ಟೇ ವರ್ಷವಾದರೂ ಅಪ್ಪು ಮೇಲಿನ ಪ್ರೀತಿ ಕಡಿಮೆಯಾಗಲು ಸಾಧ್ಯವೇ ಇಲ್ಲ. ಆತನ ವ್ಯಕ್ತಿತ್ವವೇ ಹಾಗಿತ್ತು. ಅಪ್ಪಾಜಿ, ಅಪ್ಪು ಹೀಗೆ ಕೆಲವು ವ್ಯಕ್ತಿಗಳಿಗಷ್ಟೇ ಇಂತಹ ಪ್ರೀತಿ ಸಿಗಲು ಸಾಧ್ಯ. ಆತನಿಲ್ಲ ಎಂದುಕೊಂಡರೇ ಕಷ್ಟ. ಆತನ ನೆನಪಿನಲ್ಲೇ ಬದುಕುತ್ತಿದ್ದೇವೆ. ಅಪ್ಪುವನ್ನು ನಮ್ಮಲ್ಲೇ ಕಾಣಲು ಪ್ರಯತ್ನಪಡಬೇಕು' ಎಂದರು.

'ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯ'

ಒಂದನೇ ಪುಟದಿಂದ...

'ನಾಯಕತ್ವ ಬದಲಾವಣೆ ಸನ್ನಿವೇಶ ರಾಜ್ಯದಲ್ಲಿ ಇಲ್ಲ. ಅದರ ಅನಿವಾರ್ಯವೂ ನಮಗೆ ಇಲ್ಲ. ಹೈಕಮಾಂಡ್ ನಿರ್ಧಾರ ಮಾಡಬೇಕು. ಎರಡೂವರೆ ವರ್ಷಕ್ಕೆ ಮಾತ್ರ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಎಂದು ಹೈಕಮಾಂಡ್ ಷರತ್ತು ಹಾಕಿಲ್ಲ. ನನ್ನ ಬಳಿಯಂತೂ ಯಾರೂ ಈ ರೀತಿ ಹೇಳಿಲ್ಲ' ಎಂದೂ ಹೇಳಿದರು.

ಬಾಯಿ ಮುಚ್ಚಿಕೊಂಡಿರಬೇಕು: 'ಅಧಿಕಾರ ಹಸ್ತಾಂತರ, ಸಂಪುಟ ವಿಸ್ತರಣೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ' ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅವರಿಬ್ಬರೂ ಹೇಳಿಕೆ ನೀಡಿದರೆ ಅದೇ ಅಂತಿಮ. ಆ ಬಗ್ಗೆ ಯಾವ ಸಚಿವರೂ, ಶಾಸಕರೂ ಮಾತನಾಡಬಾರದು. ಎಲ್ಲರೂ ಬಾಯಿ ಮುಚ್ಚಿಕೊಂಡು ಇರಬೇಕು ಅಷ್ಟೇ' ಎಂದರು.

ವರಿಷ್ಠ ನಿರ್ಧಾರಕ್ಕೆ ಬದ್ಧ: 'ನಾಯಕತ್ವ ಬದಲಾವಣೆ ವಿಚಾರದಲ್ಲಿ ಯಾವಾಗ ಏನು ಆಗಬೇಕೊ ಅದು ಆಗಲಿದೆ. ಪಕ್ಷದ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧ' ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

'ಈಗ ಯಾವ ಕುರ್ಚಿಯೂ ಖಾಲಿ ಇಲ್ಲ. ಸುಮ್ಮನೆ ಮಾತನಾಡುವುದು ಸರಿಯಲ್ಲ' ಎಂದರು.

'ಸಚಿವ ಸ್ಥಾನದ ಆಕಾಂಕ್ಷಿಯೇ' ಎಂಬ ಪ್ರಶ್ನೆಗೆ, 'ನಾನು ಯಾರ ಬಳಿಯೂ ಏನೂ ಕೇಳುವುದಿಲ್ಲ. ಅರ್ಹತೆ ಇದ್ದರೆ ಅದಾಗಿಯೇ ಬರುತ್ತದೆ. ಅವಕಾಶ ಬರುವರೆಗೆ ನಾನು ಕಾಯುತ್ತೇನೆ' ಎಂದರು. 'ಎಲ್ಲರೂ ಆಸೆ ಇಟ್ಟುಕೊಂಡಿದ್ದಾರೆ. ಯಾರೂ ಇಲ್ಲಿ ಸನ್ಯಾಸಿಗಳಲ್ಲ' ಎಂದೂ ಹೇಳಿದರು.

'ಹಣೆಯಲ್ಲಿ ಬರೆದಿದ್ದರೆ ಸಿ.ಎಂ ಆಗುತ್ತಾರೆ'

ಒಂದನೇ ಪುಟದಿಂದ...

2028ಕ್ಕೆ ಸಿದ್ದರಾಮಯ್ಯ ಅವರ ಸ್ಪರ್ಧೆ ತಪ್ಪಲ್ಲ: 2028ರ ಚುನಾವಣೆಗೂ ಸಿದ್ದರಾಮಯ್ಯ ಸ್ಪರ್ಧಿಸುವ ಬಗ್ಗೆ ಕೇಳಿದಾಗ, 'ರಾಜಕೀಯದಲ್ಲಿ 95-98 ವರ್ಷ ಆದವರೂ ಇದ್ದಾರೆ. ಸಿದ್ದರಾಮಯ್ಯ ಅವರು ಸ್ಪರ್ಧಿಸುತ್ತೇನೆ ಎನ್ನುವುದರಲ್ಲಿ ಯಾವ ತಪ್ಪೂ ಇಲ್ಲ' ಎಂದರು.



'ಸಿದ್ದರಾಮಯ್ಯ ಅವರು ಅನಿವಾರ್ಯವೇ' ಎಂಬ ಪ್ರಶ್ನೆಗೆ, 'ಒಬ್ಬ ನಾಯಕನಿಗೆ ಇರಬೇಕಾದ ಎಲ್ಲ ಅವಕಾಶಗಳು ಅವರಿಗಿದೆ. ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸುವುದರಲ್ಲಿ ತಪ್ಪೇನಿಲ್ಲ' ಎಂದು ಡಿ.ಕೆ ಸುರೇಶ್ ಹೇಳಿದರು.

'100 ಕಾಂಗ್ರೆಸ್ ಕಚೇರಿ: ವರಿಷ್ಠರಿಗೆ ವರದಿ'

ಬೆಂಗಳೂರು: 'ರಾಜ್ಯದಲ್ಲಿ 100 ಕಾಂಗ್ರೆಸ್ ಕಚೇರಿ ನಿರ್ಮಿಸುವ ವಿಚಾರದಲ್ಲಿ ಸಚಿವರು, ಸಂಸದರು, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು ಸೇರಿದಂತೆ ಯಾರ್‍ಯಾರು ಆಸಕ್ತಿ ತೋರಿದ್ದಾರೆ, ಯಾರು ತೋರಿಸಿಲ್ಲ ಎಂದು ವರದಿ ನೀಡುವಂತೆ ಪಕ್ಷದ ವರಿಷ್ಠರು ಸೂಚನೆ ನೀಡಿದ್ದಾರೆ. ಆ ವರದಿಯನ್ನು ಕಳುಹಿಸಿದ ನಂತರ ಶಂಕುಸ್ಥಾಪನೆಗೆ ದಿನ ನಿಗದಿ ಮಾಡಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್ತಿನ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಿಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಸಭೆಯ ಬಳಿಕ ಅವರು ಮಾತನಾಡಿದರು.

ಪುನರ್‌ರಚನೆ: 'ಕೈ' ತಳಮಳ

ಒಂದನೇ ಪುಟದಿಂದ...

ಈ ವೇಳೆ, ಸಚಿವ ಸಂಪುಟ ಪುನರ್ ರಚನೆಯ ಬಗ್ಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಸಮಾಲೋಚಿಸುವ ಸಾಧ್ಯತೆ ಇದೆ. ಹೀಗಾಗಿ, ಸಚಿವ ಸ್ಥಾನ ಆಕಾಂಕ್ಷಿಗಳು ಹಾಗೂ ಸಂಪುಟದಿಂದ ಹೊರ ಹೋಗುವ ಆತಂಕ ಎದುರಿಸುತ್ತಿರುವವರು ಚುರುಕಾಗಿದ್ದಾರೆ. ತಮ್ಮ ಸ್ಥಾನ ಭದ್ರ ಮಾಡಿಕೊಳ್ಳಲು ಕಸರತ್ತು ನಡೆಸಿದ್ದಾರೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಶನಿವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದರು. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತಮ್ಮನ್ನು ಪರಿಗಣಿಸುವಂತೆ ಕೋರಿಕೊಂಡಿದ್ದರು. 'ಇಲಾಖೆಗಳ ಸಾಧನೆ ವರದಿಯನ್ನು ಈ ಹಿಂದೆಯೇ ಸಲ್ಲಿಸಿದ್ದೇನೆ. ಇದೊಂದು ಸೌಜನ್ಯದ ಭೇಟಿ' ಎಂದು ಸಮಜಾಯಿಷಿ ನೀಡಿದ್ದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಎರಡು ದಿನ 'ದೆಹಲಿ ಯಾತ್ರೆ' ನಡೆಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸುರೇಶ್ ಕಾರ್ಯವೈಖರಿ ಬಗ್ಗೆ ಪಕ್ಷದಲ್ಲಿ ಅಸಮಾಧಾನ ಇದೆ.

ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಪುತ್ರ ರವಿ ಬೋಸರಾಜು ಮತ್ತಿತರರು ರಾಷ್ಟ್ರ ರಾಜಧಾನಿಗೆ ಮಂಗಳವಾರ ದಿಢೀರ್ ಬಂದು ಹೋಗಿದ್ದಾರೆ. ಹೈಕಮಾಂಡ್‌ನ ಪ್ರತಿನಿಧಿಗಳನ್ನು ಕಂಡು ಹೋಗಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ಎರಡೂವರೆ ವರ್ಷಗಳಲ್ಲಿ ಕೈಗೊಂಡ ಸುಧಾರಣೆಗಳು, ಕೋವಿಡ್ ಹಗರಣದ ತನಿಖೆ ಮತ್ತಿತರ ವಿಷಯಗಳ ಬಗ್ಗೆ ವರದಿ ಒಪ್ಪಿಸಿದ್ದಾರೆ.

ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಿ ಸಚಿವ ಸ್ಥಾನ ಕಳೆದುಕೊಂಡಿರುವ ಕೆ.ಎನ್. ರಾಜಣ್ಣ ಮತ್ತೆ ಸಂಪುಟ ಸೇರಲು ಭಾರಿ ಪ್ರಯತ್ನ ನಡೆಸಿದ್ದಾರೆ. ಈ ಸಂಬಂಧ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿ ಲಾಬಿ ನಡೆಸಲು ಅವರ ಪುತ್ರ ರಾಜೇಂದ್ರ ಮೂರು–ನಾಲ್ಕು ದಿನಗಳಿಂದ ದೆಹಲಿಯಲ್ಲಿ ಠಿಕಾಣಿ ಹೂಡಿದ್ದಾರೆ.

ಅಧಿಕಾರ ಹಸ್ತಾಂತರ, ಸಂಪುಟ ಪುನರ್ ರಚನೆ ಹಾಗೂ ಉತ್ತರಾಧಿಕಾರಿ ವಿಷಯಗಳ ಬಗ್ಗೆ 'ಮೌನ ವ್ರತ'ದಲ್ಲಿ ತೊಡಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಖಾಸಗಿ ಕಾರ್ಯದ ನೆಪದಲ್ಲಿ ದೆಹಲಿಗೆ ಭೇಟಿ ನೀಡಿದ್ದಾರೆ. ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂದು ಹೇಳಿಕೆ ನೀಡಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ದೆಹಲಿ ಪ್ರವಾಸ ಮಾಡಿದ್ದಾರೆ.

ಸಚಿವ ಸ್ಥಾನದ ಆಕಾಂಕ್ಷಿಗಳಾದ ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್, ಶಾಸಕ ನರೇಂದ್ರಸ್ವಾಮಿ ಮತ್ತಿತರರು ವಾರಕ್ಕೊಮ್ಮೆ ಕರ್ನಾಟಕ ಭವನದ ಅತಿಥಿಗಳಾಗುತ್ತಿದ್ದಾರೆ. ಹರಿಯಾಣದ ಕಾಂಗ್ರೆಸ್ ಉಸ್ತುವಾರಿಯಾಗಿರುವ ಬಿ.ಕೆ. ಹರಿಪ್ರಸಾದ್ ಅವರು ಸಂಪುಟ ಸೇರ್ಪಡೆಯ ನಿರೀಕ್ಷೆಯಲ್ಲಿದ್ದಾರೆ.

'ಪಥಸಂಚಲನ: ಲಾಠಿಯಿಂದ ಅಶಾಂತಿ'

ರಾಷ್ಟ್ರಧ್ವಜ, ಸಂವಿಧಾನದ ಪ್ರತಿ ಹಿಡಿದು ಪಥಸಂಚಲನ ನಡೆಸುವಂತೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸ್ವಯಂ ಸೇವಕರು ಲಾಠಿ ಹಿಡಿದು ಪಥಸಂಚಲನ ನಡೆಸುವುದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಅವರು ಲಾಠಿ ಬದಲು ರಾಷ್ಟ್ರಧ್ವಜ ಮತ್ತು ಸಂವಿಧಾನದ ಪ್ರತಿ ಹಿಡಿದು ಪಥಸಂಚಲನ ಮಾಡಲಿ' ಎಂದು ಜಾಗೃತ ನಾಗರಿಕರು ಕರ್ನಾಟಕ ಸಂಘಟನೆ ಸಲಹೆ ನೀಡಿದೆ.

ಈ ಬಗ್ಗೆ ಸಂಘಟನೆಯ ಪ್ರಮುಖರಾದ ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ವಿಜಯಾ, ಮಾವಳ್ಳಿ ಶಂಕರ್, ಬಂಜಗೆರೆ ಜಯಪ್ರಕಾಶ್, ಬಿ. ಶ್ರೀಪಾದ ಭಟ್, ಮೀನಾಕ್ಷಿ ಬಾಳಿ ಕೆ.ಎಸ್. ವಿಮಲ ಹಾಗೂ ರುದ್ರಪ್ಪ ಹನಗವಾಡಿ ಜಂಟಿ ಹೇಳಿಕೆ ನೀಡಿದ್ದಾರೆ.

'ನ. 2ರಂದು ಕಲಬುರಗಿಯ ಚಿತ್ತಾಪುರದಲ್ಲಿ ನಿಗದಿಯಾಗಿರುವ ಆರ್‌ಎಸ್‌ಎಸ್ ಪಥಸಂಚಲನದ ವಿವಾದವು ಪ್ರಜ್ಞಾವಂತರಲ್ಲಿ ಆತಂಕ ಮೂಡಿಸಿದೆ. ಶತಮಾನೋತ್ಸವ ಅಂಗವಾಗಿ ಬೆಂಗಳೂರಿನ ವಿವಿಧೆಡೆ ಸ್ವಯಂ ಸೇವಕರು ಲಾಠಿ ಝಳಪಿಸುತ್ತಾ ಪಥಸಂಚಲನ ನಡೆಸಿದರು. ಸಾರ್ವಜನಿಕವಾಗಿ ಯಾವುದೇ ಆಯಧ ಹಿಡಿದು ತಿರುಗಾಡುವುದು ಅಪರಾಧ. ಕಳೆದ 60 ವರ್ಷಗಳಲ್ಲಿ ಆರ್‌ಎಸ್‌ಎಸ್‌ನ ಅನೇಕ ಪಥಸಂಚಲನಗಳು ಕೋಮು ಗಲಭೆಗಳಿಗೆ ಪ್ರಚೋದನೆಯಾಗಿರುವುದು ಇತಿಹಾಸದಲ್ಲಿ ದಾಖಲಾಗಿದೆ' ಎಂದು ಹೇಳಿದ್ದಾರೆ.

'ಸರ್ಕಾರವು ಆರ್‌ಎಸ್‌ಎಸ್ ಸ್ವಯಂಸೇವಕರಿಗೆ ಯಾವುದೇ ಕಾರಣಕ್ಕೂ ಪಥಸಂಚಲನ ನೆಪದಲ್ಲಿ ಲಾಠಿ ಹಿಡಿದು ತಿರುಗಾಡುವುದಕ್ಕೆ ಅನುಮತಿ ಕೊಡಬಾರದು. ಪ್ರಜಾಪ್ರಭುತ್ವದಲ್ಲಿ ಮುಕ್ತವಾಗಿ, ಅಹಿಂಸಾತ್ಮಕವಾಗಿ, ಯಾವುದೇ ದ್ವೇಷ ಬಿತ್ತದೆ ಸಾರ್ವಜನಿಕವಾಗಿ ಜಾಥಾ ಮಾಡಲು ಅವಕಾಶವಿದೆ. ಆರ್‌ಎಸ್‌ಎಸ್ ಕೂಡ ಲಾಠಿ ಬಿಟ್ಟು ಪಥಸಂಚಲನ ನಡೆಸಲಿ. ಈ ನೀತಿ ಚಿತ್ತಾಪುರಕ್ಕೂ ಅನ್ವಯಿಸಲಿ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ವರು ಶಿಕ್ಷಕರಿಗೆ ನೋಟಿಸ್

ಔರಾದ್ (ಬೀದರ್ ಜಿಲ್ಲೆ): ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದ ನಾಲ್ವರು ಶಿಕ್ಷಕರಿಗೆ ಇಲ್ಲಿಯ ಕ್ಷೇತ್ರ ಶಿಕ್ಷಣಾಧಿಕಾರಿ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ. ಶಿಕ್ಷಕರಾದ ಮಹಾದೇವ ಚಿಟಗಿರೆ, ಶಾಲಿವಾನ ಉದಗಿರೆ, ಪ್ರಕಾಶ ಬರದಾಪುರೆ, ಸತೀಶ ಮಾನಕಾರಿ ಅವರಿಗೆ ಮಂಗಳವಾರ ನೋಟಿಸ್ ಕಳುಹಿಸಿದ್ದಾರೆ. 'ಅ 7 ಮತ್ತು 13ರಂದು ಅವರು ಪಥ ಸಂಚಲನದಲ್ಲಿ ತಾವು ಭಾಗಿಯಾಗಿದ್ದ ವಿಡಿಯೊ ಹರಿದಾಡುತ್ತಿವೆ ಎಂದು ದಲಿತ ಸೇನೆ ಹಾಗೂ ಬಹುಜನ ಸೇವಾ ಸಮಿತಿ ದೂರು ನೀಡಿವೆ. ತಾವು ಸರ್ಕಾರದ ವಿರುದ್ಧವಾಗಿ ನಡೆದುಕೊಂಡಿದ್ದಕ್ಕಾಗಿ ಲಿಖಿತ ಹೇಳಿಕೆ ದಾಖಲಿಸಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಗುರುಮಠಕಲ್: ಪಥಸಂಚಲನಕ್ಕೆ ಅನುಮತಿ

ಯಾದಗಿರಿ: ಗುರುಮಠಕಲ್ ಪಟ್ಟಣದಲ್ಲಿ ಅ.31ರಂದು ಪಥಸಂಚಲನ ನಡೆಸಲು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಬುಧವಾರ ಷರತ್ತುಬದ್ಧ ಅನುಮತಿ ನೀಡಿದ್ದಾರೆ. ಅನುಮತಿ ಸಿಗದಿದ್ದರಿಂದ ಅ.25ರಂದು ಪಥಸಂಚಲನ ಮುಂದೂಡಲಾಗಿತ್ತು. ಆಯೋಜಕರು ಅ.23ರಂದು ಜಿಲ್ಲಾಧಿಕಾರಿಗೆ ಮತ್ತೆ ಮನವಿ ಸಲ್ಲಿಸಿದ್ದರು. ಡಿಎಸ್‌ಪಿ ವರದಿ ಆಧರಿಸಿ ಈಗ ಷರತ್ತುಗಳನ್ನು ವಿಧಿಸಿ ಜಿಲ್ಲಾಧಿಕಾರಿ ಅನುಮತಿ ಕೊಟ್ಟಿದ್ದಾರೆ.

₹34 ಕೋಟಿ ಯೋಜನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಕಾಗಿನೆಲೆ

ಬೆಂಗಳೂರು: ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕನಕದಾಸರ ಕರ್ಮಭೂಮಿ ಕಾಗಿನೆಲೆ ಮತ್ತು ಜನ್ಮಭೂಮಿ ಸ್ಥಳವಾದ ಬಾಡ ಗ್ರಾಮ ಹಾಗೂ ಸುತ್ತಮುತ್ತಲಿನ ಪಾರಂಪರಿಕ ತಾಣಗಳನ್ನು ₹ 34 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಗಿದೆ.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಸಭೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

ಪ್ರಾಧಿಕಾರದಲ್ಲಿ ಸಂಚಿತ ನಿಧಿಯನ್ನು ಸ್ಥಾಪಿಸಿ, ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಸಬೇಕು. ಪ್ರಾಧಿಕಾರದ ಆದಾಯ ಹೆಚ್ಚಳಕ್ಕೆ ಯೋಜನೆಗಳನ್ನು ರೂಪಿಸಬೇಕು ಎಂದೂ ಅವರು ನಿರ್ದೇಶನ ನೀಡಿದರು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಲಾಭವನ ನಿರ್ಮಾಣ, ಕನಕ ವಸ್ತು ಸಂಗ್ರಹಾಲಯದಲ್ಲಿ ಶಿಲ್ಪ ಸಂಗ್ರಹಾಲಯ ನಿರ್ಮಾಣ, ಚೆನ್ನಕೇಶವ ದೇವಾಲಯ, ಮೆಟ್ಟಿಲು, ಗೋಪುರ, ಕಮಾನುಗಳ ನಿರ್ಮಾಣ, ಕದರಮಂಡಲಗಿ ವೆಂಕಟೇಶ್ವರ ದೇವಸ್ಥಾನ, ಸಮುದಾಯ ಭವನ ನಿರ್ಮಾಣ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಪ್ರಾಧಿಕಾರದ ವ್ಯಾಪ್ತಿಯ ಉದ್ಯಾನಗಳ ವಾರ್ಷಿಕ ನಿರ್ವಹಣೆಯನ್ನು ಗುತ್ತಿಗೆ ನೀಡುವ ಕುರಿತು ಹಾಗೂ ಕನಕ ಪರಿಸರ ಉದ್ಯಾನದಲ್ಲಿ ಖಾಲಿ ಇರುವ ಜಾಗದಲ್ಲಿ ಬಟಾನಿಕಲ್ ಗಾರ್ಡನ್ ನಿರ್ಮಿಸಲು ನಿರ್ಧರಿಸಲಾಯಿತು.

ಕನೇರಿ ಮಠದ ಸ್ವಾಮೀಜಿ ಮೇಲಿನ ನಿಷೇಧ ಕೈಬಿಡಲು ಆಗ್ರಹ

'ಪ್ರತಿ ತಾಲ್ಲೂಕಿನಲ್ಲಿ ಶರಣರ ಸಮಾವೇಶ'

ಪ್ರಜಾವಾಣಿ ವಾರ್ತೆ



ಬೆಳಗಾವಿಯಲ್ಲಿ ಬುಧವಾರ ನಡೆದ ವಿವಿಧ ಸಂಘಟನೆಗಳ ಮುಖಂಡರು ಮತ್ತು ಜನಪ್ರತಿನಿಧಿಗಳ ಸಭೆಯಲ್ಲಿ ಎಂ.ಬಿ.ಝಿರಲಿ ಮಾತನಾಡಿದರು. ವಿವಿಧ ಮಠಾಧೀಶರು, ರಾಜಕೀಯ ಮುಖಂಡರು ಇದ್ದರು

ಬೆಳಗಾವಿ: 'ಕನೇರಿ ಮಠದ ಸ್ವಾಮೀಜಿ ಅವರಿಗೆ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆ ಪ್ರವೇಶ ನಿಷೇಧಿಸಿರುವ ಆದೇಶ ಹಿಂಪಡೆಯಲು ಒತ್ತಾಯಿಸಿ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ 'ಬಸವಾದಿ ಶರಣರ ಹಿಂದೂ ಸಮಾವೇಶ' ಮಾಡುತ್ತೇವೆ. ವಿಜಯಪುರ ಜಿಲ್ಲೆಯ ಬಬಲೇಶ್ವರದಲ್ಲಿ ಚಾಲನೆ ಕೊಡುತ್ತೇವೆ' ಎಂದು ವಿವಿಧ ಸಂಘಟನೆಗಳ ಮುಖಂಡರು ಮತ್ತು ಜನಪ್ರತಿನಿಧಿಗಳು ಇಲ್ಲಿ ಘೋಷಿಸಿದರು.

ಹಾಲಿ, ಮಾಜಿ ಸಂಸದರು ಮತ್ತು ಶಾಸಕರು ಭಾಗವಹಿಸಿದ್ದ ಸಭೆಯಲ್ಲಿ ಬುಧವಾರ ಈ ಕುರಿತು ನಿರ್ಣಯವನ್ನು ಕೈಗೊಳ್ಳಲಾಯಿತು.

ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ಅಭಯ ಪಾಟೀಲ, ಶಶಿಕಲಾ ಜೊಲ್ಲೆ, ಸಿ.ಸಿ.ಪಾಟೀಲ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ, ಪ್ರತಾಪ ಸಿಂಹ, ಭಗವಂತ ಖೂಬಾ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಭಾಷಣಕಾರ ಚಕ್ರವರ್ತಿ ಸೂಲಿಬೆಲೆ, ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ ಮುತಾಲಿಕ, ವಕೀಲ ಎಂ.ಬಿ.ಝಿರಲಿ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಎಂ.ಬಿ.ಝಿರಲಿ, 'ಎರಡು ಜಿಲ್ಲೆಗಳಿಗೆ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿಗೆ ಪ್ರವೇಶ ನಿಷೇಧಿಸಿದ್ದನ್ನು ಕಠಿಣ ಪದಗಳಲ್ಲಿ ಖಂಡಿಸಿದ್ದೇವೆ. ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಗಳನ್ನೂ ಖಂಡಿಸಿದ್ದೇವೆ. ಮನವಿ ಮೇರೆಗೆ ಶ್ರೀಗಳೂ ಸಭೆಯಲ್ಲಿ ಭಾಗವಹಿಸಿದ್ದರು' ಎಂದರು.

'ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಆಧುನಿಕ ಹಿಂದೂ ಸಮಾಜಕ್ಕೆ ಗುರುಗಳು. ಹಿಂದೂ ತತ್ವ, ಸಂಸ್ಕೃತಿ ಅನುಸರಿಸುವ ದೇಶಭಕ್ತರಾಗಿದ್ದಾರೆ' ಎಂದು ಹೇಳಿದರು.

ಚಕ್ರವರ್ತಿ ಸೂಲಿಬೆಲೆ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಹಿಂದೂಗಳ ವಿಭಜನೆಗೆ ಯತ್ನಿಸುತ್ತಿದೆ. ಶ್ರೀಗಳ ಸಂಚಾರ ಸ್ವಾತಂತ್ರ್ಯ ಮೊಟಕುಗೊಳಿಸಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ' ಎಂದು ಹೇಳಿದರು.

5,000ಕ್ಕೂ ಹೆಚ್ಚು ಸಹಿ ಸಂಗ್ರಹಿಸಿ, ಸ್ವಾಮೀಜಿ ವಿರುದ್ಧದ ನಿಷೇಧ ವಾಪಸಾತಿಗೆ ಆಗ್ರಹಿಸಿ ತಹಶೀಲ್ದಾರ್‌ಗಳಿಗೆ ಮನವಿ ಸಲ್ಲಿಸಲಾಗುವುದು

ಎಂ.ಬಿ.ಝಿರಲಿ, ವಕೀಲ

ಕನೇರಿ ಸ್ವಾಮೀಜಿಗೆ ಸುಪ್ರೀಂ ತರಾಟೆ

ಒಂದನೇ ಪುಟದಿಂದ...

ಕೋಮು ಸಾಮರಸ್ಯ ಕದಡುವ ಕೆಲವು ಹೇಳಿಕೆಗಳನ್ನು ನೀಡಲಾಗಿದೆ ಎಂಬುದನ್ನು ಗಮನಿಸಿದ ಪೀಠವು, 'ಕೀಳು ಮಟ್ಟದ ಹೇಳಿಕೆ ನೀಡಿರುವ ನೀವು ಉತ್ತಮ ನಾಗರಿಕರಲ್ಲ' ಎಂದು ಕಟುವಾಗಿ ಹೇಳಿತು.

'ನೀವು ಧಾರ್ಮಿಕ ನಾಯಕ. ಮಾತನಾಡುವಾಗ ಬಹಳ ಜಾಗರೂಕರಾಗಿರಬೇಕು. ನಿಮ್ಮ ಇಂತಹ ಹೇಳಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ. ಇನ್ನು ಮುಂದೆ ಕೋಮು ಭಾವನೆ ಕೆರಳಿಸುವ ಯಾವುದೇ ಹೇಳಿಕೆ ನೀಡಬೇಡಿ. ಹೈಕೋರ್ಟ್ ಆದೇಶದಲ್ಲಿ ತಪ್ಪೇನಿದೆ' ಎಂದು ಪೀಠ ಪ್ರಶ್ನಿಸಿತು.

'ಅವಹೇಳನಕಾರಿ ಭಾಷೆ ಬಳಸಿರುವುದು ವಾಕ್ ಸ್ವಾತಂತ್ರ್ಯದ ವ್ಯಾಪ್ತಿಗೆ ಬರುವುದಿಲ್ಲ. ನೀವು ಹೀಗೆಯೇ ವರ್ತಿಸುತ್ತಿದ್ದರೆ ಎಲ್ಲ ಜಿಲ್ಲಾಧಿಕಾರಿಗಳು ಇಂತಹ ಆದೇಶಗಳನ್ನು ಹೊರಡಿಸುತ್ತಾರೆ' ಎಂದು ಪೀಠ ಸೂಚ್ಯವಾಗಿ ಹೇಳಿತು. 'ಪ್ರಕರಣದ ವಾಸ್ತವಾಂಶ ಹಾಗೂ ಸನ್ನಿವೇಶಗಳನ್ನು ಗಮನಿಸಿದರೆ, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ನಾವು ಒಲವು ತೋರುವುದಿಲ್ಲ. ಡಿಸೆಂಬರ್ 14ರ ನಂತರ ಸ್ವಾಮೀಜಿ ಅವರು ಜಿಲ್ಲೆ ಪ್ರವೇಶಿಸಬಹುದು' ಎಂದು ಪೀಠ ಸ್ಪಷ್ಟಪಡಿಸಿತು.

'ಗಡಿಪಾರು ಮಾಡಲೂ ಅಧಿಕಾರ ಇದೆ'

'ಸ್ವಾಮೀಜಿ ಯಾವುದೇ ಹಿಂಸಾಚಾರಕ್ಕೆ ಪ್ರಚೋದನೆ ನೀಡಿಲ್ಲ. ರಾಜ್ಯದಲ್ಲಿನ ಕೆಲವು ಲಿಂಗಾಯತ ಧಾರ್ಮಿಕ ನಾಯಕರ ಸೂಚನೆ ಮೇರೆಗೆ ಸ್ವಾಮೀಜಿ ಅವರ ವಿಜಯಪುರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. ಅಂತಹ ನಾಯಕರು ಹಿಂದೂ ದೇವರ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆ' ಎಂದು ಸ್ವಾಮೀಜಿ ಪರ ವಕೀಲರು ವಾದಿಸಿದರು. ಹೈಕೋರ್ಟ್‌ನ ಆದೇಶ ದೋಷಪೂರಿತವಾಗಿದೆ ಎಂದೂ ದೂರಿದರು.

ಸ್ವಾಮೀಜಿ ಅವರನ್ನು ಎಲ್ಲ ಜಿಲ್ಲೆಗಳಿಂದ ಗಡಿಪಾರು ಮಾಡಲು ರಾಜ್ಯದ ಅಧಿಕಾರಿಗಳು ಬಯಸುತ್ತಿದ್ದಾರೆ ಎಂದು ಅವರು ಆರೋಪಿಸಿದರು. 'ನಿಮ್ಮ ಕೃತ್ಯಗಳು ಸಾರ್ವಜನಿಕ ಶಾಂತಿಗೆ ಭಂಗ ತರುತ್ತಿದ್ದರೆ, ಜಿಲ್ಲಾಧಿಕಾರಿ ಅಥವಾ ಆಯುಕ್ತರಿಗೆ ನಿಮ್ಮನ್ನು ಗಡಿಪಾರು ಮಾಡಲು ಅಧಿಕಾರವಿದೆ' ಎಂದು ನ್ಯಾಯಪೀಠವು ಸ್ಪಷ್ಟಪಡಿಸಿತು. 'ನೀವು ಜಿಲ್ಲೆಯನ್ನು ಪ್ರವೇಶಿಸಬೇಕು ಎಂದು ಏಕೆ ಒತ್ತಾಯಿಸುತ್ತೀರಿ? ಭಾರತವು ತುಂಬಾ ದೊಡ್ಡ ದೇಶ. ನೀವು ಬೇರೆಡೆಗೆ ಹೋಗಿ' ಎಂದು ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ರಾಘವೇಂದ್ರ ಶ್ರೀವಾಸ್ತವ ಅವರನ್ನು ಪೀಠ ಕೇಳಿತು.

ಪ್ರಕರಣವೇನು?

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಪ್ರಸಿದ್ಧ ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಮಠದ ಸ್ವಾಮೀಜಿ ಅಕ್ಟೋಬರ್ 7ರಂದು ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಬೀಳೂರು ಗ್ರಾಮದ ಸಮಾರಂಭವೊಂದರಲ್ಲಿ ಮಾತನಾಡಿದ್ದರು.

ಈ ವೇಳೆ ಅವರು, 'ಲಿಂಗಾಯತ ಮಠಾಧಿಪತಿಗಳ ಒಕ್ಕೂಟವು, ಕಲಾವಿದರಿಂದ ಕೂಡಿದ ಮುಖ್ಯಮಂತ್ರಿಗಳ ಕೃಪಾಪೋಷಿತ ನಾಟಕ ಮಂಡಳಿ. ಇವರು ಬಸವ ಸಂಸ್ಕೃತಿ ಅಭಿಯಾನ ಎಂಬ ನಾಟಕವನ್ನು ತೆಗೆದುಕೊಂಡು ಕರ್ನಾಟಕದಾದ್ಯಂತ ತಿರುಗಾಡಿ; ದೇವರು ಗುಡ್ಯಾಗ ಇಲ್ಲ. ಗುಡೀಗೆ ಹೋಗಬ್ಯಾಡ್ರಿ, ಮನ್ಯಾಗಿನ ದೇವರುಗಳನ್ನು ತಗೊಂಡು ಹೊಳ್ಯಾಗ ಹಾಕ್ರಿ. ಹೋಟೆಲ್‌ದಾಗ ಹೋಗಿ ದಾರು ಕುಡೀರಿ. ಆರಾಮಾಗಿರಿ, ಮಾಂಸ ತಿನ್ರಿ... ಎಂದೆಲ್ಲಾ ಜನರಿಗೆ ಹೇಳುತ್ತಿದ್ದಾರೆ' ಎಂದು ಆಕ್ಷೇಪಿಸಿದ್ದರು.

ಲಿಂಗಾಯತ ಮಠಾಧಿಪತಿಗಳ ವಿರುದ್ಧ ಅವಹೇಳನಕಾರಿ ಮಾತುಗಳನ್ನು ಬಳಸಿ ಸಮಾಜದಲ್ಲಿ ಅಶಾಂತಿಗೆ ಕಾರಣವಾಗಿದ್ದಾರೆ ಎಂಬ ಕಾರಣಕ್ಕೆ ವಿಜಯಪುರ ಜಿಲ್ಲಾಧಿಕಾರಿ ಅವರು ಸ್ವಾಮೀಜಿ ಜಿಲ್ಲಾ ಪ್ರವೇಶಕ್ಕೆ ನಿರ್ಬಂಧ ಹೇರಿದ್ದರು.

ಕರ್ನಾಟಕ ಸರ್ಕಾರದ ಪರವಾಗಿ ಹಿರಿಯ ವಕೀಲ ವಿಕಾಸ್ ಸಿಂಗ್ ಮತ್ತು ಕರ್ನಾಟಕದ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ ಮತ್ತು ಅಮನ್ ಪನ್ವಾರ್ ಹಾಜರಾದರು.

ಶೇ 94ರಷ್ಟು ಬೋಧಕರ ಹುದ್ದೆ ಖಾಲಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಅತಿಥಿ ಉಪನ್ಯಾಸಕರ ಮೇಲೆ ಅವಲಂಬನೆ

• ಎ.ಎಂ.ಸುರೇಶ

ಮುಖ್ಯಾಂಶಗಳು

- ವಿಶ್ವವಿದ್ಯಾಲಯದಲ್ಲಿ ಒಟ್ಟು 23 ವಿಭಾಗಗಳಿವೆ
- 16 ವಿಭಾಗಗಳಲ್ಲಿ ಒಬ್ಬರೂ ಕಾಯಂ ಬೋಧಕರಿಲ್ಲ
- ಯಾವ ವಿಭಾಗದಲ್ಲೂ ಪ್ರೊಫೆಸರ್‌ಗಳಿಲ್ಲ

ಬೆಂಗಳೂರು: ಎಂಟು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಶೇ 94ರಷ್ಟು ಬೋಧಕ ಹಾಗೂ ಶೇ 95ರಷ್ಟು ಬೋಧಕೇತರ ಹುದ್ದೆಗಳು ಖಾಲಿ ಇರುವುದರಿಂದ ಬೋಧನಾ ಚಟುವಟಿಕೆಗಳು, ಅಧ್ಯಯನ ಕೇಂದ್ರಗಳು, ಸಂಶೋಧನಾ ಕೇಂದ್ರಗಳ ಆಡಳಿತ ನಿರ್ವಹಣೆಗೆ ತುಂಬಾ ತೊಂದರೆಯಾಗುತ್ತಿದೆ.

ಬೆಂಗಳೂರು ವಿಶ್ವವಿದ್ಯಾಲಯ ಅತಿ ದೊಡ್ಡ ವಿ.ವಿ.ಯಾಗಿದ್ದ ಕಾರಣ 2017ರಲ್ಲಿ ಅದನ್ನು ವಿಭಜಿಸಿ, ಬೆಂಗಳೂರು ನಗರ ಮತ್ತು ಉತ್ತರ ವಿಶ್ವವಿದ್ಯಾಲಯ ಆರಂಭಿಸಲಾಯಿತು. 2018ರಿಂದ ಪ್ರತ್ಯೇಕವಾಗಿ ನಗರ ವಿಶ್ವ ವಿದ್ಯಾಲಯ ಕಾರ್ಯಾರಂಭ ಮಾಡಿದ್ದು, ವಿಶ್ವವಿದ್ಯಾಲಯದಲ್ಲಿ ಇರುವ 23 ವಿಭಾಗಗಳಿಗೆ, ವಿಭಾಗವಾರು ಹುದ್ದೆಗಳು ಮಂಜೂರಾಗಿವೆ. ಆದರೆ, ಖಾಲಿ ಇರುವ ಹುದ್ದೆಗಳು ಭರ್ತಿಯಾಗಿಲ್ಲ.

23 ಪ್ರಾಧ್ಯಾಪಕರು, 46 ಸಹ ಪ್ರಾಧ್ಯಾಪಕರು ಹಾಗೂ 92 ಸಹಾಯಕ ಪ್ರಾಧ್ಯಾಪಕರು ಸೇರಿದಂತೆ ಒಟ್ಟು 161 ಬೋಧಕ ಹುದ್ದೆಗಳು ಮಂಜೂರಾಗಿವೆ. ಆದರೆ, ವಿಶ್ವವಿದ್ಯಾಲಯದಲ್ಲಿ ಈಗ ಒಬ್ಬ ಸಹ ಪ್ರಾಧ್ಯಾಪಕ, 9 ಮಂದಿ ಸಹಾಯಕ ಪ್ರಾಧ್ಯಾಪಕ ಸೇರಿದಂತೆ ಕೇವಲ ಹತ್ತು ಮಂದಿ ಕಾಯಂ ಬೋಧಕರು ಇದ್ದಾರೆ. ಇನ್ನು ಬೋಧಕೇತರ ವಿಭಾಗದಲ್ಲಿ ಒಟ್ಟು 123 ಹುದ್ದೆಗಳು ಇದ್ದು, ಆರು ಮಂದಿ ಮಾತ್ರ ಕಾಯಂ ಸಿಬ್ಬಂದಿ ಇದ್ದಾರೆ ಎಂದು ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ.

ಒಬ್ಬರೂ ಇಲ್ಲ: ಕನ್ನಡ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಸಮಾಜ ಕಾರ್ಯ ವಿಭಾಗ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಭೌತವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಪರಿಸರ ಮತ್ತು ಹವಾಮಾನ ಬದಲಾವಣೆ ಸೇರಿದಂತೆ 16 ವಿಭಾಗಗಳಲ್ಲಿ ಒಬ್ಬರೂ ಕಾಯಂ ಬೋಧಕರಿಲ್ಲ. ಎಲ್ಲ ವಿಭಾಗಗಳಲ್ಲೂ ಪ್ರಾಧ್ಯಾಪಕರ (ಪ್ರೊಫೆಸರ್) ಹುದ್ದೆಗಳು ಖಾಲಿ ಇವೆ. ರಸಾಯನ ವಿಜ್ಞಾನ ವಿಭಾಗದಲ್ಲಿ ಮಾತ್ರ ಒಬ್ಬ ಸಹ ಪ್ರಾಧ್ಯಾಪಕರು ಇದ್ದಾರೆ. ಉಳಿದ ಯಾವ ವಿಭಾಗದಲ್ಲೂ ಸಹ ಪ್ರಾಧ್ಯಾಪಕರು ಇಲ್ಲ.

ಒಬ್ಬ ಪ್ರಾಧ್ಯಾಪಕ, 21 ಮಂದಿ ಸಹ ಪ್ರಾಧ್ಯಾಪಕರು, 37 ಸಹಾಯಕ ಪ್ರಾಧ್ಯಾಪಕರು ಸೇರಿದಂತೆ ಒಟ್ಟು 59 ಬೋಧಕ ಹುದ್ದೆಗಳನ್ನು ಹಾಗೂ ಹೊರ ಗುತ್ತಿಗೆ ಮೂಲಕ 22, ನಿಯೋಜನೆ ಮೇಲೆ ಐದು ಹಾಗೂ ಕಾಯಂ ಆಗಿ 20 ಹುದ್ದೆಗಳು ಸೇರಿದಂತೆ ಒಟ್ಟು 47 ಬೋಧಕೇತರ ಹುದ್ದೆಗಳ ಭರ್ತಿಗೆ 2019ರಲ್ಲಿ ಸರ್ಕಾರ ಅನುಮತಿ ನೀಡಿದೆ. ಆದರೆ, ಇದುವರೆಗೂ ನೇಮಕಾತಿ ನಡೆದಿಲ್ಲ. ಹೀಗಾಗಿ ಅತಿಥಿ ಉಪನ್ಯಾಸಕರು, ಹೊರ ಗುತ್ತಿಗೆ ಸಿಬ್ಬಂದಿ ಮೇಲೆ ವಿಶ್ವವಿದ್ಯಾಲಯ ಅವಲಂಬಿತವಾಗಿದೆ.

‘ರೋಸ್ಟರ್ ನಿಗದಿ, ನೇಮಕಾತಿ ನಿಯಮಗಳನ್ನು ರೂಪಿಸಲು ಸಮಯ ತೆಗೆದುಕೊಂಡಿತು. ಈ ಪ್ರಕ್ರಿಯೆಗಳು ಮುಗಿಯುವ ವೇಳೆಗೆ ಒಳ ಮೀಸಲಾತಿಯಿಂದಾಗಿ ಹೊಸ ನೇಮಕಾತಿಗಳ ಮೇಲೆ ಸರ್ಕಾರ ನಿರ್ಬಂಧ ವಿಧಿಸಿತು. ಈಗ ಒಳ ಮೀಸಲಾತಿ ವಿಷಯ ಇತ್ಯರ್ಥವಾಗಿದೆ. ಆದರೆ, ಒಳ ಮೀಸಲಾತಿ ನಿಗದಿಗೆ ವಿಭಾಗ ಬದಲು, ವಿಶ್ವವಿದ್ಯಾಲಯ ವನ್ನು ಘಟಕವನ್ನಾಗಿ ಪರಿಗಣಿಸಬೇಕು ಎಂದು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಇದು ಇತ್ಯರ್ಥ ವಾಗುವವರೆಗೂ ನೇಮಕಾತಿ ಪ್ರಕ್ರಿಯೆ ಆರಂಭವಾಗುವ ಸಾಧ್ಯತೆ ಇಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ವಿಭಾಗವಾರು ಒಳ ಮೀಸಲಾತಿ ನೀಡಿದರೆ ಪ್ರವರ್ಗ 3ಎ, 3ಬಿಗೆ ಒಂದೂ ಹುದ್ದೆ ಸಿಗುವುದಿಲ್ಲ’ ಎಂದು ಅವರು ಹೇಳಿದರು.

ಹೆಚ್ಚುವರಿ ಕಾರ್ಯಭಾರದ ಹೊಣೆ



ಅತಿಥಿ ಉಪನ್ಯಾಸಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ, ಡೀನ್‌ಗಳನ್ನಾಗಿ ನೇಮಕ ಮಾಡಲು ಬರುವುದಿಲ್ಲ. ಹೀಗಾಗಿ ಈಗಿರುವ ಹತ್ತು ಮಂದಿ ಕಾಯಂ ಬೋಧಕರಿಗೆ 2–3 ವಿಭಾಗಗಳ ಮುಖ್ಯಸ್ಥರ ಜವಾಬ್ದಾರಿ ನೀಡಲಾಗಿದೆ. ಇದರ ಜೊತೆಗೆ ವಿವಿಧ ಅಧ್ಯಯನ ಕೇಂದ್ರಗಳ ಹೊಣೆಯನ್ನು ವಹಿಸಿದ್ದು ಒಬ್ಬರು 4–5 ಜವಾಬ್ದಾರಿ ನಿಭಾಯಿಸಬೇಕಾಗಿದೆ.

ಗಾಂಧಿ ಅಧ್ಯಯನ ಕೇಂದ್ರ, ಯೋಗ ಅಧ್ಯಯನ ಕೇಂದ್ರ, ಮಹಿಳಾ ಅಧ್ಯಯನ ಕೇಂದ್ರ, ಅಂಬೇಡ್ಕರ್ ಅಧ್ಯಯನ ಕೇಂದ್ರ, ಕೌಶಲ ಅಭಿವೃದ್ಧಿ ಮಂಡಳಿ ಸೇರಿದಂತೆ ಒಟ್ಟು 22 ಕೇಂದ್ರಗಳಿವೆ. ಒಬ್ಬರಿಗೆ 2–3 ಕೇಂದ್ರಗಳ ಹೊಣೆ ವಹಿಸಲಾಗಿದೆ. ಬೋಧನೆ ಜೊತೆಗೆ ಈ ಕಾರ್ಯವನ್ನೂ ಮಾಡಬೇಕಾಗಿದೆ. ಹೀಗಾಗಿ ಯಾರಿಗೂ ಸಮಯ ಇಲ್ಲ. ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಂಡಿವೆ ಎಂದು ಅಧಿಕಾರಿ ಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಸಾಂಸ್ಕೃತಿಕ ಮುನ್ನೋಟ




‘ಅಣ್ಣನ ನೆನಪು’ ನಾಟಕದ ದೃಶ್ಯ

‘ಅಣ್ಣನ ನೆನಪು’ ನಾಟಕ ಪ್ರದರ್ಶನ

ಬೆಂಗಳೂರು: ಪ್ರವರ ಥಿಯೇಟರ್ ನ.1ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ‘ಅಣ್ಣನ ನೆನಪು’ ಸಾಕ್ಷ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಈ ನಾಟಕವನ್ನು ಹನು ರಾಮಸಂಜೀವ್ ನಿರ್ದೇಶಿಸಿದ್ದಾರೆ. ಮಾಹಿತಿಗೆ 9686869676 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕಾರ್ತಿಕ ಸಂಗೀತ ಸಂಭ್ರಮ



ಎಸ್. ಶಂಕರ್

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ನ.5ರಿಂದ ನ.9ರವರೆಗೆ ಶ್ರೀರಾಮ ಮಂದಿರದಲ್ಲಿ ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕರ್ನಾಟಕ ರಾಜ್ಯೋತ್ಸವ, ಹರಿದಾಸ ಸಂಭ್ರಮ ಮತ್ತು ಅನ್ನಮಾಚಾರ್ಯರ ಸಂಸ್ಮರಣೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪ್ರತಿನಿತ್ಯ ಸಂಜೆ ಸಂಗೀತ ಕಾರ್ಯಕ್ರಮ ನಡೆಯಲಿವೆ. 5ರಂದು ಸಂಜೆ 6 ಗಂಟೆಗೆ ಶಾಸ್ತ್ರೀಯ, ಭಾವಗೀತೆ ಹಾಗೂ ಚಿತ್ರಗೀತೆಗಳ ಸಂಗಮ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ. ಎಸ್. ಶಂಕರ್ ಅವರು ಗಾಯನ ಪ್ರಸ್ತುತಪಡಿಸಲಿದ್ದಾರೆ. ನ.6ರಿಂದ ನ.8ರವರೆಗೂ ಪ್ರತಿ ದಿನ ಸಂಜೆ 6 ಗಂಟೆಗೆ ಸಂಗೀತ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದ್ದು, ನ.9ರಂದು ಸಂಜೆ 5 ಗಂಟೆಯಿಂದ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅವರು ಹರಿದಾಸ ರೂಪಕವನ್ನು ನಿರೂಪಿಸಲಿದ್ದಾರೆ. ಬಳಿಕ ಸಂಗೀತ ಕಾರ್ಯಕ್ರಮ ನಡೆಯಲಿದೆ.

‘ಸೀತಾ ಪರಿತ್ಯಾಗ’ ತಾಳ ಮದ್ದಳೆ



ಕೇಶವ ಹೆಗಡೆ ಕೊಳಗಿ

ಬೆಂಗಳೂರು: ನಾಗರಬಾವಿಯಲ್ಲಿರುವ ಕರ್ನಾಟಕದ ನವೀಕರಿಸ ಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (ಕೆಆರ್‌ಇಡಿಎಲ್) ಸಭಾಂಗಣದಲ್ಲಿ ನ.2ರಂದು ಮಧ್ಯಾಹ್ನ 3 ಗಂಟೆಗೆ ‘ಸೀತಾ ಪರಿತ್ಯಾಗ’ ತಾಳ ಮದ್ದಳೆ ಹಮ್ಮಿಕೊಳ್ಳಲಾಗಿದೆ.

ಈ ತಾಳ ಮದ್ದಳೆಯನ್ನು ಜಗದೀಶ್ ಹೊಸಬಾಳೆ ಹಾಗೂ ವಿನಾಯಕ ವಾಜಗದ್ದೆ ಸಂಯೋಜಿಸಿದ್ದಾರೆ. ಹಿಮ್ಮೇಳದಲ್ಲಿ ಕೇಶವ ಹೆಗಡೆ ಕೊಳಗಿ (ಭಾಗವತಿಕೆ), ಎ.ಪಿ. ಫಾಟಕ್ (ಮದ್ದಳೆ) ಪಾಲ್ಗೊಳ್ಳ ಲಿದ್ದಾರೆ. ಮುಮ್ಮೇಳದಲ್ಲಿ ಸರ್ಪಂಗಳ ಈಶ್ವರ ಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್, ವಾಸುದೇವ ರಂಗಾ ಭಟ್, ವಿ. ಗಣಪತಿ ಭಟ್ ಭಾಗವಹಿಸಲಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ಲಭ್ಯ.

ಸಾಹಿತ್ಯ–ಸಂಸ್ಕೃತಿ ಉತ್ಸವ



ಆನೂರು ಅನಂತಕೃಷ್ಣ ಶರ್ಮ

ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯವು ನ.1ರಿಂದ ಡಿ.7ರವರೆಗೆ ಕೆಂಪೇಗೌಡ ನಗರದ ರಾಷ್ಟ್ರೋತ್ಥಾನ ಪರಿಷತ್ತಿನಲ್ಲಿರುವ ಕೇಶವಶಿಲ್ಪ ಸಭಾಂಗಣದಲಿ ಸಾಹಿತ್ಯ–ಸಂಸ್ಕೃತಿ ಉತ್ಸವ ಹಮ್ಮಿಕೊಂಡಿದೆ.

1ರಂದು ಸಂಜೆ 6 ಗಂಟೆಗೆ ಆನೂರು ಅನಂತಕೃಷ್ಣ ಶರ್ಮ ಅವರ ನಿರ್ದೇಶನ ದಲ್ಲಿ ‘ಲಯಲಾವಣ್ಯ’ ತಾಳವಾದ್ಯಗೋಷ್ಠಿ ನಡೆಯಲಿದೆ. 2ರಂದು ಬೆಳಿಗ್ಗೆ 10.30ರಿಂದ ಎಚ್.ಎಸ್. ವೇಣುಗೋಪಾಲ್ ಅವರ ನಿರ್ದೇಶನದಲ್ಲಿ ‘ಗೋಕುಲೋತ್ಸವ’ ಕೊಳಲು ವಾದನ ಹಮ್ಮಿಕೊಳ್ಳಲಾಗಿದೆ. 3ರಂದು ಸಂಜೆ 6 ಗಂಟೆಯಿಂದ ಪದ್ಮಿನಿ ಓಕ್ ಮತ್ತು ತಂಡದಿಂದ ‘ಸಂಘ ಶತಾಬ್ದ’ ನಾದನೈವೇದ್ಯ ಕಾರ್ಯಕ್ರಮ ನಡೆಯಲಿದೆ.

4ರಂದು ಸಂಜೆ 6 ಗಂಟೆಯಿಂದ ದಕ್ಷಿಣಾಮೂರ್ತಿ ಮತ್ತು ತಂಡದಿಂದ ನಾದಸ್ವರಗೋಷ್ಠಿ, 5ರಂದು ಸಂಜೆ 6 ಗಂಟೆಯಿಂದ ಬಿ.ವಿ. ರಾಜಾರಾಂ ನಿರ್ದೇಶನದಲ್ಲಿ ಕಲಾಗಂಗೋತ್ರಿ ತಂಡದಿಂದ ‘ಮೈಸೂರು ಮಲ್ಲಿಗೆ’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. 37 ದಿನಗಳ ಉತ್ಸವ ಇದಾಗಿದೆ

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

103 ಬಸ್ ತಂಗುದಾಣ ಸ್ಥಳಾಂತರಿಸಲು ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಬಡಾವಣೆ ಹಾಗೂ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿರುವ 103 ಬಸ್ ತಂಗುದಾಣಗಳನ್ನು ಬೇರೆಡೆಗೆ ಸ್ಥಳಾಂತರ ಮಾಡುವಂತೆ ಕೋರಿ ನಗರ ಪೊಲೀಸರು, ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಸಿಲ್ಕ್ ಬೋರ್ಡ್ ಜಂಕ್ಷನ್, ಚಿನ್ನಸ್ವಾಮಿ ಕ್ರೀಡಾಂಗಣ ಸೇರಿ 103 ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸಿ, ಸಂಚಾರ ದಟ್ಟಣೆಯ ಪ್ರಮಾಣ ತಗ್ಗಿಸಲು ಕ್ರಮ ಕೈಗೊಳ್ಳಲು ನಗರ ಸಂಚಾರ ಪೊಲೀಸರು ಮುಂದಾಗಿದ್ದಾರೆ.

ಟ್ರಾಫಿಕ್ ಸಿಗ್ನಲ್ ಬಳಿ ಬಸ್ ನಿಲ್ದಾಣಗಳಿರುವುದು ಸಂಚಾರ ದಟ್ಟಣೆಗೆ ಪ್ರಮುಖ ಕಾರಣವಾಗಿದೆ. ಅವೈಜ್ಞಾನಿಕ, ಅಸಮರ್ಪಕ ಬಸ್ ನಿಲ್ದಾಣ ಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು. ನಗರ ಸಂಚಾರ ಪೊಲೀಸರು ಹಾಗೂ ಬಿಎಂಟಿಸಿ ಅಧಿಕಾರಿಗಳು ಜಂಟಿ ಅಧ್ಯಯನ ನಡೆಸಿ 103 ನಿಲ್ದಾಣಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಈ ನಿಲ್ದಾಣಗಳನ್ನು ಸ್ಥಳಾಂತರಿಸಿದರೆ ದಟ್ಟಣೆ ತುಸು ತಗ್ಗಬಹುದು ಎಂದು ಅಂದಾಜಿಸಲಾಗಿದೆ.

ಈಗಿರುವ ಸ್ಥಳದಿಂದ ಸ್ವಲ್ಪ ದೂರದಲ್ಲಿ, ಸೂಕ್ತ ಸ್ಥಳದಲ್ಲಿ ಬಸ್ ತಂಗುದಾಣ ನಿರ್ಮಿಸಬೇಕು ಎಂದು ಅಧ್ಯಯನ ತಂಡವು ಶಿಫಾರಸು ಮಾಡಿದೆ.

ಸ್ಥಳಾಂತರಕ್ಕೆ ಗುರುತಿಸಿದ ಬಸ್ ನಿಲ್ದಾಣಗಳು: ಯಲಹಂಕದ ಮೂರು, ಕೆ.ಆರ್. ಪುರದ ಐದು, ಮಹದೇವಪುರದ ಏಳು, ಹೆಣ್ಣೂರಿನ ಎರಡು, ಪೀಣ್ಯದ ನಾಲ್ಕು, ಜಾಲಹಳ್ಳಿಯ ಮೂರು, ಚಿಕ್ಕಬಾಣಾವರದ 12, ಜಯನಗರದ ಮೂರು, ಬನಶಂಕರಿಯ ಒಂದು, ಬೆಳ್ಳಂದೂರಿನ ಮೂರು, ವೈಟ್‌ಫೀಲ್ಡ್‌ನ ಒಂದು, ಜೆ.ಪಿ.ನಗರದ ನಾಲ್ಕು, ಕಬ್ಬನ್‌ಪಾರ್ಕ್‌ನ ಮೂರು, ಕಾಮಾಕ್ಷಿಪಾಳ್ಯದ ಏಳು, ಜ್ಞಾನಭಾರತಿಯ 12 ಬಸ್ ತಂಗುದಾಣಗಳನ್ನು ಸ್ಥಳಾಂತರಕ್ಕೆ ಗುರುತಿಸಲಾಗಿದೆ.

ಕಸಾಪ ಅಧ್ಯಕ್ಷರ ವಿರುದ್ಧ ಕ್ರಮಕ್ಕೆ ಜಿಲ್ಲಾ–ಗಡಿನಾಡು ಘಟಕಗಳ ಅಧ್ಯಕ್ಷರಿಂದ ಮನವಿ

‘ಕತ್ತಲಿನಲ್ಲಿಟ್ಟು ಆಡಳಿತ ನಡೆಸಿದರು’

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರು ಚುನಾಯಿತ ಪ್ರತಿನಿಧಿ ಗಳಾದ ನಮ್ಮನ್ನು ಕತ್ತಲಿ ನಲ್ಲಿಟ್ಟು ಆಡಳಿತ ನಡೆಸಿದ್ದಾರೆ. ಅವರ ತಪ್ಪುಗಳನ್ನು ಬಯಲಿಗೆಳೆಯುವ ಮೂಲಕ ಪರಿಷತ್ತಿನ ಪಾವಿತ್ರ್ಯ ಮತ್ತು ಘನತೆಯನ್ನು ಕಾಪಾಡಬೇಕು’ ಎಂದು ಕಸಾಪ ಜಿಲ್ಲಾ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರು ಆಗ್ರಹಿಸಿದ್ದಾರೆ.

ಈ ಬಗ್ಗೆ ಕಸಾಪ ಬೆಂಗಳೂರು ನಗರ ಘಟಕದ ಎಂ.ಪ್ರಕಾಶ ಮೂರ್ತಿ, ಶಿವಮೊಗ್ಗ ಘಟಕದ ಡಿ.ಮಂಜುನಾಥ್, ಮೈಸೂರು ಘಟಕದ ಮಡ್ಡೀಕೆರೆ ಗೋಪಾಲ್, ಕೊಡಗು ಘಟಕದ ಕೇಶವ ಕಾಮತ್, ಉತ್ತರ ಕನ್ನಡ ಘಟಕದ ಬಿ.ಎನ್. ವಾಸರೆ, ತಮಿಳುನಾಡು ಘಟಕದ ತಮಿಳ್ ಸೆಲ್ವಿ ಹಾಗೂ ಯಾದಗಿರಿ ಘಟಕದ ಸಿದ್ದಪ್ಪ ಹೊಟ್ಟಿ ಅವರು ಆಡಳಿತಾಧಿಕಾರಿ ಕೆ.ಎಂ. ಗಾಯಿತ್ರಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

‘ಕಸಾಪ ಅಧ್ಯಕ್ಷರ ಆರ್ಥಿಕ ಅಶಿಸ್ತು ಮತ್ತು ದುರಾಡಳಿತದ ಕಾರಣದಿಂದಾಗಿ ನೇಮಕಗೊಂಡಿರುವ ಆಡಳಿತಾಧಿಕಾರಿ ಅವರು ನಿಷ್ಪಕ್ಷಪಾತ ಮತ್ತು ನ್ಯಾಯಬದ್ಧವಾದ ವಿಚಾರಣೆ ನಡೆಸಿ, ಅಧ್ಯಕ್ಷರಿಂದ ಆಗಿರುವ ತಪ್ಪುಗಳನ್ನು ಬಯಲಿಗೆಳೆಯಬೇಕು. ಅವರ ತಪ್ಪುಗಳು ಸಾಬೀತಾದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಅಗತ್ಯ ಬಿದ್ದಲ್ಲಿ ನಾವು ಸಹ ನ್ಯಾಯಸಮ್ಮತ ಕಾನೂನು ಹೋರಾಟಕ್ಕೆ ಸಹಕರಿಸುತ್ತೇವೆ’ ಎಂದು ಹೇಳಿದ್ದಾರೆ.

‘ಕಳೆದ ಮೂರು ವರ್ಷ ಹನ್ನೊಂದು ತಿಂಗಳ ಅವಧಿಯಲ್ಲಿ ಮಹೇಶ ಜೋಶಿ ಅವರು ತೆಗೆದುಕೊಂಡ ಏಕಸ್ವಾಮ್ಯ ತೀರ್ಮಾನ, ಕಾನೂನು ಬಾಹಿರವಾದ ಬೈ–ಲಾ ತಿದ್ದುಪಡಿಯನ್ನು ರದ್ದು ಮಾಡಬೇಕು. ಅಲ್ಲದೆ, ಈವರೆಗೆ ಅವರು ತೆಗೆದುಕೊಂಡಿರುವ ಆರ್ಥಿಕ ಹಾಗೂ ಆಡಳಿತಾತ್ಮಕ ನಿರ್ಧಾರಗಳಿಗೆ ಸಂಬಂಧಿಸಿದಂತೆ ನಾವು ನೀಡಿದ ಯಾವುದೇ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಅವರು ಪರಿಗಣಿಸಿರಲಿಲ್ಲ. ಆದ್ದರಿಂದ ಅವರು ತೆಗೆದುಕೊಂಡಿರುವ ಎಲ್ಲ ತೀರ್ಮಾನಗಳಿಗೂ ಅವರೊಬ್ಬರೇ ನೇರ ಹೊಣೆ. ಇದರಲ್ಲಿ ನಾವುಗಳು ಯಾವುದೇ ರೀತಿಯಲ್ಲೂ ಭಾಗೀದಾರರಲ್ಲ’ ಎಂದು ತಿಳಿಸಿದ್ದಾರೆ.

‘ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿ ದಂತೆ ನೀಡಲಾಗುವ ಜವಾಬ್ದಾರಿ ಗಳನ್ನು ನಿರ್ವಹಿಸಲು ಸಿದ್ಧರಿದ್ದೇವೆ. ಜಿಲ್ಲಾ ಮತ್ತು ಗಡಿನಾಡು ಘಟಕಗಳ ಪೂರ್ವನಿಯೋಜಿತ ಕಾರ್ಯಕ್ರಮ ಗಳಾದ ಸಮ್ಮೇಳನಗಳು, ವಿಚಾರ ಸಂಕಿರಣ, ದತ್ತಿ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಗತ್ಯ ಅನುದಾನ ಒದಗಿಸಬೇಕು’ ಎಂದು ಮನವಿ ಮಾಡಿದ್ದಾರೆ.



ಎಂ.ಪ್ರಕಾಶಮೂರ್ತಿ ಮನವಿ ಪತ್ರ ಪ್ರದರ್ಶಿಸಿದರು. ಡಿ.ಮಂಜುನಾಥ್, ಮಡ್ಡೀಕೆರೆ ಗೋಪಾಲ್, ಕೇಶವ ಕಾಮತ್, ಬಿ.ಎನ್.ವಾಸರೆ, ತಮಿಳು ಸೆಲ್ವಿ ಮತ್ತು ಸಿದ್ದಪ್ಪ ಹೊಟ್ಟಿ ಉಪಸ್ಥಿತರಿದ್ದರು

ಟೆಂಡರ್ ಬಿಡ್ ಅವಧಿ ವಿಸ್ತರಣೆ

ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗಿನ ಸುರಂಗ ರಸ್ತೆ ಕಾಮಗಾರಿ



‘ಟನಲ್ ಕ್ರಾಸ್ ಪ್ಯಾಸೇಜ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ (ಉತ್ತರ–ದಕ್ಷಿಣ ಕಾರಿಡಾರ್) ಮೂರು ಪಥಗಳ ಅವಳಿ ಸುರಂಗ ರಸ್ತೆ (ಟ್ವಿನ್ ಟನಲ್) ನಿರ್ಮಾಣಕ್ಕೆ ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಹೆಚ್ಚಿನ ಕಂಪನಿಗಳು ಭಾಗವಹಿಸದ ಕಾರಣ ಬಿಡ್ ಸಲ್ಲಿಸುವ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಲಾಗಿದೆ.

ಬೃಹತ್ ಮೂಲಸೌಕರ್ಯಗಳ ಅಭಿವೃದ್ಧಿಗೆ ರಚಿಸಲಾಗಿರುವ ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)– ‘ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ’ (ಬಿ–ಸ್ಮೈಲ್) ವತಿಯಿಂದ ಎರಡು ಪ್ಯಾಕೇಜ್‌ಗಳಲ್ಲಿ ‘ನಿರ್ಮಾಣ–ಕಾರ್ಯಾಚರಣೆ–ವರ್ಗಾವಣೆ’ (ಬೂಟ್) ಮಾದರಿಯಲ್ಲಿ ₹17,698 ಕೋಟಿ ಅಂದಾಜು ವೆಚ್ಚದಲ್ಲಿ ಜುಲೈ 16ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಸೆಪ್ಟೆಂಬರ್ 3ರಂದು ಬಿಡ್ ಸಲ್ಲಿಸಲು ಅಂತಿಮ ದಿನವಾಗಿತ್ತು.

ಅದಾನಿ ಗ್ರೂಪ್, ಎಲ್ ಆ್ಯಂಡ್ ಟಿ, ಟಾಟಾ ಪ್ರಾಜೆಕ್ಟ್ಸ್ ಸೇರಿದಂತೆ ದೇಶದ ಪ್ರಮುಖ ಹತ್ತು ಸಂಸ್ಥೆಗಳು ನಗರದಲ್ಲಿನ ಉದ್ದೇಶಿತ ಸುರಂಗ ರಸ್ತೆ ಯೋಜನೆಯ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿ ತೋರಿವೆ ಎಂದು ಹೇಳಲಾಗಿತ್ತು.

ಈ ಟೆಂಡರ್ ಅವಧಿಯನ್ನು ಸೆ.3ರಿಂದ ಸೆ.30ಕ್ಕೆ ವಿಸ್ತರಿಸಲಾಯಿತು. ನಂತರ, ಅ.29ರ ಗಡುವು ನೀಡಲಾಗಿತ್ತು. ಇದೀಗ ಮತ್ತೆ ಅವಧಿಯನ್ನು ವಿಸ್ತರಿಸಿ, ನ.11ರವರೆಗೆ ಬಿಡ್ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಬಿಬಿಎಂಪಿ, ಬಿ–ಸ್ಮೈಲ್ ನೋಂದಣಿಯಾಗಿರುವ ಗುತ್ತಿಗೆದಾರರು ಅಥವಾ ಕೇಂದ್ರ ಲೋಕೋಪಯೋಗಿ, ರಾಜ್ಯ ಲೋಕೋಪಯೋಗಿ ಇಲಾಖೆ, ರೈಲ್ವೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರು ಬಿಡ್ ಸಲ್ಲಿಸಲು ಅರ್ಹರಾಗಿರುತ್ತಾರೆ. ಜಂಟಿ ಸಂಸ್ಥೆಗಳಾಗಿ ಅಥವಾ ಒಕ್ಕೂಟಗಳಾಗಿಯೂ ಬಿಡ್ ಸಲ್ಲಿಬಹುದಾಗಿದೆ ಎಂದು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಕ್ರೋಶ: ‘ಸುರಂಗ ರಸ್ತೆಯಿಂದ ಲಾಲ್‌ಬಾಗ್ ಉದ್ಯಾನ, ಸ್ಯಾಂಕಿ ಕೆರೆ, ಹೆಬ್ಬಾಳ ಕೆರೆಗೆ ಧಕ್ಕೆಯಾಗುತ್ತಿದೆ. ಸುರಂಗ ರಸ್ತೆಯಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ’ ಎಂದು ನಾಗರಿಕರು, ಪರಿಸರ ಕಾರ್ಯಕರ್ತರು, ತಜ್ಞರು ಅಭಿಪ್ರಾಯಪಟ್ಟಿದ್ದರು. ‘ಈ ಯೋಜನೆ ಕೈಬಿಡಬೇಕು’ ಎಂದು ಬಿಜೆಪಿ ಮುಖಂಡರು ಆಗ್ರಹಿಸುತ್ತಿದ್ದಾರೆ.

ತೇಜಸ್ವಿ, ನಾನು ತಜ್ಞರಲ್ಲ: ಡಿಕೆಶಿ

‘ಸುರಂಗ ರಸ್ತೆ ವಿಚಾರದಲ್ಲಿ ನಾನು ತಾಂತ್ರಿಕ ತಜ್ಞ ಅಲ್ಲ. ತೇಜಸ್ವಿ ಸೂರ್ಯ ಅವರೂ ತಜ್ಞರಲ್ಲ. ಅದಕ್ಕಾಗಿಯೇ ತಾಂತ್ರಿಕ ತಜ್ಞರ ತಂಡವೇ ಇದೆ. ಅವರು ಕೆಲಸ ಮಾಡಲಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಸುರಂಗ ರಸ್ತೆ ಮಾಡಲು ಬಿಡುವುದಿಲ್ಲ’ ಎಂಬ ಸಂಸದ ತೇಜಸ್ವಿ ಸೂರ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ತೇಜಸ್ವಿ ನಗರ ರೈಲು ಯೋಜನೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಅದನ್ನು ಮಾಡಲಿ. ಅದಕ್ಕೆ ಅಗತ್ಯವಾದ ಅನುದಾನವನ್ನು ಕೇಂದ್ರ ಸರ್ಕಾರದಿಂದ ಕೊಡಿಸಲಿ. ನಮ್ಮದೇ ರಾಜ್ಯದ ಸೋಮಣ್ಣ ಅವರು ಕೇಂದ್ರ ಸಚಿವರಾಗಿದ್ದಾರೆ. ಅವರ ನೆರವು ಪಡೆಯಲಿ, ಏನು ಬೇಕಾದರೂ ಮಾಡಲಿ. ಅವರು ಹೋರಾಟ ಮಾಡುವುದಾದರೆ ಮಾಡಲಿ, ಬೇಡ ಎಂದು ಹೇಳಿದವರು ಯಾರು? ಬಿಜೆಪಿಯಲ್ಲಿ ತೇಜಸ್ವಿ ಸೂರ್ಯ ಹಾಗೂ ಅಶೋಕ ಹೊರತಾಗಿ ಉಳಿದ ಯಾವುದೇ ನಾಯಕರು ಮಾತನಾಡುತ್ತಿಲ್ಲ’ ಎಂದರು.

‘ಸ್ಟೀಲ್ ಬ್ರಿಡ್ಜ್ ಮಾದರಿಯಲ್ಲೇ ಟನಲ್ ರಸ್ತೆ ಯೋಜನೆ ಮುರಿದು ಬೀಳುತ್ತಾ’ ಎಂದು ಸುದ್ದಿಗಾರರು ಕೇಳಿದಾಗ, ‘ನಾವು ನಮ್ಮ ಕೆಲಸ ಮಾಡುತ್ತೇವೆ. ನಮ್ಮ ಆಸಕ್ತಿ ನೋಡಿ ಜನರು ನಮ್ಮ ಪ್ರಯತ್ನಕ್ಕೆ ಬೆಂಬಲ ನೀಡುತ್ತಿದ್ದಾರೆ. ನಮ್ಮ ಕೆಲಸ ಅನುಷ್ಠಾನ ಆಗಲಿದೆ ಎಂಬ ವಿಶ್ವಾಸ ಇದೆ’ ಎಂದು ಶಿವಕುಮಾರ್ ಹೇಳಿದರು.

ಸುರಂಗ ರಸ್ತೆಯ ಡಿಪಿಆರ್‌ನಲ್ಲಿ 121 ಲೋಪಗಳನ್ನು ಗುರುತಿಸಿರುವ ಸರ್ಕಾರವೇ ರಚಿಸಿರುವ ತಜ್ಞರ ಸಮಿತಿ ವರದಿ, ಭೂವಿಜ್ಞಾನ, ಭೂತಾಂತ್ರಿಕ ಸೇರಿದಂತೆ ಮಣ್ಣು ಅಧ್ಯಯನ ಪರೀಕ್ಷೆಗಳೇ ನಡೆದಿಲ್ಲ ಎಂದು ಹೇಳಿದೆ. ಸುರಂಗ ರಸ್ತೆಗೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲೂ ಇದೆ.

ಪುಸ್ತಕ ಬಿಡುಗಡೆ

ಪ್ರಜಾವಾಣಿ ಚಿತ್ರ



ಬೆಂಗಳೂರಿನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಫಿಬಾ (ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಫೆಡರೇಷನ್) ಏಷ್ಯಾ ಅಧ್ಯಕ್ಷ ಕೆ. ಗೋವಿಂದರಾಜ್ ಅವರ ‘ಬ್ಯಾಸ್ಕೆಟ್‌ಬಾಲ್ ಬಿಲೀವರ್’ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಫಿಬಾ ಕಾರ್ಯನಿರ್ವಾಹಕ ನಿರ್ದೇಶಕ ಹಗೋಪ್ ಖಾಜ್ರಿಯನ್, ಮಹಾಪ್ರಧಾನ ಕಾರ್ಯದರ್ಶಿ ಆ್ಯಂಡ್ರಿಯಾಸ್ ಝುಗ್ಲಿಸ್, ಅಧ್ಯಕ್ಷ ಶೇಖ್ ಸೌದ್ ಅಲಿ ಥಾನಿ, ರಾಜ್ಯ ಗೃಹ ಸಚಿವ ಜಿ. ಪರಮೇಶ್ವರ, ಸಚಿವರಾದ ಎಂ. ಬಿ. ಪಾಟೀಲ, ಎಚ್. ಸಿ. ಮಹದೇವಪ್ಪ ಮತ್ತು ಶರಣಪ್ರಕಾಶ್ ಪಾಟೀಲ ಹಾಜರಿದ್ದರು

ಕಿಕ್‌ಸ್ಟಾರ್ಟ್ ತಂಡಕ್ಕೆ ರೋಚಕ ಜಯ

ಬೆಂಗಳೂರು: ಎನ್.ರಾಕೇಶ್ ಸಿಂಗ್ (51ನೇ ನಿ. ಹಾಗೂ 90 + 5ನೇ ನಿ.) ಅವರ ಅವಳಿ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಬುಧವಾರ 2–1ರಿಂದ ಬಿಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಬಿಎಫ್‌ಸಿ 1–0 ಮುನ್ನಡೆ ಗಳಿಸಿತ್ತಾದರೂ, ರಾಕೇಶ್ ಅವರು ಸತತ ಎರಡು ಗೋಲು ಗಳಿಸಿ ಕಿಕ್‌ಸ್ಟಾರ್ಟ್ ತಂಡಕ್ಕೆ ರೋಚಕ ಜಯ ತಂದಿತ್ತರು.

ಇತರೆ ಪಂದ್ಯಗಳಲ್ಲಿ ಯುನೈಟೆಡ್ ಸ್ಟಾರ್ಸ್ ಎಫ್‌ಸಿ ತಂಡವು 2–1ರಿಂದ ಪರಿಕ್ರಮ ಎಫ್‌ಸಿ ವಿರುದ್ಧ ಹಾಗೂ ಎಫ್‌ಸಿ ಅಗ್ನಿಪುತ್ರ ತಂಡವು 3–0ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡದ ವಿರುದ್ಧ ಗೆಲುವು ದಾಖಲಿಸಿದವು.

ಹಣ ಪೋಲು ಮಾಡುವ ಯೋಜನೆ: ಸಂಸದ ತೇಜಸ್ವಿ ಸೂರ್ಯ

₹43 ಸಾವಿರ ಕೋಟಿ ವೆಚ್ಚ ಅಗತ್ಯವಿದೆಯೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುರಂಗ ರಸ್ತೆ ನಿರ್ಮಾಣಕ್ಕೆ ₹43 ಸಾವಿರ ಕೋಟಿ ವಿನಿಯೋಗಿಸಲಾಗುತ್ತಿದೆ. ಇದು ರಾಜ್ಯ ಸರ್ಕಾರದ ಸಾಮಾಜಿಕ ಪಿಡುಗಿನ ನಿವಾರಣೆಗಾಗಿಯೇ? 1,800 ಕಾರುಗಳ ಮಾಲೀಕರ ಸಂಚಾರಕ್ಕೆ ಇಷ್ಟೊಂದು ವೆಚ್ಚ ಅಗತ್ಯವಿದೆಯೇ’ ಎಂದು ಸಂಸದ ತೇಜಸ್ವಿ ಸೂರ್ಯ ಪ್ರಶ್ನಿಸಿದರು.



ತೇಜಸ್ವಿ ಸೂರ್ಯ

‘ಬೆಂಗಳೂರಿನಲ್ಲಿ ಕಾರು ಇಲ್ಲದಿದ್ದರೆ ಯಾವುದೇ ಗಂಡಿಗೂ ಹೆಣ್ಣು ಕೊಡುವುದಿಲ್ಲ’ ಎಂಬುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನೀಡಿದ ಹೇಳಿಕೆಗೆ ತೇಜಸ್ವಿ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

ಅಷ್ಟೊಂದು ದೊಡ್ಡ ಮೊತ್ತ ವಿನಿಯೋಗಿಸಿ 18 ಕಿ.ಮೀ ಸುರಂಗ ರಸ್ತೆ ನಿರ್ಮಾಣ ಮಾಡಿದರೆ ಎಲ್ಲ ಮಾರ್ಗಗಳ ಸಂಚಾರ ದಟ್ಟಣೆಯ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ತಜ್ಞರ ಸಲಹೆ, ಕಾರ್ಯಸಾಧ್ಯತೆಯ ಕುರಿತು ಅಧ್ಯಯನ ನಡೆಸಿಲ್ಲ. ಅಪಘಾತಗಳ ನಿರ್ವಹಣೆ ಬಗ್ಗೆ ಸೂಕ್ತ ಪರಿಹಾರ ಕಂಡುಕೊಂಡಿಲ್ಲ. ಸಾರ್ವಜನಿಕರ ಹಣ ಪೋಲು ಮಾಡುವ ಸರ್ಕಾರದ ನಡೆಗೆ ಇದಕ್ಕಿಂತ ಬೇರೆ ನಿದರ್ಶನವಿಲ್ಲ ಎಂದು ಟೀಕಿಸಿದರು.

‘ಬೆಂಗಳೂರಿನ ಶೇ 70 ರಷ್ಟು ಜನರು ಸಾರ್ವಜನಿಕ ಸಾರಿಗೆಗಳಲ್ಲಿ ಸಂಚರಿಸುವಂತಾಗಬೇಕು. ಅದಕ್ಕಾಗಿ ಐದು ಅಂಶಗಳನ್ನು ಒಳಗೊಂಡ ವೈಜ್ಞಾನಿಕ ಪರಿಹಾರಗಳನ್ನು ನೀಡಿದ್ದೇವೆ. ಹೊಸ ಯೋಜನೆಗಳನ್ನು ಆರಂಭಿಸುವ ಮೊದಲು ಬಾಕಿ ಇರುವ ಯೋಜನೆ ಮುಗಿಸಬೇಕು. ಕಡಿಮೆ ಸಮಯ, ಕಡಿಮೆ ಖರ್ಚಿನಲ್ಲಿ ಅತಿ ಹೆಚ್ಚು ಜನರಿಗೆ ಪ್ರಯೋಜನ ಲಭಿಸಬೇಕು. ಕೇವಲ ಕಾರುಗಳ ಸಂಚಾರಕ್ಕೆ ಆದ್ಯತೆ ನೀಡಬಾರದು. ಹಳದಿ ಮೆಟ್ರೊ ಮಾರ್ಗ ಆರಂಭವಾದ ನಂತರ ರೇಷ್ಮೆ ಮಂಡಳಿ ರಸ್ತೆಯಲ್ಲಿ ಕಾರುಗಳ ಸಂಚಾರ ದಟ್ಟಣೆ ಶೇ 37ರಷ್ಟು, ನೇರಳೆ ಮೆಟ್ರೊ ಮಾರ್ಗದಿಂದ ಶೇ 12ರಿಂದ 14ರಷ್ಟು ಸಾರಿಗೆ ದಟ್ಟಣೆ ಕಡಿಮೆಯಾಗಿದೆ. ಕಾರು ಬಳಸುವವರೂ ಹವಾನಿಯಂತ್ರಿತ ಮೆಟ್ರೊಗಳಿಗೆ ಒಲವು ತೋರುತ್ತಿದ್ದಾರೆ. ಮೆಟ್ರೊ ಜಾಲ ವಿಸ್ತರಣೆ, ಉಪನಗರ ರೈಲು ಯೋಜನೆ, ಟ್ರ್ಯಾಮ್‌ಗಳು, ವರ್ತುಲ ರೈಲು ಯೋಜನೆಗಳು ಬೇಕಿವೆ ಎಂದು ಸಲಹೆ ನೀಡಿದರು.

ಮೆಟ್ರೊ ರೈಲು ಹೊಸ ಯೋಜನೆಗಳ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ. ಪ್ರಯಾಣ ದರ ಹೆಚ್ಚಳದ ಪರಿಣಾಮ ಜನರು ಸ್ವಂತ ವಾಹನಗಳನ್ನೇ ಹೆಚ್ಚಾಗಿ ಬಳಸುತ್ತಿದ್ದಾರೆ. ಇದರಿಂದ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ. ಫುಟ್‌ಪಾತ್‌ಗಳಿಲ್ಲದೆ ಪಾದಚಾರಿಗಳು ಅಧಿಕ ಸಂಖ್ಯೆಯಲ್ಲಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಪುಲ್ವಾಮಾ ದಾಳಿಯಲ್ಲಿ ಕರ್ನಾಟಕದ ಮೂವರು ಮೃತರಾಗಿದ್ದರು. ಆ ಪ್ರಕರಣ ದೊಡ್ಡ ಸುದ್ದಿ ಆಗಿತ್ತು. ಬೆಂಗಳೂರಿನಲ್ಲಿ ಪ್ರತಿದಿನ 15- 20 ಪಾದಚಾರಿಗಳು ಅಪಘಾತದಲ್ಲಿ ಮೃತರಾಗುತ್ತಿದ್ದಾರೆ. ಇಂತಹ ವಿಷಯಗಳಿಗೆ ಸರ್ಕಾರ ಆದ್ಯತೆ ನೀಡುತ್ತಿಲ್ಲ ಎಂದು ದೂರಿದರು.

ಸರ್ಜಾಪುರದಿಂದ ಹೆಬ್ಬಾಳ ಮೆಟ್ರೊ ಜಾಗದಲ್ಲೇ ಸುರಂಗ ರಸ್ತೆ ಪ್ರಸ್ತಾಪವಿದೆ. ಸರ್ಜಾಪುರ– ಹೆಬ್ಬಾಳ ಮೆಟ್ರೊದಿಂದ ಗಂಟೆಗೆ 69 ಸಾವಿರ ಜನರು ಪ್ರಯಾಣಿಸಬಹುದು. ಸರ್ಕಾರಕ್ಕೆ ಅಷ್ಟು ಜನರು ಓಡಾಡುವುದು ಬೇಕಾಗಿಲ್ಲ. ಸಮಗ್ರ ಸಂಚಾರ ಯೋಜನೆಯಡಿ ಬೆಂಗಳೂರಿಗೆ 300 ಕಿ.ಮೀ ಮೆಟ್ರೊ ಜಾಲ ಆಗಬೇಕು. ಆಗ ಬೆಂಗಳೂರಿನ ಯಾವುದೇ ಸ್ಥಳದಲ್ಲಿದ್ದರೂ ಕಾಲ್ನಡಿಗೆಯಲ್ಲಿ ಐದು ನಿಮಿಷಕ್ಕೆ ಮೆಟ್ರೊ ನಿಲ್ದಾಣ ಸಿಗುತ್ತದೆ. ಪ್ರತಿ 3 ನಿಮಿಷಕ್ಕೊಂದು ರೈಲು ಸಾಗಬೇಕು. ಇದು ಬಿಜೆಪಿಯ ಪರ್ಯಾಯ ಸಲಹೆ ಎಂದು ವಿವರಿಸಿದರು.

‘ಪುಕ್ಕಟೆ ಸಲಹೆ ಬಿಡಿ, ಕೇಂದ್ರದ ಅನುದಾನ ತನ್ನಿ’

ನವದೆಹಲಿ: ವಿಮಾನದ ತುರ್ತು ನಿರ್ಗಮನ ದ್ವಾರವನ್ನು ಯಾವಾಗ ತೆರೆಯಬೇಕೆಂದು ಸಾಮಾನ್ಯ ಜ್ಞಾನ ಇಲ್ಲದ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ಈಗ ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡುವುದು ಹೇಗೆ ಎಂಬುದರ ಕುರಿತು ಉಪನ್ಯಾಸ ನೀಡುತ್ತಿದ್ದಾರೆ ಎಂದು ರಾಷ್ಟ್ರೀಯ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ವ್ಯಂಗ್ಯವಾಡಿದ್ದಾರೆ.

‘ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಈ ಬುದ್ಧಿವಂತಿಕೆ ಎಲ್ಲಿತ್ತು? ತಮ್ಮ ಪಕ್ಷ ಅಧಿಕಾರ ಕಳೆದುಕೊಂಡ ನಂತರ ಅವರಿಗೆ ಇದ್ದಕ್ಕಿದ್ದಂತೆ ಬೆಂಗಳೂರಿನ ಸಂಚಾರ ಅವ್ಯವಸ್ಥೆಯ ಅರಿವಾಯಿತೇ‘ ಎಂದು ಅವರು ಪ್ರಶ್ನಿಸಿದ್ದಾರೆ.

ದಟ್ಟಣೆ ಕಡಿಮೆ ಮಾಡುವುದು ಪ್ರಮುಖ ಆದ್ಯತೆಯಾಗಿದ್ದರೆ, ಅವರ ಪಕ್ಷವು ಜನಾದೇಶ ಹೊಂದಿದ್ದಾಗ ಅವರು ಪವರ್‌ಪಾಯಿಂಟ್ ಮೂಲಕ ಸಲಹೆ ನೀಡಲಿಲ್ಲ ಏಕೆ‘ ಎಂದು ಅವರು ಕೇಳಿದ್ದಾರೆ.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಭಾರತದ ಐಟಿ ಹಬ್ ಆಯಿತು. ತೇಜಸ್ವಿ ಅವರಂತಹ ಸ್ವಯಂಘೋಷಿತ ‘ನಗರ ಯೋಜನೆ ತಜ್ಞರ‘ ಶಬ್ದ ಮಾಲಿನ್ಯದ ಹೊರತಾಗಿಯೂ ನಗರ ಮತ್ತಷ್ಟು ಪ್ರಗತಿ ಸಾಧಿಸುತ್ತಿದೆ. ಇಂತಹ ಚಿಲ್ಲರೆ ರಾಜಕಾರಣ ಮಾಡಿ ಪುಕ್ಕಟೆ ಸಲಹೆ ನೀಡುವುದನ್ನು ಬಿಟ್ಟು ಕೇಂದ್ರ ಸರ್ಕಾರದ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಲಿ’ ಎಂದು ಅವರು ಸವಾಲು ಹಾಕಿದ್ದಾರೆ.

ಪಾಲಿಕೆಗಳಲ್ಲಿ ಭ್ರಷ್ಟಾಚಾರ: ಸಿ.ಎಂ.ಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ಹಾಗೂ ಐದು ನಗರ ಪಾಲಿಕೆಗಳಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸುವ ಸಲುವಾಗಿ ಸರ್ಕಾರವು ತೆಗೆದುಕೊಳ್ಳಬೇಕಿರುವ ಕ್ರಮಗಳ ಬಗ್ಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಗೆ ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎನ್.ಆರ್. ರಮೇಶ್ ಅವರು ಬಹಿರಂಗ ಪತ್ರ ಬರೆದಿದ್ದಾರೆ.

‘ಬಿಬಿಎಂಪಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ 10–12 ವರ್ಷಗಳಿಂದ ಭ್ರಷ್ಟಾಚಾರದ ಪ್ರಮಾಣ ಊಹೆಗೂ ನಿಲುಕದಷ್ಟು ಅಂಕೆ ಮೀರಿ ಬೆಳೆದು ನಿಂತಿದೆ. ಎಂಜಿನಿಯರಿಂಗ್, ಕಂದಾಯ, ನಗರ ಯೋಜನೆಗಳಲ್ಲಿ ಅತ್ಯಂತ ಹೆಚ್ಚು ಭ್ರಷ್ಟಾಚಾರವಿದೆ’ ಎಂದು ಅವರು ಹೇಳಿದ್ದಾರೆ.

ಈ ಭ್ರಷ್ಟಾಚಾರವನ್ನು ನಿಯಂತ್ರಿಸಲು ಎಂಟು ಸಲಹೆಗಳನ್ನು ಅವರು ನೀಡಿದ್ದಾರೆ. ‘ಆಡಳಿತದ ಕೆಳ ಹಂತದಿಂದ ಅಂತಿಮ ಹಂತದವರೆಗೆ ಸಂಪೂರ್ಣವಾಗಿ ‘ಕಾಗದ ರಹಿತ ಆಡಳಿತ’ ಜಾರಿ. ‘ವಿದ್ಯುನ್ಮಾನ ಪ್ರತಿಗಳ ಕಡತ’ (ಇ–ಫೈಲ್) ಕಡ್ಡಾಯವಾಗಬೇಕು. ಸಾರ್ವಜನಿಕರಾಗಲೀ ಅಥವಾ ಗುತ್ತಿಗೆದಾರರಾಗಲೀ ಕಚೇರಿಯಿಂದ ಕಚೇರಿಗೆ ಅಲೆಯುವುದನ್ನು ತಪ್ಪಿಸಿ, ಕಡತಗಳನ್ನು ಮೂರು ದಿನದಲ್ಲಿ ವಿಲೇವಾರಿ ಮಾಡುವಂತೆ ಸೂಚಿಸಬೇಕು. ಇಲ್ಲದಿದ್ದರೆ ಕಠಿಣ ಕ್ರಮವಾಗಬೇಕು. ಪ್ರತಿಯೊಂದು ಇಲಾಖೆಯ ಕೆಳ ಹಂತದ ಕಚೇರಿಯಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಿ, ಆರು ತಿಂಗಳ ದಾಖಲೆ ಹೊಂದುವಂತೆ ಮಾಡಬೇಕು’ ಎಂದು ಹೇಳಿದ್ದಾರೆ.

‘ಅಧಿಕಾರಿಗಳು / ನೌಕರರು ಗುತ್ತಿಗೆದಾರರನ್ನಾಗಲೀ ಅಥವಾ ಗ್ರಾಹಕರನ್ನಾಗಲೀ ಅವರವರ ಅಧಿಕೃತ ಕಚೇರಿಗಳನ್ನು ಹೊರತುಪಡಿಸಿ, ಖಾಸಗಿ ಸ್ಥಳಗಳಲ್ಲಿ ಭೇಟಿ ಮಾಡುವುದನ್ನು ನಿಷೇಧಿಸಬೇಕು. ಅಧಿಕಾರಿಯು ಬಳಸುವ ಸರ್ಕಾರಿ ಮತ್ತು ಸ್ವಂತ ವಾಹನಗಳಿಗೆ ಜಿಪಿಎಸ್ ಅಳವಡಿಸಬೇಕು. ಅಧಿಕಾರಿ / ನೌಕರರು ನಿರ್ವಹಿಸಿರುವ ಕಾರ್ಯದ ಬಗ್ಗೆ ವಿಶೇಷ ತಂಡದಿಂದ ಪ್ರತಿ ತಿಂಗಳಿಗೊಮ್ಮ ಮಾಹಿತಿ ಪಡೆಯಬೇಕು. ಆಯುಕ್ತರು ಸೇರಿದಂತೆ ಎಲ್ಲ ಸಿಬ್ಬಂದಿಯೂ ಪ್ರತಿ ವರ್ಷ ಆಸ್ತಿ ಘೋಷಣೆ ಮಾಡಿ, ಲೋಕಾಯುಕ್ತ ಕಚೇರಿಗೆ ಸಲ್ಲಿಸುವುದನ್ನು ಕಡ್ಡಾಯಗೊಳಿಸುವ ನಿಯಮ ಜಾರಿ ಮಾಡಬೇಕು’ ಎಂದು ಎನ್.ಆರ್. ರಮೇಶ್ ಸಲಹೆ ನೀಡಿದ್ದಾರೆ.

ಅನಧಿಕೃತ ಪಿ.ಜಿಗಳಿಗೆ ಬೀಗಮುದ್ರೆ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿ.ಜಿ ಉದ್ಯಮ ನಡೆಸುತ್ತಿರುವವರು ಉದ್ದಿಮೆ ಪರವಾನಗಿ ಪಡೆಯುವುದು ಕಡ್ಡಾಯವಾಗಿದ್ದು, ಅನಧಿಕೃತ ಪೇಯಿಂಗ್ ಗೆಸ್ಟ್‌ಗಳಿಗೆ (ಪಿ.ಜಿ) ಬೀಗ ಹಾಕಲಾಗುತ್ತದೆ ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಎಚ್ಚರಿಸಿದೆ.

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ಪಡೆಯದೆ ಹಾಗೂ ಸ್ಥಾಪಿತ ಮಾನದಂಡಗಳನ್ನು ಉಲ್ಲಂಘಿಸಿ ಪಿ.ಜಿ ವಹಿವಾಟು ಮಾಡುತ್ತಿರುವ ದೂರು ಬಂದಿದೆ. ಹೀಗಾಗಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಭಿವೃದ್ಧಿ ಆಯುಕ್ತರಾದ ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದ್ದಾರೆ.

ಪಿ.ಜಿಗಳಲ್ಲಿ ಸುರಕ್ಷತೆ ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸದೇ ಇರುವುದು. ಅಗ್ನಿ ಸುರಕ್ಷತಾ ನಿಯಮಗಳನ್ನು ಪಾಲಿಸದಿರುವುದು. ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸದೆ ಇರುವುದು ಗಮನಕ್ಕೆ ಬಂದಿದೆ ಎಂದಿದ್ದಾರೆ.

ಏಳು ದಿನಗಳ ಒಳಗೆ ಬೆಂಗಳೂರು ಪೂರ್ವ ನಗರ ಪಾಲಿಕೆ (ಬಿಇಸಿಸಿ) ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ಇಲ್ಲದೆ ವಾಹಿವಾಟು ಮಾಡುತ್ತಿರುವ ಪಿ.ಜಿ ಮಾಲೀಕರಿಗೆ ದಂಡ ವಿಧಿಸಿ ಉದ್ದಿಮೆಗೆ ಬೀಗ ಮುದ್ರೆ ಹಾಕಲಾಗುವುದು ಎಂದು ತಿಳಿಸಿದ್ದಾರೆ.

ಕಾರಿನಿಂದ ಗುದ್ದಿ ಯುವಕನ ಹತ್ಯೆ

ಕಾರಿನ ಮಿರರ್‌ಗೆ ತಾಗಿದ ವಿಚಾರಕ್ಕೆ ಎರಡು ಕಿಲೋ ಮೀಟರ್ ಹಿಂಬಾಲಿಸಿ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿರರ್‌ಗೆ ತಾಗಿದ ವಿಚಾರಕ್ಕೆ 2 ಕಿಲೋ ಮೀಟರ್ ಹಿಂಬಾಲಿಸಿ, ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿ ಸವಾರರೊಬ್ಬರನ್ನು ಕೊಲೆ ಮಾಡಿದ ದಂಪತಿಯನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅರಕೆರೆಯಲ್ಲಿ ನೆಲಸಿದ್ದ ಮನೋಜ್ (32) ಮತ್ತು ಆತನ ಪತ್ನಿ ಆರತಿ ಶರ್ಮಾ (29) ಬಂಧಿತರು.


ಮನೋಜ್


ಆರತಿ

ಅ.25ರಂದು ತಡರಾತ್ರಿ ಕೆಂಬತ್ತಹಳ್ಳಿ ನಿವಾಸಿ ದರ್ಶನ್ (22) ಅವರನ್ನು ರಸ್ತೆ ಅಪಘಾತ ಎಸಗಿ ಕೊಲೆ ಮಾಡಿ ಪರಾರಿ ಆಗಿದ್ದರು. ಬೈಕ್‌ನ ಹಿಂದೆ ಕುಳಿತಿದ್ದ ದರ್ಶನ್ ಅವರ ಸ್ನೇಹಿತ ವರುಣ್‌ಗೆ ಸಣ್ಣಪುಟ್ಟ ಗಾಯವಾಗಿತ್ತು. ಕೆಂಬತ್ತಹಳ್ಳಿ ನಿವಾಸಿ ದರ್ಶನ್ ಮತ್ತು ಉತ್ತರಹಳ್ಳಿ ನಿವಾಸಿ ವರುಣ್ ಫುಡ್ ಡೆಲಿವರಿ ಹುಡುಗರಾಗಿ ಕೆಲಸ ಮಾಡುತ್ತಿದ್ದರು. ಅಂದು ರಾತ್ರಿ ಇಬ್ಬರು ಮನೆಗೆ ತೆರಳುವಾಗ ಘಟನೆ ನಡೆದಿತ್ತು.


ದರ್ಶನ್

ಮೃತ ಯುವಕನ ಸಹೋದರಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಧೀಶರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

> **ಉದ್ದೇಶಪೂರ್ವಕವಾಗಿಯೇ ದಂಪತಿ ರಸ್ತೆ ಅಪಘಾತ ಎಸಗಿ ಯುವಕನ ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ**
> **ಲೋಕೇಶ್ ಜಗಲಸಾರ**
> ದಕ್ಷಿಣ ವಿಭಾಗದ ಡಿಸಿಪಿ

ಮನೋಜ್ ಮತ್ತು ಆರತಿ ಶರ್ಮಾ ತಮ್ಮ ಕಾರಿನಲ್ಲಿ ನಟರಾಜ ಲೇಔಟ್‌ಗೆ ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ದರ್ಶನ್ ಮತ್ತು ವರುಣ್ ಬೈಕ್‌ನಲ್ಲಿ ಬರುತ್ತಿದ್ದರು. ಆಗ ಕಾರಿನ ಮಿರರ್‌ಗೆ ಬೈಕ್ ತಾಗಿತ್ತು. ಆಗ ಕಾರಿನಿಂದ ಇಳಿದಿದ್ದ ದಂಪತಿ ಗಲಾಟೆ ಮಾಡಿದ್ದರು. ದರ್ಶನ್ ಅವರು ಕ್ಷಮೆ ಕೇಳಿ ಮುಂದಕ್ಕೆ ಹೋಗಿದ್ದರು. ಅಷ್ಟಕ್ಕೆ ಸುಮ್ಮನಾಗದ ದಂಪತಿ ಬೈಕ್ ಹಿಂಬಾಲಿಸಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳು ಕೇರಳ, ಜಮ್ಮು ಕಾಶ್ಮೀರದವರು

ಕೇರಳದ ಮನೋಜ್ ಮತ್ತು ಜಮ್ಮು–ಕಾಶ್ಮೀರದ ಆರತಿ ಶರ್ಮಾ ಅವರು ಕೆಲಸ ಅರಸಿ ಎಂಟು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಮನೋಜ್ ಮಾರ್ಷಲ್ ಆರ್ಟ್ಸ್ ಮತ್ತು ಕಳರಿಪ್ಪಯಟ್ಟು ತರಬೇತುದಾರರಾಗಿ ಕೆಲಸ ಮಾಡುತ್ತಿದ್ದರು. ಆರತಿ ಕಂಪನಿಯೊಂದ ರಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಐದು ವರ್ಷದ ಹಿಂದೆ ಮದುವೆ ಆಗಿದ್ದರು ಎಂದು ಮೂಲಗಳು ಹೇಳಿವೆ.

ಪ್ರಕರಣ ವರ್ಗ

ಅಪಘಾತ ಎನ್ನುವ ಕಾರಣಕ್ಕೆ ಆರಂಭದಲ್ಲಿ ಜೆ.ಪಿ.ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದೀಗ ಕೊಲೆ ಪ್ರಕರಣವನ್ನು ದಾಖಲಿಸಿ-ಕೊಳ್ಳಲಾಗಿದೆ. ಪುಟ್ಟೇನಹಳ್ಳಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗೆ ಪ್ರಕರಣ ವರ್ಗಾವಣೆ ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಆರೋಪಿಗಳು ಸುಮಾರು 2 ಕಿಲೋ ಮೀಟರ್ ವರೆಗೂ ದರ್ಶನ್ ಮತ್ತು ವರುಣ್ ಅವರನ್ನು ಕಾರಿನಲ್ಲಿ ಹಿಂಬಾಲಿಸಿದ್ದರು. ಮಾರ್ಗ ಮಧ್ಯದಲ್ಲಿ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದರು. ಕೆಳಗೆ ಬಿದ್ದಿದ್ದ ದರ್ಶನ್ ಅವರ ತಲೆಗೆ ಗಂಭೀರವಾದ ಗಾಯವಾಗಿತ್ತು. ಬಳಿಕ ದಂಪತಿ ಕಾರನ್ನು ನಿಲುಗಡೆ ಮಾಡದೇ ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಕೃತ್ಯ ಸೆರೆ: ಘಟನಾ ಸ್ಥಳದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದಾಗ ಉದ್ದೇಶಪೂರ್ವಕವಾಗಿಯೇ ರಸ್ತೆ ಅಪಘಾತ ಎಸಗಿರುವುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬಿಡಿ ಭಾಗಗಳನ್ನು ಕೊಂಡೊಯ್ದಿದ್ದ ದಂಪತಿ: ರಸ್ತೆ ಅಪಘಾತ ಎಸಗಿ ದರ್ಶನ್ ಅವರನ್ನು ಕೊಲೆ ಮಾಡಿದ್ದ ದಂಪತಿ, ಒಂದೂವರೆ ಕಿಲೋ ಮೀಟರ್ ದೂರಕ್ಕೆ ಕಾರಿನಲ್ಲಿ ಹೋಗಿದ್ದರು. ಬಳಿಕ ಅದೇ ಮಾರ್ಗದಲ್ಲಿ ವಾಪಸ್ ಬಂದಿದ್ದರು. ಸ್ವಲ್ಪ ದೂರದಲ್ಲಿ ಕಾರು ನಿಲುಗಡೆ ಮಾಡಿದ್ದರು. ಯಾರಿಗೂ ಗೊತ್ತಾಗಬಾರದೆಂದು ಮುಖಕ್ಕೆ ಮಾಸ್ಕ್ ಹಾಕಿಕೊಂಡು ಘಟನಾ ಸ್ಥಳಕ್ಕೆ ನಡೆದುಕೊಂಡು ಬಂದು ಸ್ಥಳದಲ್ಲಿ ಬಿದ್ದಿದ್ದ ಕಾರಿನ ಬಿಡಿಭಾಗಗಳನ್ನು ಕೊಂಡೊಯ್ದಿದ್ದರು. ಈ ದೃಶ್ಯ ಸಹ ಸಮೀಪದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆ ಆಗಿತ್ತು ಎಂದು ಸಂಚಾರ ಪೊಲೀಸರು ಹೇಳಿದರು.

1,949 ಮೊಬೈಲ್‌ಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನವಾದ ಹಾಗೂ ನಿರ್ಲಕ್ಷ್ಯದಿಂದ ಕಳೆದುಹೋದ ಮೊಬೈಲ್‌ಗಳನ್ನು ಪತ್ತೆಹಚ್ಚಿ ಜಪ್ತಿ ಮಾಡಿಕೊಳ್ಳುವ ಕಾರ್ಯಾಚರಣೆಯನ್ನು ನಗರ ಪೊಲೀಸರು ಚುರುಕು-ಗೊಳಿಸಿದ್ದು, 2024ರ ಮಾರ್ಚ್ 1ರಿಂದ ಇದುವರೆಗೂ ₹3 ಕೋಟಿ ಮೌಲ್ಯದ 1,949 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಿದ್ದಾರೆ.

ನಗರದ 9 ವಿಭಾಗಗಳಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಯಾಚರಣೆ ನಡೆಸಿ ಮೊಬೈಲ್ ವಶಕ್ಕೆ ಪಡೆದುಕೊಂಡು ಮಾಲೀಕರಿಗೆ ಹಿಂದಿರುಗಿಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಮಾಧ್ಯಮ-ಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ಇ-ಲಾಸ್ಟ್ ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ಕಳ್ಳತನವಾದ ಹಾಗೂ ಕಳೆದುಹೋದ ಮೊಬೈಲ್ ಫೋನ್‌ಗಳ ಐಎಂಇಐ ನಂಬರ್ ಆಧಾರದ ಮೇಲೆ ತಾಂತ್ರಿಕ ಮಾಹಿತಿಯನ್ನು ಕಲೆಹಾಕಿ 894 ಸ್ಮಾರ್ಟ್ ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಅವುಗಳ ಪೈಕಿ 522 ಮೊಬೈಲ್‌ಗಳನ್ನು ಮಾಲೀಕರಿಗೆ ಮರಳಿಸಲಾಗಿದೆ. ಉಳಿದ 372 ಸ್ಮಾರ್ಟ್ ಫೋನ್‌ಗಳು ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್‌ನಲ್ಲಿವೆ. ಅಗತ್ಯ ದಾಖಲೆಗಳನ್ನು ಹಾಜರು ಪಡಿಸಿದರೆ ವಾರಸುದಾರರಿಗೆ ಮರಳಿಸಲಾಗುವುದು ಎಂದರು.

ಸಿಇಐಆರ್ ಜಾಲತಾಣದಲ್ಲಿ ದಾಖಲಾದ ದೂರು ಆಧರಿಸಿ 1,310 ಹಾಗೂ ಇತರೆ ಪ್ರಕರಣದಲ್ಲಿ 639 ಸೇರಿ ಒಟ್ಟು 1,949 ಮೊಬೈಲ್ ಜಪ್ತಿ ಮಾಡಲಾಗಿದೆ ಎಂದು ಅವರು ವಿವರಿಸಿದರು.

28 ಮೊಬೈಲ್ ಫೋನ್ ಪತ್ತೆ: ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಿಂತಿದ್ದ ಕಾರೊಂದನ್ನು ಪರಿಶೀಲಿಸಿದಾಗ ಅದರಲ್ಲಿ ವಿವಿಧ ಕಂಪನಿಯ 28 ಮೊಬೈಲ್‌ಗಳು ಪತ್ತೆ ಆಗಿದ್ದವು ಎಂದರು.

ಗಾಂಧಿನಗರದ ವೈ.ರಾಮಚಂದ್ರ ರಸ್ತೆಯಲ್ಲಿರುವ ಮೊಬೈಲ್ ಅಂಗಡಿಯಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಉಪ್ಪಾರಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಇನ್ನು ವಿಜಯನಗರ, ವರ್ತೂರು, ರಾಮಮೂರ್ತಿನಗರ, ಬಾಣಸವಾಡಿ, ಬೊಮ್ಮನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಕಮಿಷನರ್ ಮಾಹಿತಿ ನೀಡಿದರು.

ಅಲ್ಯುಮಿನಿಯಂ ಕಾಯಿಲ್ ಸುತ್ತಿ ಪರಾರಿ

ನಗರದ ಜನಸಂದಣಿ ಪ್ರದೇಶ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ದೇವಸ್ಥಾನಗಳು ಹಾಗೂ ಬಿಎಂಟಿಸಿ ಬಸ್‌ನಲ್ಲಿ ಮೊಬೈಲ್ ಕಳವು ಮಾಡಿ ಪರಾರಿಯಾಗುತ್ತಿದ್ದ ಆರು ಮಂದಿಯನ್ನು ನಗರ ಕೇಂದ್ರ ವಿಭಾಗದ (ಸಿಸಿಬಿ) ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಆರೋಪಿಗಳು ಮೈಸೂರು ರಸ್ತೆಯ ನಿವಾಸಿಗಳು.

ಬಂಧಿತರಿಂದ 422 ಸ್ಮಾರ್ಟ್ ಫೋನ್, ಕೃತ್ಯಕ್ಕೆ ಬಳಸಿದ ಆಟೊ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಆರೋಪಿಗಳು ಕದ್ದ ಮೊಬೈಲ್‌ಗೆ ಅಲ್ಯುಮಿನಿಯಂ ಕಾಯಿಲ್ ಸುತ್ತಿ ನೆಟ್‌ವರ್ಕ್ ಸಿಗದಂತೆ ಮಾಡುತ್ತಿದ್ದರು. ಮೊಬೈಲ್ ಕಳೆದುಕೊಂಡವರು ಬೇರೊಂದು ಮೊಬೈಲ್‌ನಲ್ಲಿ ತಕ್ಷಣವೇ ಕರೆ ಮಾಡಿದರೂ ಸಿಗ್ನಲ್ ಸಿಗುತ್ತಿರಲಿಲ್ಲ ಎಂದು ಪೊಲೀಸರು ಹೇಳಿದರು. ಈ ಸಂಬಂಧ ಸಿಟಿ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊಬೈಲ್ ವಶಕ್ಕೆ ಪಡೆದ ವಿವರ

ವಿಭಾಗ	ಬಂಧಿತರು	ವಶಕ್ಕೆ ಪಡೆದ ಮೊಬೈಲ್‌ಗಳು	ಮೌಲ್ಯ
ಸಿಸಿಬಿ	6	422	₹70ಲಕ್ಷ
ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್	0	894	₹1 ಕೋಟಿ
ಈಶಾನ್ಯ	0	40	₹20 ಲಕ್ಷ
ಪಶ್ಚಿಮ	5	121	₹49.95 ಲಕ್ಷ
ವೈಟ್‌ಫೀಲ್ಡ್	3	39	₹40.50 ಲಕ್ಷ
ನೈರುತ್ಯ	0	224	₹26 ಲಕ್ಷ
ಪೂರ್ವ	25	189	₹9.75 ಲಕ್ಷ
ಆಗ್ನೇಯ	0	20	₹2 ಲಕ್ಷ

ಕಳ್ಳತನ ಮಾಡಿ ಬಸ್, ರೈಲಿನಲ್ಲಿ ಪರಾರಿ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿಕೊಂಡು ಬಸ್, ರೈಲು ಹಾಗೂ ಆಟೊದಲ್ಲಿ ಪರಾರಿ ಆಗುತ್ತಿದ್ದ ಇಬ್ಬರು ಆರೋಪಿಗಳನ್ನು ಬೇಗೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ ಕೆಜಿಎಫ್‌ನ ಶಾಂತಕುಮಾರ್ ಹಾಗೂ ಜ್ಞಾನಪ್ರಕಾಶ್ ಬಂಧಿತರು.

ಬಂಧಿತರಿಂದ ₹72 ಲಕ್ಷ ಮೌಲ್ಯದ 614 ಗ್ರಾಂ ಚಿನ್ನ ಹಾಗೂ 470 ಬೆಳ್ಳಿಯ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ವಿಶ್ವಪ್ರಿಯ ಲೇಔಟ್‌ನ ನಿವಾಸಿಯೊಬ್ಬರ ಮನೆಯಲ್ಲಿ ಕಳ್ಳತನ ನಡೆದಿತ್ತು. ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಬೇಗೂರು ಕೆರೆ ಕೋಡಿಯ ಬಳಿ ಮನೆಯಲ್ಲಿ ಕಳ್ಳತನ ಮಾಡಲು ಹೊಂಚು ಹಾಕುತ್ತಿದ್ದ ವೇಳೆ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಕದ್ದ ಚಿನ್ನವನ್ನು ಚಿಂತಾಮಣಿ ಹಾಗೂ ಕೆಜಿಎಫ್‌ನಲ್ಲಿ ಮಾರಾಟ ಮಾಡಿದ್ದರು. ಅಲ್ಲಿಂದ ಚಿನ್ನವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ಬಂಧನದಿಂದ ಬೇಗೂರು ಠಾಣೆಯಲ್ಲಿ ದಾಖಲಾಗಿದ್ದ ಮೂರು, ಹೊಸಕೋಟೆ ಹಾಗೂ ಚಿಕ್ಕಬಳ್ಳಾಪುರ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಮಾಂಸಾಹಾರ ಸೇವಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಕೊಲೆ

ಬೆಂಗಳೂರು: ಹಬ್ಬದ ದಿವಸ ಮನೆಯಲ್ಲಿ ಮಾಂಸಾಹಾರ ಸೇವಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಸ್ನೇಹಿತನನ್ನು ಕೊಲೆ ಮಾಡಿರುವ ಘಟನೆ ಚಿಕ್ಕಜಾಲದ ನವರತ್ನ ಅಗ್ರಹಾರದಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

ಬಿಹಾರದ ಶಂಭು ತಂತಿ(29) ಕೊಲೆಯಾದವರು.

ಕೃತ್ಯ ಎಸಗಿದ ಆರೋಪದ ಅಡಿ ಅಸ್ಸಾಂನ ರಾಜೇಶ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮೂರು ವರ್ಷಗಳ ಹಿಂದೆ ಕೂಲಿ ಕಾರ್ಮಿಕರಾಗಿ ಶಂಭುತಂತಿ ಹಾಗೂ ರಾಜೇಶ್ ನಗರಕ್ಕೆ ಬಂದಿದ್ದರು. ಚಿಕ್ಕಜಾಲದ ನವರತ್ನ ಅಗ್ರಹಾರದ ಲೇಬರ್ ಶೆಡ್‌ನಲ್ಲಿ ಇಬ್ಬರೂ ವಾಸವಾಗಿದ್ದರು. ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡಿಕೊಂಡಿದ್ದರು. ದೀಪಾವಳಿ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಛತ್ ಪೂಜಾ ಹಬ್ಬ ಇರುತ್ತದೆ. ಹಬ್ಬದ ಹಿನ್ನೆಲೆಯಲ್ಲಿ ಶಂಭು ಕೂಡ ಎರಡು ದಿನದಿಂದ ಮನೆಯಲ್ಲಿ ವಿಶೇಷ ಪೂಜೆ ಮಾಡುತ್ತಿದ್ದರು. ಸೋಮವಾರ ಹಬ್ಬದ ಪ್ರಮುಖ ದಿನವಾಗಿತ್ತು. ಆರೋಪಿ ರಾಜೇಶ್ ಹೋಟೆಲ್‌ನಿಂದ ಮಾಂಸಾಹಾರ ತಂದು ಮನೆಯಲ್ಲೇ ಸೇವಿಸಿದ್ದ. ಈ ವಿಚಾರ ತಿಳಿದು ಶಂಭು ಅವರು ರಾಜೇಶ್‌ನನ್ನು ಪ್ರಶ್ನಿಸಿದ್ದರು. ಆಗ ಇಬ್ಬರ ನಡುವೆ ವಾಗ್ವಾದ ನಡೆದಿತ್ತು. ಗಲಾಟೆಯು ವಿಕೋಪಕ್ಕೆ ಹೋಗಿ ಮನೆಯಲ್ಲಿದ್ದ ಕಬ್ಬಿಣದ ರಾಡ್ ತೆಗೆದುಕೊಂಡು ಶಂಭು ಅವರ ಮೇಲೆ ಆರೋಪಿ ಹಲ್ಲೆ ನಡೆಸಿ ಪರಾರಿಯಾಗಿದ್ದ. ತೀವ್ರವಾಗಿ ಗಾಯಗೊಂಡಿದ್ದ ಶಂಭು ಅವರು ಮೃತಪಟ್ಟಿದ್ದರು.

ಕೊಲೆ ಪ್ರಕರಣ ದಾಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ನಕಲಿ ದಾಖಲೆ ಸೃಷ್ಟಿಸಿ ಭೂಗಳ್ಳತನ: ನ್ಯಾಯಕ್ಕಾಗಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮುನ್ನೇನಕೊಳಾಲು ಗ್ರಾಮದಲ್ಲಿ ನಕಲಿ ದಾಖಲೆ ಸೃಷ್ಟಿಸಿ ಬಡವರ ಜಮೀನನ್ನು ಭೂಗಳ್ಳತನ ಮಾಡಲಾಗಿದೆ. ಈ ಜಮೀನನ್ನು ಬಡವರಿಗೆ ವಾಪಸ್ ನೀಡಬೇಕು. ನಕಲಿ ದಾಖಲೆ ಸೃಷ್ಟಿಸಿರುವ ಅಧಿಕಾರಿಗಳು ಹಾಗೂ ಭೂಗಳ್ಳರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಅಂಬೇಡ್ಕರ್ ಸೇವಾ ಸಮಿತಿ ಆಗ್ರಹಿಸಿದೆ.

1963ರಲ್ಲಿ 21 ದಲಿತ ಕುಟುಂಬಗಳಿಗೆ 21 ಎಕರೆ ಜಮೀನು ಮಂಜೂರಾಗಿತ್ತು. 1980ರಲ್ಲಿ ಸ್ಥಳೀಯ ಭೂಮಾಲೀಕ ಹಲ್ಲೆ ನಡೆಸಿ ದಲಿತ ಕುಟುಂಬವನ್ನು ಓಡಿಸಿ ಅಕ್ರಮವಾಗಿ ಕೃಷಿ ಮಾಡಲು ಆರಂಭಿಸಿದ್ದರು. ಇದರ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗಿತ್ತು. 2011ರಲ್ಲಿ ಮಂಜೂರುದಾರರ ಪರವಾಗಿ ತೀರ್ಪು ನೀಡಿತ್ತು. ಆದರೆ, 2012ರಲ್ಲಿ 21 ಕುಟುಂಬದವರಿಗೆ ಯಾವುದೇ ಮಾಹಿತಿ ನೀಡದೇ ಉಪ ವಿಭಾಗಾಧಿಕಾರಿಯು ಭೂಗಳ್ಳರ ಪರವಾಗಿ ನಕಲಿ ದಾಖಲೆ ಸೃಷ್ಟಿಸಿ ಖಾತೆ ಮಾಡಿಕೊಟ್ಟಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಕೆ.ಎಂ. ಸಂದೇಶ್ ಸುದ್ದಿಗೋಷ್ಠಿಯಲ್ಲಿ ದೂರಿದರು.

ಈ ಬಗ್ಗೆ ಜಿಲ್ಲಾಧಿಕಾರಿಯವರಿಗೆ ದೂರು ನೀಡಲಾಗಿದೆ. 45 ದಿನಗಳ ಒಳಗೆ ಸರಿಡಪಡಿಸುವ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಸ್ಥಳೀಯರು

ವಿಗ್ರಹಕ್ಕೆ ಒದ್ದಿದ್ದ ಆರೋಪಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಬೀಸನಹಳ್ಳಿಯ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೆ ನುಗ್ಗಿ ಚಪ್ಪಲಿ ಧರಿಸಿದ್ದ ಕಾಲಿನಿಂದ ದೇವರ ವಿಗ್ರಹಕ್ಕೆ ಒದ್ದಿದ್ದಾರೆ ಎಂದು ಆರೋಪಿಸಿ ವ್ಯಕ್ತಿಯೊಬ್ಬರನ್ನು ಸ್ಥಳೀಯರು ಥಳಿಸಿದ್ದಾರೆ.

ಬಾಂಗ್ಲಾದೇಶದ ಕಬೀರ್ ಎಂಬಾತನನ್ನು ಮಾರತ್‌ಹಳ್ಳಿ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡು ಆಸ್ಪತ್ರೆಗೆ ದಾಖಲಿಸಿದ್ದಾರೆ. ಕಬೀರ್ ವಿರುದ್ಧ ಮಾರತ್‌ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳೀಯರೇ ಹಿಡಿದು ಆರೋಪಿಯನ್ನು ಅರೆನಗ್ನಗೊಳಿಸಿ ಕಂಬಕ್ಕೆ ಕಟ್ಟಿಹಾಕಿ ಹಲ್ಲೆ ನಡೆಸಿದ್ದಾರೆ. ಆರೋಪಿ ಅಂಗವಿಕಲನಾಗಿದ್ದು ಹಲ್ಲೆಯಿಂದ ಗಾಯಗೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.


ಆರೋಪಿಗೆ ಥಳಿಸಿ ಕಂಬಕ್ಕೆ ಕಟ್ಟಿ ಹಾಕಿದ್ದ ದೃಶ್ಯ

ದೇವರ ಬೀಸನಹಳ್ಳಿಯಲ್ಲಿ ವಾಸವಾಗಿದ್ದ ಕಬೀರ್, ಚಪ್ಪಲಿ ಮಾರಾಟದ ಅಂಗಡಿ ಇಟ್ಟುಕೊಂಡಿದ್ದ. ದಾಖಲೆಗಳನ್ನು ಪರಿಶೀಲನೆ ನಡೆಸಲಾಗಿದೆ. ಯಾವುದೇ ದಾಖಲೆಗಳು ಇಲ್ಲ. ಬಾಂಗ್ಲಾದೇಶದಿಂದ ವಲಸೆ ಬಂದು ನಗರದಲ್ಲಿ ಅಕ್ರಮವಾಗಿ ನೆಲಸಿದ್ದ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಮಂಗಳವಾರ ಬೆಳಿಗ್ಗೆ ವೇಣುಗೋಪಾಲಸ್ವಾಮಿ ದೇವಸ್ಥಾನದ ಬಳಿ ಹೋಗಿದ್ದ ಆರೋಪಿ, ಸಮೀಪದ ಔಷಧ ಮಾರಾಟ ಮಳಿಗೆಯ ಎದುರು ಹಾಕಿದ್ದ ಗಣಪತಿ ದೇವರ ಫೋಟೊಗಳಿಗೆ ಊರುಗೋಲಿನಿಂದ ಹೊಡೆದಿದ್ದ. ಅದನ್ನು ಗಮನಿಸಿದ್ದ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದರು. ನಂತರ, ಆತ ಏಕಾಏಕಿ ದೇವಸ್ಥಾನದತ್ತ ಓಡಿ ಹೋಗಿ ಗರುಡ ಕಂಬಕ್ಕೆ ಕಲ್ಲಿನಿಂದ ಹೊಡೆದಿದ್ದ. ಬಳಿಕ ಚಪ್ಪಲಿ ಧರಿಸಿ ಗರ್ಭಗುಡಿಗೆ ನುಗ್ಗಿ ರಂಪಾಟ ಮಾಡಿದ್ದ. ಬಳಿಕ ದೇವರ ವಿಗ್ರಹಕ್ಕೆ ಕಾಲಿನಿಂದ ಒದ್ದಿದ್ದ. ಆರೋಪಿ ರಂಪಾಟವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಸ್ಥಳೀಯರು ದೇವಸ್ಥಾನದೊಳಗೆ ಹೋಗಿ ಕಬೀರ್‌ನನ್ನು ಹೊರಗೆ ಎಳೆದುಕೊಂಡು ಬಂದು ಕಂಬಕ್ಕೆ ಕಟ್ಟಿಹಾಕಿ ಥಳಿಸಿದ್ದಾರೆ.

ಆರೋಪಿಯನ್ನು ವಶಕ್ಕೆ ಪಡೆದು ಆಸ್ಪತ್ರೆಗೆ ದಾಖಲಿಸಲಾಗಿದೆ. ಆತನ ಬಳಿಯಿದ್ದ ಆಯಿಲ್ ಬಾಟಲಿ, ಚಪ್ಪಲಿ, ಕಲ್ಲು ಜಪ್ತಿ ಮಾಡಲಾಗಿದೆ. ಆಸ್ಪತ್ರೆಯಲ್ಲಿ-ರುವ ಕಬೀರ್, ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದಾನೆ. ಆತ ಚೇತರಿಸಿಕೊಂಡ ನಂತರ ಹೆಚ್ಚಿನ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.


ಉದ್ಯೋಗಿ ಅರವಿಂದ್ ಆತ್ಮಹತ್ಯೆ ಪ್ರಕರಣದ ಅರ್ಜಿ ವಿಚಾರಣೆ

‘ಓಲಾ, ಈಸ್ಟ್ ಇಂಡಿಯಾಗಿಂತ ಕಡೆ...’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಓಲಾ ಎಲೆಕ್ಟ್ರಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮೃತ ಉದ್ಯೋಗಿ ಕೆ.ಅರವಿಂದ್ ಬಿಟ್ಟು ಹೋಗಿದ್ದಾರೆ ಎನ್ನಲಾದ ಆತ್ಮಹತ್ಯೆ ಪತ್ರ ನಿಜವಲ್ಲ’ ಎಂಬ ಕಂಪನಿಯ ಪರ ವಾದಕ್ಕೆ ತಿರುಗೇಟು ನೀಡಿರುವ ಮೃತನ ಪರ ವಕೀಲರು, ‘ಓಲಾ ಕಂಪನಿ, ಈಸ್ಟ್ ಇಂಡಿಯಾ ಕಂಪನಿಗಿಂತಲೂ ಕೆಟ್ಟದಾದ ವರ್ತನೆ ತೋರುತ್ತಿದೆ’ ಎಂದು ಕಂಪನಿಯ ನಿಲುವಿಗೆ ವಾಗ್ದಾಳಿ ನಡೆಸಿದರು.

‘ಅರವಿಂದ್ ಸಾವಿನ ಆರೋಪದಡಿ ನಮ್ಮ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ಮತ್ತು ಈ ಸಂಬಂಧ 30ನೇ ಎಸಿಎಂಎಂ ಕೋರ್ಟ್‌ನಲ್ಲಿ ನಡೆಯುತ್ತಿರುವ ನ್ಯಾಯಿಕ ವಿಚಾರಣೆ ರದ್ದುಗೊಳಿಸಬೇಕು’ ಎಂದು ಕೋರಿ ಕಂಪನಿಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸುಬ್ರತ್ ಕುಮಾರ್ ದಾಸ್, ಕಂಪನಿಯ ಮುಖ್ಯ ಕಾರ್ಯ-ನಿರ್ವಾಹಕ ಅಧಿಕಾರಿ (ಸಿಇಒ) ಭವಿಶ್ ಅಗರವಾಲ್ ಮತ್ತು ಓಲಾ ಕಂಪನಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಕಂಪನಿಯ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್, ‘ಡೆತ್ ನೋಟ್‌ಗಳೆಲ್ಲಾ ಸತ್ಯವಾಗಿರುವುದಿಲ್ಲ. ಈ ಪ್ರಕರಣದಲ್ಲಿ ಡೆತ್ ನೋಟ್‌ನ ನಿರೂಪಕ ಮೃತ ಕೆ.ಅರವಿಂದ್ ಅವರ ಸಹೋದರ ಅಶ್ವಿನ್ ಕಣ್ಣನ್ ಎಂಬ ಬಗ್ಗೆ ನನಗೆ ಬಲವಾದ ಸಂದೇಹವಿದೆ’ ಎಂದರು.

ಇದನ್ನು ತೀವ್ರವಾಗಿ ಆಕ್ಷೇಪಿಸಿದ ಅಶ್ವಿನ್ ಕಣ್ಣನ್ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, ‘ಅರ್ಜಿದಾರರ ಪರ ವಕೀಲರು ಇಂತಹ ಮಾತುಗಳನ್ನು ಆಡುತ್ತಿರುವುದಕ್ಕೆ ನನಗೆ ತುಂಬಾ ವಿಷಾದವಿದೆ. ಹಿರಿಯ ವಕೀಲರಾಗಿ ಅವರು ಈ ರೀತಿ ವಾದ ಮಂಡಿಸಬಾರದು. ಓಲಾ ಕಂಪನಿ, ಈಸ್ಟ್ ಇಂಡಿಯಾ ಕಂಪನಿಗಿಂತಲೂ ಕೆಟ್ಟದಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಆರೋಪಿ ಪರ ವಕೀಲರು ಇಂತಹ ಆರೋಪಗಳನ್ನು ಮಾಡುತ್ತಿರುವುದು ವಿಷಾದನೀಯ. ಡೆತ್ ನೋಟ್ ಬರೆದವರು ಯಾರು ಎಂಬುದನ್ನು ಪೊಲೀಸರು ತನಿಖೆ ಮಾಡಲಿ’ ಎಂದರು.

ಇದಕ್ಕೆ ಶ್ಯಾಮ ಸುಂದರ್, ‘ದೂರುದಾರರು ಮಾಧ್ಯಮಗಳಲ್ಲಿ ಪ್ರಸಾರ ಮಾಡಿದ ಸಂದರ್ಶನಗಳು ಮತ್ತು ಛಾಯಾ-ಚಿತ್ರಗಳಿಂದಾಗಿ ಕಂಪನಿಯ ಷೇರು ಬೆಲೆಗಳು ಕುಸಿಯುತ್ತಿವೆ’ ಎಂದು ಆರೋಪಿಸಿದರು.

ಪ್ರಾಸಿಕ್ಯೂಷನ್ ಪರ ಹಾಜರಾಗಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ವಿಚಾರಣೆಗೆ ಹಾಜರಾಗುವಂತೆ ಮತ್ತು ತನಿಖೆಗೆ ಸಹಕರಿಸುವಂತೆ ನೀಡಲಾಗಿರುವ ನೋಟಿಸ್‌ಗಳಿಗೆ ಪ್ರತಿಯಾಗಿ, ಅರ್ಜಿದಾರರು ಖುದ್ದು ಹಾಜರಾಗುವ ಬದಲು ಪತ್ರಗಳನ್ನು ಕಳುಹಿಸುತ್ತಿದ್ದಾರೆ’ ಎಂದು ನ್ಯಾಯಪೀಠಕ್ಕೆ ದೂರಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳದಂತೆ ಪೊಲೀಸರಿಗೆ ನೀಡಿರುವ ಈ ಹಿಂದಿನ ನಿರ್ದೇಶನ-ವನ್ನು ಮುಂದುವರಿಸಲು ಆದೇಶಿಸಿ ವಿಚಾರಣೆಯನ್ನು ನವೆಂಬರ್ 17ಕ್ಕೆ ಮುಂದೂಡಿತು.

ಪ್ರಕರಣವೇನು?: ‘ನನಗೆ ಕೆಲಸದ ಸ್ಥಳದಲ್ಲಿ ಕಿರುಕುಳ ನೀಡಲಾಗುತ್ತಿದೆ, ಸಂಬಳ ಬಾಕಿ ಉಳಿಸಿಕೊಳ್ಳಲಾಗಿದೆ ಹಾಗೂ ಕಂಪನಿ ಮಾಲೀಕರು ಸವಲತ್ತುಗಳನ್ನು ನಿರಾಕರಿಸಿದ್ದಾರೆ’ ಎಂದು ಆರೋಪಿಸಿ ಕೆ.ಅರವಿಂದ್ ಪತ್ರವೊಂದನ್ನು ಬರೆದಿಟ್ಟು 2025ರ ಸೆಪ್ಟೆಂಬರ್ 28ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ಕೆ.ಅರವಿಂದ್ ಅವರ ಸಹೋದರ ಅಶ್ವಿನ್ ನೀಡಿರುವ ದೂರಿನ ಮೇರೆಗೆ, ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 108 ಹಾಗೂ 3(5)ರ ಅಡಿ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮೂರ್ಖನೂ ಹಣ ಸಂಪಾದಿಸಬಲ್ಲ; ಆದರೆ ಬುದ್ಧಿವಂತನು ಹಣವನ್ನು ಉಳಿತಾಯ ಮಾಡುತ್ತಾನೆ ಮತ್ತು ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತಾನೆ
ಬ್ರಿಗಮ್ ಯಂಗ್, ಅಮೆರಿಕದ ರಾಜಕೀಯ ಮುಖಂಡ

ದುಡ್ಡಿನಂಥಾ ಮಾತು



ಚಿನ್ನದ ಸಾಲ ಏನೇನು ತಿಳಿದಿರಬೇಕು?



● ಸಾಹಿಲ್ ಕುಮಾರ್ ಗಬಾ

ಸಂಪತ್ತು ಸೃಷ್ಟಿಸುವ ಪ್ರಕ್ರಿಯೆಯಲ್ಲಿ ಹಿಂದಿನಿಂದಲೂ ಚಾಲ್ತಿಯಲ್ಲಿ ಇರುವ ಕೆಲವು ಪದ್ಧತಿಗಳು ಇವೆ. ಮನೆಯ ಅಕ್ಕಿ ಡಬ್ಬಿಯಲ್ಲಿ ಹಣ ಇರಿಸುವುದು, ಜಮೀನು ಕೊಳ್ಳುವುದು, ಮನೆಗಳಲ್ಲಿ ಬಳಕೆ ಮಾಡಬಹುದಾದ ಕೆಲವು ಉಪಕರಣಗಳನ್ನು ಖರೀದಿಸುವುದು ಹಣವನ್ನು ಉಳಿತಾಯ ಮಾಡಲು ಇರುವ ಕೆಲವು ಮಾರ್ಗಗಳು. ಅವುಗಳ ಸಾಲಿಗೆ ಸೇರುವ ಒಂದು ಮುಖ್ಯವಾದ ಹೂಡಿಕೆ ಮಾರ್ಗ ಚಿನ್ನದ ಖರೀದಿ.

'ಚಿನ್ನದ ಮೇಲೆ ಹೂಡಿಕೆ ಮಾಡಿ' ಎಂದು ಹಿರಿಯರು ಹೇಳುತ್ತಿದ್ದ ಕಿವಿಮಾತು ಸರಿಯಾದುದೇ. ಚಿನ್ನದ ಮೇಲಿನ ಹೂಡಿಕೆಯ ಪ್ರಯೋಜನಗಳು ಹಲವು. ಇದು ಕಷ್ಟಕಾಲಕ್ಕೆ ಆಸರೆಗೆ ಬರುವುದಷ್ಟೇ ಅಲ್ಲದೆ, ವೈವಿಧ್ಯ ಇರುವ ಪೋರ್ಟ್‌ಫೋಲಿಯೊ ಒಂದನ್ನು ರೂಪಿಸಿಕೊಳ್ಳಲು ಕೂಡ ನೆರವಾಗುತ್ತದೆ. ಚಿನ್ನಾಭರಣಗಳನ್ನು ಮದುವೆ, ಹಬ್ಬದಂತಹ ಶುಭ ಸಮಾರಂಭಗಳಲ್ಲಿ ಬಳಸುವುದು ಸಾಂಪ್ರದಾಯಿಕ ಆಚರಣೆಯಂತೆ ಬೆಳೆದುಬಂದಿದೆ. ಪ್ರೀತಿಪಾತ್ರರಿಗೆ ಚಿನ್ನವನ್ನು ಉಡುಗೊರೆಯಾಗಿ ನೀಡುವುದು ಕೂಡ ಸಂಪ್ರದಾಯದ ಭಾಗದಂತೆ ಬೆಳೆದಿದೆ. ಆದರೆ ಚಿನ್ನದ ಬಳಕೆಯು ಇವಷ್ಟಕ್ಕೇ ಸೀಮಿತವಾಗಿಲ್ಲ.

ಚಿನ್ನವು ಒಂದಿಷ್ಟು ಭಾವನಾತ್ಮಕ ನಂಟನ್ನೂ ತನ್ನೊಂದಿಗೆ ಹೊತ್ತಿದೆ. ಜೊತೆಗೆ ಇದನ್ನು ಅಡಮಾನವಾಗಿ ಇರಿಸಿ ಸಾಲ ಪಡೆದು, ಕೆಲವು ಕನಸುಗಳನ್ನು ಸಾಕಾರ ಮಾಡಿಕೊಳ್ಳಲೂ ಅವಕಾಶ ಇದೆ. ಸರಿಯಾಗಿ, ನಿಖರವಾಗಿ ಯೋಜಿಸಿ ಕೆಲಸ ಮಾಡಿದರೆ, ಹಣಕಾಸಿನ ಗುರಿಗಳಿಗೆ ಅನುಗುಣವಾಗಿ ಮುಂದಡಿ ಇರಿಸಿದರೆ ಚಿನ್ನದ ಮೇಲಿನ ಸಾಲದಿಂದ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲು ಅವಕಾಶ ಇದೆ.

ಚಿನ್ನವು ಬಳಕೆಗೆ ಬರುವುದು ಮದುವೆಯಂತಹ ಸಂದರ್ಭಗಳು, ಧಾರ್ಮಿಕ ಕಾರ್ಯಕ್ರಮಗಳು ಅಥವಾ ವಿಶೇಷವಾದ ಆಚರಣೆಗಳ ಹೊತ್ತಿನಲ್ಲಿ ಮಾತ್ರವೇ ಅಲ್ಲ. ಈಚಿನ ವರ್ಷಗಳಲ್ಲಿ ಚಿನ್ನವನ್ನು ಹಲವು ಬಗೆಗಳಲ್ಲಿ ಬಳಕೆ ಮಾಡಿಕೊಳ್ಳಬಹುದಾದ ಹಣಕಾಸಿನ ಆಸ್ತಿಯನ್ನಾಗಿಯೂ ಕಾಣಲಾಗುತ್ತಿದೆ. ಇದನ್ನು ಸಾಲಕ್ಕೆ ಅಡಮಾನವಾಗಿಯೂ ಬಳಕೆ ಮಾಡಿಕೊಳ್ಳಬಹುದು. ಚಿನ್ನದ ಆಭರಣಗಳನ್ನು ಅಥವಾ ಚಿನ್ನದ ಇತರ ರೂಪಗಳನ್ನು ಅಡಮಾನವಾಗಿ ಇರಿಸಿ ಸಾಲ ಪಡೆಯಬಹುದು. ಸಾಲ ಪಡೆಯಲು ಇದು ಸುಲಭದ ಮಾರ್ಗ, ತ್ವರಿತವಾಗಿ ಸಾಲ ಪಡೆಯುವ ವಿಧಾನ ಇದು. ಚಿನ್ನದ ಸಾಲ ಪಡೆಯುವ ಪ್ರಕ್ರಿಯೆಯು ಇತರ ಬಗೆಯ ಸಾಲಗಳಿಗೆ ಹೋಲಿಸಿದರೆ ಅಡಚಣೆಗಳು ಇಲ್ಲದ್ದು. ಅಡಮಾನವಾಗಿ ಇರಿಸುವ ಚಿನ್ನದ ಮಾರುಕಟ್ಟೆ ಮೌಲ್ಯವನ್ನು ಆಧರಿಸಿ ಸಾಲದ ಮೊತ್ತವನ್ನು ನಿರ್ಧರಿಸಲಾಗುತ್ತದೆ.

ಆದರೆ, ಚಿನ್ನದ ಸಾಲವನ್ನು ಮೊದಲ ಬಾರಿಗೆ ಪಡೆಯುವ ಬಗ್ಗೆ ಆಲೋಚಿಸುತ್ತಿರುವವರು, ಸತ್ಯ ಮತ್ತು ಮಿಥ್ಯೆಗಳನ್ನು ಸರಿಯಾಗಿ ತಿಳಿದುಕೊಳ್ಳುವುದರಿಂದ ಹೆಚ್ಚು ಮಾಹಿತಿಪೂರ್ಣವಾದ ನಿರ್ಧಾರ ತೆಗೆದುಕೊಳ್ಳಲು ಆಗುತ್ತದೆ. ಚಿನ್ನದ ಮೇಲಿನ ಸಾಲದ ವಿಚಾರವಾಗಿ ಹಲವು ನಂಬಿಕೆಗಳು ಇವೆ. ಆದರೆ ಇವೆಲ್ಲ ಈ ಹಣಕಾಸಿನ ಉತ್ಪನ್ನಗಳ ಕುರಿತಾಗಿನ ಸರಿಯಾದ ನಂಬಿಕೆಯೇ ಆಗಿರುತ್ತದೆ ಎನ್ನಲಾಗದು. ಚಿನ್ನದ ಸಾಲದ ಸುತ್ತಲಿನ ಕೆಲವು ಮಿಥ್ಯೆಗಳ ಬಗ್ಗೆ ಸ್ಪಷ್ಟನೆ ನೀಡುವ ಪ್ರಯತ್ನ ಇಲ್ಲಿದೆ. ಈ ಸಾಲದ ಕುರಿತಾಗಿ ಕೆಲವು ಸ್ಪಷ್ಟನೆಗಳನ್ನು ಇದು ನೀಡಿದೆ. ಮೊದಲ ಬಾರಿಗೆ ಚಿನ್ನದ ಸಾಲ ಪಡೆಯುತ್ತಿರುವವರು, ಹೆಚ್ಚಿನ ಸ್ಪಷ್ಟತೆ ಹಾಗೂ ವಿಶ್ವಾಸದಿಂದ ಸಾಲದ ಬಗ್ಗೆ ಮುಂದಡಿ ಇರಿಸಲು ಇದು ನೆರವಾಗುತ್ತದೆ.

ಲೇಖಕ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಚಿನ್ನದ ಸಾಲ ವಿಭಾಗದ ರಾಷ್ಟ್ರೀಯ ವ್ಯವಸ್ಥಾಪಕ

ಚಿನ್ನದ ಸಾಲ ಕುರಿತ ಮಿಥ್ಯೆ ಹಾಗೂ ವಾಸ್ತವ

ಮಿಥ್ಯೆ: ಚಿನ್ನದ ಸಾಲ ಎಂಬುದು ತುರ್ತು ಸಂದರ್ಭಕ್ಕೆ ಮಾತ್ರ

ವಾಸ್ತವ: ಚಿನ್ನದ ಸಾಲ ಒಂದೇ ಸಂದರ್ಭ ಅಥವಾ ಒಂದೇ ಉದ್ದೇಶಕ್ಕೆ ಸೀಮಿತವಲ್ಲ. ಈ ಸಾಲವು ದೇಶದಾದ್ಯಂತ ಬಹಳ ಜನಪ್ರಿಯ. ಇದು ತುರ್ತು ಸಂದರ್ಭಗಳಲ್ಲಿ ಮಾತ್ರವೇ ತೆಗೆದುಕೊಳ್ಳಬಹುದಾದುದಲ್ಲ. ಎಂಎಸ್‌ಎಂಇ ವಲಯದ ಉದ್ದಿಮೆಗಳು, ವರ್ತಕರು, ರೈತರು, ವೇತನದಾರರು ತಮ್ಮ ಹಲವು ಅಗತ್ಯಗಳನ್ನು ಪೂರೈಸಿಕೊಳ್ಳಲು ಇದನ್ನು ಪಡೆಯಬಹುದು. ಅಂದರೆ ಕಾರ್ಯಾಚರಣೆ ಬಂಡವಾಳಕ್ಕಾಗಿ, ಉದ್ದಿಮೆ ವಹಿವಾಟಿನ ವಿಸ್ತರಣೆಗೆ, ಸಾಮಾಜಿಕ ಹಾಗೂ ವೈಯಕ್ತಿಕ ಹೊಣೆಗಳನ್ನು ನಿಭಾಯಿಸುವುದಕ್ಕೆ ಈ ಸಾಲ ಪಡೆಯಬಹುದು.

ಇಂದು ಹಲವರು ತ್ವರಿತವಾಗಿ, ಸುಲಭವಾಗಿ ಸಾಲ ಪಡೆಯಲು ಚಿನ್ನದ ಮೊರೆ ಹೋಗುತ್ತಾರೆ. ತಮ್ಮಲ್ಲಿರುವ ಚಿನ್ನವನ್ನು ಬಳಸಿಕೊಂಡು ಅವರು ದಾಖಲೆಗಳ ಪರಿಶೀಲನೆ ಅಥವಾ ಕ್ರೆಡಿಟ್ ಅಂಕ ಪರಿಶೀಲನೆಯ ಗೊಡವೆ ಇಲ್ಲದೆ ಸಾಲ ಪಡೆಯುತ್ತಾರೆ. ಚಿನ್ನವು ಭಿನ್ನ ಹಿನ್ನೆಲೆಗಳ ವ್ಯಕ್ತಿಗಳಿಗೆ ಬಹಳ ನಂಬಿಕಸ್ಥ ಹಣಕಾಸಿನ ನೆರವಿನ ರೂಪದಲ್ಲಿ ಒದಗಿಬರುತ್ತಿದೆ.

ಮಿಥ್ಯೆ: ಚಿನ್ನದ ಅಡಮಾನ ಸಾಲಕ್ಕೆ ಬಡ್ಡಿ ಹೆಚ್ಚು

ವಾಸ್ತವ: ಚಿನ್ನದ ಮೇಲಿನ ಸಾಲಕ್ಕೆ ನಿಗದಿ ಮಾಡುವ ಬಡ್ಡಿ ದರವು ಸಾಮಾನ್ಯವಾಗಿ ವೈಯಕ್ತಿಕ ಸಾಲ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಪಡೆಯುವ ಸಾಲದ ಮೇಲಿನ ಬಡ್ಡಿ ದರಕ್ಕೆ ಸಮನಾಗಿ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಅವುಗಳಿಗೆ ಇರುವ ಬಡ್ಡಿ ದರಕ್ಕಿಂತ ಕಡಿಮೆಯೂ ಆಗಿರುತ್ತದೆ. ಆರ್‌ಬಿಐ ರೂಪಿಸಿರುವ ನಿಯಂತ್ರಣ ಕ್ರಮಗಳು, ಪಾರದರ್ಶಕವಾದ ಶುಲ್ಕಗಳ ಕಾರಣದಿಂದಾಗಿ ಸಾಲ ಪಡೆಯುವವರು ನ್ಯಾಯಸಮ್ಮತವಾದ ಹಾಗೂ ಸ್ಪರ್ಧಾತ್ಮಕವಾದ ಬಡ್ಡಿ ದರಕ್ಕೆ ಸಾಲ ಪಡೆಯಬಹುದು.

ಮಿಥ್ಯೆ: ಅಡಮಾನವಾಗಿ ಇರಿಸಿದ ಚಿನ್ನವನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ

ವಾಸ್ತವ: ಅಡಮಾನವಾಗಿ ಇರಿಸಿದ ಚಿನ್ನವನ್ನು ಸುರಕ್ಷಿತವಾಗಿ ಇರಿಸಲಾಗುತ್ತದೆ, ನಿಯಂತ್ರಣ ಸಂಸ್ಥೆಗಳು ಹಾಗೂ ಸಾಲ ನೀಡುವ ಕಂಪನಿಯು ರೂಪಿಸಿದ ನಿಯಮಗಳಿಗೆ ಅನುಗುಣವಾಗಿ ಅವುಗಳನ್ನು ಇರಿಸಲು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಸಾಲ ಪಡೆದವರು ಒಪ್ಪಿತ ನಿಯಮಗಳಿಗೆ ಅನುಗುಣವಾಗಿ ಸಾಲದ ಕಂತುಗಳನ್ನು ಪಾವತಿಸುತ್ತ ಇರುವವರೆಗೆ ಅವರು ಅಡಮಾನವಾಗಿ ಇರಿಸಿದ ಚಿನ್ನದ ಮೇಲೆ ಪೂರ್ಣ ಮಾಲೀಕತ್ವ ಹೊಂದಿರುತ್ತಾರೆ. ಸಾಲ ಮರುಪಾವತಿ ಸಾಧ್ಯವಾಗದೆ ಇದ್ದಲ್ಲಿ, ಅಡಮಾನವಾಗಿ ಇರಿಸಿದ ಚಿನ್ನವು ಹರಾಜಿನ ಮೂಲಕ ಮಾರಾಟವಾಗುವ ಮೊದಲು ಅದನ್ನು ವಾಪಸ್ ಪಡೆದುಕೊಳ್ಳಲು ಸಾಲಗಾರರಿಗೆ ಅವಕಾಶವನ್ನು ಕಾನೂನು ಕಲ್ಪಿಸಿಕೊಡುತ್ತದೆ.

ಮಿಥ್ಯೆ: ಚಿನ್ನದ ಸಾಲವು ಅಲ್ಪಾವಧಿಗೆ ಮಾತ್ರ ಲಭ್ಯ

ವಾಸ್ತವ: ದೇಶದ ಸಾಲದಾತ ಕಂಪನಿಗಳು ಬೇರೆ ಬೇರೆ ಅವಧಿಗೆ ಚಿನ್ನದ ಸಾಲವನ್ನು ನೀಡುತ್ತಿವೆ. ಅವಧಿಯು ಕೆಲವು ತಿಂಗಳುಗಳಿಂದ ಆರಂಭಿಸಿ ಕೆಲವು ವರ್ಷಗಳವರೆಗೆ ವಿಸ್ತರಿಸುವುದೂ ಇದೆ. ಸಾಲ ನೀಡುವ ಕಂಪನಿಯ ಅನುಕೂಲವನ್ನು ಆಧರಿಸಿ ಅವಧಿಯು ನಿರ್ಧಾರವಾಗುತ್ತದೆ. ಸಾಲ ಪಡೆಯುವವರು ಸಾಲದ ಅವಧಿ ಪೂರ್ಣಗೊಳ್ಳುವ ದಿನ ಅಸಲು ಮತ್ತು ಬಡ್ಡಿಯನ್ನು ಒಟ್ಟಾಗಿ ಒಂದೇ ಬಾರಿಗೆ ಮರುಪಾವತಿಸುವ, ತಿಂಗಳಿಗೊಮ್ಮೆ ಬಡ್ಡಿ ಮಾತ್ರ ಪಾವತಿಸಿ ಅಸಲನ್ನು ಕೊನೆಯಲ್ಲಿ ಪಾವತಿಸುವ, ಇಎಂಐ ಮೂಲಕ ಪಾವತಿಸುವ ಆಯ್ಕೆಗಳನ್ನು ಪಡೆದುಕೊಳ್ಳಬಹುದು. ಒ.ಡಿ ಸೌಲಭ್ಯವೂ ಚಿನ್ನದ ಮೇಲಿನ ಸಾಲದಲ್ಲಿ ಇರುತ್ತದೆ. ಅಲ್ಪಾವಧಿ ಹಾಗೂ ದೀರ್ಘಾವಧಿ ಹಣಕಾಸಿನ ಅಗತ್ಯಗಳನ್ನು ಪೂರೈಸಲು ಬ್ಯಾಂಕುಗಳು ಮರುಪಾವತಿ ಅವಧಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುತ್ತವೆ. ಆ ಮೂಲಕ ಚಿನ್ನದ ಸಾಲವು ಸಾಲ ಪಡೆಯುವವರ ಅಗತ್ಯಗಳಿಗೆ ಸೂಕ್ತವಾಗುವಂತೆ ಮಾಡುತ್ತವೆ.

ಮಿಥ್ಯೆ: ಚಿನ್ನದ ಸಾಲವು ಕ್ರೆಡಿಟ್ ಅಂಕದ ಮೇಲೆ ಪರಿಣಾಮ ಉಂಟುಮಾಡಬಹುದು

ವಾಸ್ತವ: ಕಾನೂನಿನ ವ್ಯಾಪ್ತಿಯಲ್ಲಿ ನೀಡುವ ಇತರ ಯಾವುದೇ ಸಾಲದಂತೆ ಚಿನ್ನದ ಅಡಮಾನ ಸಾಲವನ್ನು ಸರಿಯಾಗಿ ಮರುಪಾವತಿ ಮಾಡಿದಲ್ಲಿ, ಅದರಿಂದ ಕ್ರೆಡಿಟ್ ಅಂಕ ಉತ್ತಮವಾಗುತ್ತದೆ. ಚಿನ್ನದ ಸಾಲದಂತಹ ಭದ್ರತೆ ಇರುವ ಸಾಲಕ್ಕೆ ಅರ್ಜಿ ಸಲ್ಲಿಸಿದಾಗ ಅದಕ್ಕೆ ಕೆಲವೇ ಗಂಟೆಗಳಲ್ಲಿ ಅನುಮೋದನೆ ನೀಡಲಾಗುತ್ತದೆ. ಚಿನ್ನದ ಮೇಲಿನ ಸಾಲವನ್ನು ಮರುಪಾವತಿ ಮಾಡಲು ಹಲವು ಆಯ್ಕೆಗಳನ್ನು ನೀಡಲಾಗುತ್ತದೆ.

ಮಿಥ್ಯೆ: ಚಿನ್ನದ ಮೇಲಿನ ಸಾಲವು ಸಣ್ಣ ಉದ್ದಿಮೆಗಳ ನೆರವಿಗೆ ಬರುವುದಿಲ್ಲ


ವಾಸ್ತವ: ಭಾರತದ ಕುಟುಂಬಗಳು ಭಾರಿ ಪ್ರಮಾಣದಲ್ಲಿ ಚಿನ್ನವನ್ನು ವಿವಿಧ ರೂಪಗಳಲ್ಲಿ ಇರಿಸಿಕೊಂಡಿವೆ. ಈ ಚಿನ್ನವನ್ನು ಜವಾಬ್ದಾರಿಯುತವಾಗಿ ನಗದೀಕರಿಸಿಕೊಳ್ಳಬಹುದು. ಹೀಗೆ ನಗದೀಕರಿಸಿಕೊಂಡಲ್ಲಿ ಎಂಎಸ್‌ಎಂಇ ವಲಯದ ಹಲವು ಉದ್ದಿಮೆಗಳಿಗೆ ಕಾರ್ಯಾಚರಣೆ ಬಂಡವಾಳಕ್ಕೆ ಹಣ ಲಭ್ಯವಾಗುತ್ತದೆ. ಕುಟುಂಬಗಳಿಗೆ ಹಾಗೂ ಸಣ್ಣ ಉದ್ದಿಮೆಗಳಿಗೆ ಚಿನ್ನದ ಅಡಮಾನ ಸಾಲವು ಅತ್ಯಂತ ಸುಲಭವಾಗಿ ದಕ್ಕುವ ಹಾಗೂ ಅತ್ಯಂತ ಹೆಚ್ಚು ನಂಬಿಕಾರ್ಹವಾದ ಹಣದ ಮೂಲ. ಸಾಲ ನೀಡುವ ಪ್ರಕ್ರಿಯೆಯು ಪಾರದರ್ಶಕವಾಗಿ ಇರುತ್ತದೆ. ಇದರಿಂದಾಗಿ ವಿಶೇಷ ಸಂದರ್ಭಗಳಲ್ಲಿ ಸಣ್ಣ ಉದ್ದಿಮೆಗಳಿಗೆ ಕಾರ್ಯಾಚರಣೆ ಬಂಡವಾಳ ವೆಚ್ಚವನ್ನು ನಿಭಾಯಿಸಲು, ವ್ಯಕ್ತಿಗಳಿಗೆ ತಮ್ಮ ವೆಚ್ಚಗಳನ್ನು ಸುಲಭವಾಗಿ ನಿಭಾಯಿಸಲು ಆಗುತ್ತದೆ.

ಹೂಡಿಕೆಯಲ್ಲಿ ಯುವಜನರದ್ದೇ ಸಿಂಹಪಾಲು


● ಗಂಜಿ ಆದಿಶೇಷ

ಯುವಜನರು ಹೂಡಿಕೆ ಮಾಡುವ ಪ್ರಮಾಣ ಪ್ರತಿ ವರ್ಷ ಹೆಚ್ಚುತ್ತಿದೆ ಎಂಬುದನ್ನು ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಅಂಕಿ–ಅಂಶಗಳು ಹೇಳುತ್ತಿವೆ. 39 ವರ್ಷದೊಳಗಿನ ಹೂಡಿಕೆದಾರರ ಒಟ್ಟು ಪ್ರಮಾಣ 2019ರ ಮಾರ್ಚ್‌ನಲ್ಲಿ ಶೇ 53.7ರಷ್ಟಿತ್ತು. ಇದು ಈ ವರ್ಷದ ಜುಲೈಗೆ ಶೇ 68.7ಕ್ಕೆ ಹೆಚ್ಚಳವಾಗಿದೆ.


ಷೇರುಪೇಟೆಯಲ್ಲಿ ಹೂಡಿಕೆಗೆ ಹೊಸದಾಗಿ ಪ್ರವೇಶಿಸುತ್ತಿರುವವರ ಪೈಕಿ ಕೂಡ ಯುವಜನರ ಪ್ರಮಾಣ ಹೆಚ್ಚುತ್ತಿದೆ. 2018–19ರ ಆರ್ಥಿಕ ವರ್ಷದಲ್ಲಿ ಹೊಸದಾಗಿ ಹೂಡಿಕೆಗೆ ಪ್ರವೇಶಿಸಿದವರಲ್ಲಿ 30 ವರ್ಷದೊಳಗಿನವರ ಪ್ರಮಾಣ ಶೇ 45.1ರಷ್ಟಿತ್ತು. ಇದು ಪ್ರಸಕ್ತ ಆರ್ಥಿಕ ವರ್ಷದ ವೇಳೆಗೆ ಶೇ 56.2ರಷ್ಟಕ್ಕೆ ಹೆಚ್ಚಳವಾಗಿದೆ.




ವಯಸ್ಸಿನ ಆಧಾರದಲ್ಲಿ ಹೂಡಿಕೆದಾರರು (%)



ವಲಯವಾರು ಹೂಡಿಕೆದಾರರು



ಹೆಚ್ಚು ಹೂಡಿಕೆದಾರರನ್ನು ಹೊಂದಿರುವ ರಾಜ್ಯಗಳೆಷ್ಟು (ಆಗಸ್ಟ್‌ವರೆಗೆ)



ಪ್ರ.ವಾ. ಗ್ರಾಫಿಕ್ಸ್: ಕಣಕಾಲಮಠ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.1

1. ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ ಮತ್ತು ಏಕೆ?

i) ಒಂದು ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ.. 15/– ಆಗಿದ್ದು ನಂತರದ ಪ್ರತಿ ಕಿಲೋಮೀಟರ್‌ಗೆ ರೂ.. 8/–ರಂತೆ ಇರುತ್ತದೆ.

ii) ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

iii) ಬಾವಿಯನ್ನು ತೋಡುವಾಗ ಮೊದಲ ಮೀಟರ್‌ಗೆ ರೂ. 150/– ನಂತರದ ಪ್ರತಿ ಮೀಟರ್‌ಗೆ ರೂ. 50/–ರಂತೆ ಹೆಚ್ಚಾಗುತ್ತಾ ಹೋಗುತ್ತದೆ.

iv) ಆರಂಭಿಕ ಠೇವಣಿ ರೂ. 10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ:

(i) ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ. 15/= a_1
ಟ್ಯಾಕ್ಸಿಯ ಬಾಡಿಗೆ 2kms = Rs15 + Rs8 = Rs 23 = a_2
ಟ್ಯಾಕ್ಸಿಯ ಬಾಡಿಗೆ 3kms = Rs23 + Rs8 = Rs 31 = a_3
ಟ್ಯಾಕ್ಸಿಯ ಬಾಡಿಗೆ 4kms = Rs31 + Rs8 = Rs 39 = a_4
ಹೀಗೆಯೇ ಮುಂದುವರಿಯುತ್ತದೆ

$a_2 - a_1$ = Rs 23 - Rs 15 = Rs 8
$a_3 - a_2$ = Rs 31 - Rs 23 = Rs 8
$a_4 - a_3$ = Rs 39 - Rs 31 = Rs 8

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 8 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

ಪರಿಹಾರ: (ii) ಒಂದು ನಿರ್ವಾತಗೊಳಿಸುವ ವಾಯುರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

ಸಿಲಿಂಡರಿನಲ್ಲಿರುವ ಅನಿಲದ ಪ್ರಮಾಣ x ಆಗಿರಲಿ $= a_1$
ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಒಂದು ಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು =

$$= x - \frac{x}{4} = \frac{3x}{4}\ unit = a_2$$

ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಮೂರನೇ ಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು

$$= \frac{3x}{4} - \frac{x}{4}\left(\frac{3x}{4}\right) = \frac{3x}{4} - \left(\frac{3x}{16}\right) = \frac{9x}{16}\ units$$

$$= \left(\frac{3}{4}\right)^2 x\ \ units = a_3$$

$$= \left(\frac{3}{4}\right)\left(\frac{3}{4}\right)x$$

$$= \left(\frac{3}{4}\right)^3 x\ units = a_4$$

ಹೀಗೆಯೇ ಮುಂದುವರಿಯುವುದು

$$a_2 - a_1 = \left(\frac{3x}{4}\right) - x = -\frac{x}{4}\,units$$

$$a_3 - a_2 = \left(\frac{3}{4}\right)^2 x - \frac{3}{4}x = -\frac{3}{16}x\ \ units$$

$a_2 - a_1 \neq a_3 - a_2$,
ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

ಪರಿಹಾರ: (iii)

ಬಾವಿಯನ್ನು ತೋಡುವಾಗ ಮೊದಲ ಮೀಟರ್‌ಗೆ ರೂ.150/= a_1
ಬಾವಿಯನ್ನು ತೋಡುವಾಗ ಎರಡನೇ ಮೀಟರ್‌ಗೆ =
ರೂ 150 + ರೂ 50 = 200 = a_2
ಬಾವಿಯನ್ನು ತೋಡುವಾಗ ಮೂರನೇ ಮೀಟರ್‌ಗೆ =
ರೂ. 200 + ರೂ 50 = 250 = a_3
ಬಾವಿಯನ್ನು ತೋಡುವಾಗ ನಾಲ್ಕನೇ ಮೀಟರ್‌ಗೆ =
ರೂ. 250 + ರೂ 50 = 300 = a_4
ಹೀಗೆಯೇ ಮುಂದುವರಿಯುವುದು

$\Rightarrow a_2 - a_1$ = Rs. 200 – Rs. 150 = Rs.50
$\Rightarrow a_3 - a_2$ = Rs.250 – Rs.200 = Rs.50
$\Rightarrow a_4 - a_3$ = Rs.300 – Rs.250 = Rs.50

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 50 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

iv) ಆರಂಭಿಕ ಠೇವಣಿ ರೂ. 10000ಕ್ಕೆ 8% ಚಕ್ರಬಡ್ಡಿಯಂ ಪ್ರತಿವರ್ಷ ಆಗುವ ಮೊತ್ತ

ಪರಿಹಾರ: ಚಕ್ರಬಡ್ಡಿ= $P\left(1+\frac{r}{100}\right)^n$

ಇಲ್ಲಿ A =ಅಸಲು, r = ಬಡ್ಡಿದರ n= ವರ್ಷಗಳ ಸಂಖ್ಯೆ

p = 10000 n =8%

ಮೊದಲನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right) = a_1$$

ಎರಡನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right)^2 = a_2$$

ಮೂರನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right)^3 = a_3$$

ಮೊದಲನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right) = a_1$$

ಎರಡನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right)^2 = a_2$$

ಮೂರನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right)^3 = a_3$$

ಹೀಗೆಯೇ ಮುಂದುವರಿಯುತ್ತದೆ

ಆದ್ದರಿಂದ ಸಾಮಾನ್ಯ ವ್ಯತ್ಯಾಸ(d) ಸ್ಥಿರವಾಗಿಲ್ಲ ಹೀಗಾಗಿ

$a_2 - a_1 \neq a_3 - a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(ಮುಂದುವರಿಯುವುದು)


Chemistry

Coordination Compound


19. $[Cr(NH_3)_6]^{3+}$ is paramagnetic while $[Ni(CN)_4]^{2-}$ is diamagnetic. Explain why.

Ans: In $[Ni(CN)_4]^{2-}$, Ni has an oxidation state of +2. Thus, it has d^8 configuration.

Ni^{2+} :



CN^- being a strong field ligand, causes the electrons in 3d orbitals to pair. This causes Ni^{2+} to undergo dsp^2 hybridisation.




Since all the electrons are paired, it is diamagnetic in nature.

Cr has an oxidation state of +3.

Thus, it has a d^3 configuration. As NH_3 is not a strong field ligand, it does not cause the electrons in the 3d orbital to pair.

Cr^{3+} :



It undergoes d^2sp^3 hybridisation, and the 3d orbital electrons remain unpaired.

Thus, $[Ni(CN)_4]^{2-}$ is paramagnetic in nature.

20. A solution of $[Ni(H_2O)_6]^{2+}$ is green, but a solution of $[Ni(CN)_4]^{2-}$ is colourless. Explain

Ans: $[Ni(H_2O)_6]^{2+}$ consists of Ni^{+2} ion with $3d^8$ electronic configuration. In this configuration, there are two unpaired electrons which cannot pair up because H_2O is a weak ligand. Thus, the d–d transition absorbs the incoming light and emits a green light, thereby giving a green colour to the solution.


$[Ni(CN)_4]^{2-}$ consists of Ni^{+2} ion with $3d^8$ electronic configuration. But CN^- is present here as a strong ligand, and in its presence, the unpaired electrons pair up. Thus, there is no d–d transition, so there is no colour.

21. $[Fe(CN)_6]^{4-}$ and $[Fe(H_2O)_6]^{2+}$ are of different colours in dilute solutions. Why?


Ans: $[Fe(H_2O)_6]^{2+}$ and $[Fe(CN)_6]^{4-}$ have two different ligands H_2O and CN^-. CN^- being a strong field ligand, has a higher value of CFSE (crystal field splitting energy) than water. As a result, the d-d transitions absorb and give back different wavelengths of light. Thus, they have different colours in a solution.

22. Discuss the nature of bonding in metal carbonyls.

Ans: In metal carbonyls, the metal-carbon bond contains both the σ and π bond characters. A σ bond forms when a lone pair of electrons are donated to the empty orbital of the metal by the carbonyl carbon. A π bond forms when a pair of electrons are donated to the empty antibonding π* orbital by the filled d orbital of the metal. This, in its entirety, stabilises and strengthens the metal-ligand bonding. The above two types of bonding are represented as :



σ-overlap : Donation of lone pair of electrons on carbon into a vacant orbital on the metals.



π-overlap : Donation of electrons from a filled metal d-orbital into a vacant antibonding π-orbital of CO

23. Give the oxidation state, d orbital occupation and coordination number of the central metal ion in the following complexes:
(i) $K_3[Co(C_2O_4)_3]$ (ii) cis-$[CrCl_2(en)_2]Cl$
(iii) $(NH_4)_2[CoF_4]$ ***(iv) $[Mn(H_2O)_6]SO_4$***

Ans: (i) $K_3[Co(C_2O_4)_3]$ Central metal ion: Co.
Coordination number = 6.
We know,
The oxidation state is: $x - 6 = -3$
$x = +3$
The d orbital occupation: $t_{2g}^6 e_g^0$.

(ii) cis – $[Cr(en)_2Cl_2]Cl$
Central metal ion : Cr.
Coordination number = 6.
We know,
The oxidation state is:
$x + 2(0) + 2(-1) = +1$
$x - 2 = -1$
$x = +3$
The d orbital occupation: t_{2g}^3.

(iii) $(NH_4)_2[CoF_4]$ Central metal ion: Co.
Coordination number = 4.
We know,
The oxidation state is :
$x - 4 = -2$
$x = +2$
The d orbital occupation: $e_g^4 t_{2g}^3$.

(Contd.....)

ಚಿಟಿಕೆ ಸುದ್ದಿ

ಎರಡನೇ ಸುತ್ತಿನ ಸೀಟು ಹಂಚಿಕೆ

ಬೆಂಗಳೂರು: ಎಂಎಸ್‌ಸಿ ನರ್ಸಿಂಗ್, ಎಂಪಿಟಿ, ಎಂಎಸ್‌ಸಿ, ಎಎಚ್‌ಎಸ್, ಪಿಸಿ ಬಿಎಸ್‌ಸಿ ನರ್ಸಿಂಗ್ (ಲ್ಯಾಟರಲ್ ಎಂಟ್ರಿ) ಕೋರ್ಸುಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಗೆ ಆಯ್ಕೆಗಳನ್ನು ದಾಖಲಿಸಲು ಅ.30ರ ಮಧ್ಯಾಹ್ನ 3ಗಂಟೆವರೆಗೆ ಅವಕಾಶ ಕಲ್ಪಿಸಲಾಗಿದೆ.

ತಾತ್ಕಾಲಿಕ ಸೀಟು ಹಂಚಿಕೆಯ ಫಲಿತಾಂಶವನ್ನು ಅ.30ರ ರಾತ್ರಿ 8ರ ನಂತರ ಹಾಗೂ ಅಂತಿಮ ಸೀಟು ಹಂಚಿಕೆಯ ಫಲಿತಾಂಶವನ್ನು ಅ.31ರ ಬೆಳಿಗ್ಗೆ 11ರ ನಂತರ ಪ್ರಕಟಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಶುಲ್ಕ ಪಾವತಿ ಹಾಗೂ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಲು ನ.1 ರಿಂದ ನ.5ರ ಸಂಜೆ 4ರವರೆಗೆ ಅವಕಾಶವಿರುತ್ತದೆ. ಹಿಂದಿನ ಸುತ್ತಿನಲ್ಲಿ ಶುಲ್ಕ ಪಾವತಿಸಿದ್ದರೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ಸೀಟು ಹಂಚಿಕೆಯಾದವರು ನ.5ರ ಸಂಜೆ 6ರೊಳಗೆ ಆಯಾ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು.

ಉತ್ತರ ಕನ್ನಡದಲ್ಲಿ ಮಳೆ ಬಿರುಸು



ಕಾರವಾರದಲ್ಲಿ ಮಳೆಯಲ್ಲೆ ಮಹಿಳೆ ಕೊಡೆ ಹಿಡಿದುಕೊಂಡು ಪುಟ್ಟ ಮಕ್ಕಳೊಂದಿಗೆ ರಸ್ತೆ ದಾಟಿದರು

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗ ಮತ್ತು ಘಟ್ಟದ ಮೇಲಿನ ಕೆಲವೆಡೆ ಬುಧವಾರ ಬಿರುಸಿನ ಮಳೆ ಸುರಿಯಿತು. ಕಾರವಾರ ಮತ್ತು ಭಟ್ಕಳದಲ್ಲಿ ಕೆಲ ಗಂಟೆಗಳವರೆಗೆ ಗಾಳಿ ಸಹಿತ ಮಳೆಯಾಗಿದೆ.

ಅ. 31ರ ವರೆಗೂ ಕರಾವಳಿ ಭಾಗದಲ್ಲಿ ಪ್ರತಿ ಗಂಟೆಗೆ 35 ರಿಂದ 45 ಕಿ.ಮೀ ವೇಗದ ಗಾಳಿಯೊಂದಿಗೆ ಮಳೆ ಬೀಳುವ ಸಾಧ್ಯತೆ ಇದ್ದು, ಮೀನುಗಾರರು ಕಡಲಿಗೆ ಇಳಿಯದಂತೆ ಹವಾಮಾನ ಇಲಾಖೆ ತಿಳಿಸಿದೆ.

ವಿಜಯಪುರದಲ್ಲಿ ಲಘು ಭೂಕಂಪನ

ವಿಜಯಪುರ: ನಗರದಲ್ಲಿ ಮಂಗಳವಾರ 11.41, ರಾತ್ರಿ 12.38 ಮತ್ತು ಬುಧವಾರ ಬೆಳಿಗ್ಗೆ 5.30ಕ್ಕೆ ಮೂರು ಬಾರಿ ಸರಣಿ ಲಘು ಭೂಕಂಪನದ ಅನುಭವವಾಗಿದೆ.

‘ಗುಡುಗಿದ ಶಬ್ದ ಕೇಳಿಬಂದಿದೆ. ಜೊತೆಗೆ ಭೂಮಿ ಕಂಪಿಸಿದ್ದು, ಭಯದಿಂದ ಜನರು ಮನೆಯಿಂದ ಹೊರಗೆ ಓಡಿಬಂದರು. ಆತಂಕದಲ್ಲೇ ರಾತ್ರಿ ಕಳೆದರು. ಸಿಸಿಟಿವಿ ಕ್ಯಾಮೆರಾಗಳಲ್ಲಿ ಈ ದೃಶ್ಯ ಸೆರೆಯಾಗಿದೆ.

‘ರಿಕ್ಟರ್ ಮಾಪಕದಲ್ಲಿ ಭೂಕಂಪನದ ತೀವ್ರತೆ ದಾಖಲಾಗಿಲ್ಲ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರದ ವಿಜ್ಞಾನಿಗಳು ತಿಳಿಸಿದ್ದಾರೆ’ ಎಂದು ಜಿಲ್ಲಾಡಳಿತ ತಿಳಿಸಿದೆ.

ಮಗು ದತ್ತು: ಸಾವಿರಾರು ಅರ್ಜಿ

2 ವರ್ಷಗಳಲ್ಲಿ 590 ಮಕ್ಕಳು ಮಾತ್ರ ದತ್ತು
• ಕಠಿಣ ನಿಯಮಗಳ ಕಾರಣ ವಿಳಂಬ

• ಶಿವರಾಯ ಪೂಜಾರಿ



ಹುಬ್ಬಳ್ಳಿ: ರಾಜ್ಯದಲ್ಲಿ ಅನಾಥ, ಪರಿತ್ಯಕ್ತ, ನಿರ್ಗತಿಕ ಮಕ್ಕಳನ್ನು ದತ್ತು ಪಡೆಯಲು ಎರಡು ಸಾವಿರಕ್ಕೂ ಹೆಚ್ಚು ದಂಪತಿ ಕಾಯುತ್ತಿದ್ದಾರೆ. 2 ವರ್ಷಗಳಲ್ಲಿ 590 ಮಕ್ಕಳ ದತ್ತು ಪ್ರಕ್ರಿಯೆಯಷ್ಟೇ ನಡೆದಿದೆ.

ಅನಾಥ, ಪರಿತ್ಯಕ್ತ ಮಕ್ಕಳ ಪೋಷಣೆಗಾಗಿ 31 ಜಿಲ್ಲೆಗಳಲ್ಲೂ ತಲಾ ಒಂದು ಸರ್ಕಾರಿ ಮತ್ತು 724 ಸರ್ಕಾರೇತರ ಸಂಸ್ಥೆಗಳ ಬಾಲಮಂದಿರಗಳಿವೆ. ಮಕ್ಕಳನ್ನು ದತ್ತು ಪಡೆಯಲು ಪೋಷಕರೂ ಸಿದ್ಧರಿದ್ದಾರೆ. ಆದರೆ, ಆನ್‌ಲೈನ್‌ನಲ್ಲೇ ಮಾಹಿತಿ ಸಂಗ್ರಹಣೆ, ದಾಖಲೆಪತ್ರಗಳ ವಿವರಣೆ, ಸಲ್ಲಿಕೆ ಸೇರಿ ಹಲವು ನಿಯಮಗಳಿವೆ. ಎಲ್ಲವನ್ನೂ ಸಕಾಲಕ್ಕೆ ಒದಗಿಸಲು ಪೋಷಕರಿಗೆ ಕಷ್ಟವಾಗುತ್ತಿದೆ.

ರಾಜ್ಯದ ಬಾಲಮಂದಿರಗಳಲ್ಲಿ 14,013 ಮಕ್ಕಳಿದ್ದಾರೆ. 2023–24ರಲ್ಲಿ 284 ಮತ್ತು 2024–25ರಲ್ಲಿ 306 ಮಕ್ಕಳ ದತ್ತು ಪ್ರಕ್ರಿಯೆ ನಡೆದಿದ್ದು, 33 ಮಕ್ಕಳನ್ನು ವಿದೇಶಿಯರು ದತ್ತು ಪಡೆದಿದ್ದಾರೆ. ಸದ್ಯ ಪೋಷಕರನ್ನು ಹೊಂದಿರದ ಸಾಮಾನ್ಯ ಆರೋಗ್ಯದ 26 ಮಕ್ಕಳು ಹಾಗೂ ವಿಶೇಷ ಅಗತ್ಯವುಳ್ಳ 63 ಮಕ್ಕಳು ದತ್ತು ಪಡೆಯಲು ಅರ್ಹರಿದ್ದಾರೆ. ದತ್ತು ಮಕ್ಕಳಿಗಾಗಿ 2,187 ಅರ್ಜಿಗಳು ಸಲ್ಲಿಕೆಯಾಗಿವೆ.

‘ವಿವಾಹೇತರ ಸಂಬಂಧ, ಲೈಂಗಿಕ ದೌರ್ಜನ್ಯದಿಂದ ಜನಿಸುವ ಮಕ್ಕಳು ಅನಾಥವಾಗುತ್ತಿವೆ. ಕಸದ ತೊಟ್ಟಿ, ಬಸ್ ನಿಲ್ದಾಣ, ಮಾರುಕಟ್ಟೆ ಮತ್ತಿತರ ಸ್ಥಳಗಳಲ್ಲಿ ಬಿಸಾಕಿ ಹೋಗಿರುತ್ತಾರೆ. ಅಂತಹ ಮಕ್ಕಳ ರಕ್ಷಿಸಿ ಆರೈಕೆ ಮಾಡುತ್ತೇವೆ. ಪೋಷಕರ ಸಾವಿನ ಬಳಿಕ ಅನಾಥರಾಗುವ ಮಕ್ಕಳನ್ನು ಸಾರ್ವಜನಿಕರು ಮಕ್ಕಳ ರಕ್ಷಣಾ ಘಟಕಕ್ಕೆ ತಂದು ಬಿಡುವ ಘಟನೆಗಳು ನಡೆದಿವೆ. ಅಂತಹ ಮಕ್ಕಳನ್ನು ಪಾಲನೆ, ಪೋಷಣೆಗೆ ದತ್ತು ನೀಡಲಾಗುತ್ತಿದೆ’ ಎಂದು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ತಿಳಿಸಿದರು.

‘ಸಾರ್ವಜನಿಕ ಸ್ಥಳಗಳಲ್ಲಿ ಸಿಗುವ ಮಕ್ಕಳನ್ನು ಮಕ್ಕಳ ರಕ್ಷಣಾ ಘಟಕದಲ್ಲಿ ಆರೈಕೆ ಮಾಡಲಾಗುತ್ತದೆ. 2 ವರ್ಷದೊಳಗಿನ ಮಗು ಇದ್ದರೆ ವಾರಸುದಾರರು ಬಂದು ಒಯ್ಯಲು 60 ದಿನ ಮತ್ತು 2 ವರ್ಷದಿಂದ 18 ವರ್ಷದೊಳಗಿದ್ದರೆ 120 ದಿನ ಕಾಯುತ್ತೇವೆ. ವಾರಸುದಾರರು ಬಾರದಿದ್ದರೆ ಅಂತಹ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿ, ಬಳಿಕ ದತ್ತು ನೀಡಲು ಅರ್ಹ ಎಂದು ಪರಿಗಣಿಸಲಾಗುತ್ತದೆ’ ಎಂದು ಧಾರವಾಡ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾ ಜಾವೂರ ತಿಳಿಸಿದರು.

ದತ್ತು ಪ್ರಕ್ರಿಯೆ ಹೇಗೆ?

ದತ್ತು ಪಡೆಯುವ ಅರ್ಜಿದಾರರ ಜ್ಯೇಷ್ಠತೆ, ಆರೋಗ್ಯ, ಅಪರಾಧ ಹಿನ್ನೆಲೆ, ಉದ್ಯೋಗ, ಆದಾಯ, ವಯಸ್ಸು ಪರಿಶೀಲಿಸಲಾಗುತ್ತದೆ.

‘ಪತಿ, ಪತ್ನಿ ಇಬ್ಬರ ವಯಸ್ಸು 85ರೊಳಗೆ ಇದ್ದರೆ 2 ವರ್ಷದೊಳಗಿನ ಮಕ್ಕಳನ್ನು ದತ್ತು ನೀಡಲಾಗುತ್ತದೆ. ದಂಪತಿಯ ಒಟ್ಟು ವಯಸ್ಸು 85–90 ಇದ್ದರೆ 2ರಿಂದ 4 ವರ್ಷದೊಳಗಿನ ಮಕ್ಕಳನ್ನು ದತ್ತು ನೀಡಬೇಕು ಎಂಬ ನಿಯಮ ಇದೆ’ ಎಂದು ಧಾರವಾಡ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾ ಜಾವೂರ ತಿಳಿಸಿದರು.

ದತ್ತು ಪ್ರಕ್ರಿಯೆ ಕುರಿತ ಹೆಚ್ಚಿನ ಮಾಹಿತಿಗೆ ವೆಬ್ ವಿಳಾಸ: https://missionvatsalya.wcd.gov.in ವೀಕ್ಷಿಸಬಹುದು.

ಆನ್‌ಲೈನ್‌ನಲ್ಲಿ ಮೊದಲು ಅರ್ಜಿ ಸಲ್ಲಿಸಿದವರನ್ನು ದತ್ತು ನೀಡಲು ಪರಿಗಣಿಸಲಾಗುವುದು. ಮಗುವನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು

ಅರುಂಧತಿ, ಕಾರ್ಯಕ್ರಮ ವ್ಯವಸ್ಥಾಪಕಿ, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ

ದತ್ತು ನೀಡಲು ಕಾನೂನು ಪ್ರಕ್ರಿಯೆಗಳಿವೆ. ನಿಯಮಬಾಹಿರವಾಗಿ ಮಗು ಮಾರಿದರೆ, ಜನ ಸಾಮಾನ್ಯರಿಗೆ 5 ವರ್ಷ ಮತ್ತು ಅಧಿಕಾರಿಗಳು, ಸಿಬ್ಬಂದಿಗೆ 8 ವರ್ಷ ಜೈಲು ಶಿಕ್ಷೆವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ

ಶಶಿಧರ ಕೋಸಂಬೆ, ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ



ಶಿರಸಿಯ ‘ಪೆಟ್ ಪ್ಲಾನೆಟ್’ನಲ್ಲಿ ವಾಸವಾಗಿರುವ ಚಮರಿಮೃಗಗಳು

ಶಿರಸಿಯಲ್ಲಿ ಹಿಮಾಲಯದ ಯಾಕ್

ಪ್ರಜಾವಾಣಿ ವಾರ್ತೆ

ಶಿರಸಿ: ಹಿಮಾಲಯದಂಥ ತಂಪಾದ, ಎತ್ತರದ ಪರ್ವತ ಪ್ರದೇಶಗಳಲ್ಲಿ ಕಾಣಸಿಗುವ ಚಮರಿಮೃಗಗಳನ್ನು (ಯಾಕ್) ಶಿರಸಿಯ ಅನಾಥ ಪ್ರಾಣಿಗಳ ಆರೈಕೆ ಕೇಂದ್ರವಾದ ಪೆಟ್ ಪ್ಲಾನೆಟ್ ಕೇಂದ್ರದಲ್ಲಿ ಪೋಷಿಸಲಾಗುತ್ತಿದೆ.

'ಫೆಬ್ರುವರಿಯಲ್ಲಿ ಹಿಮಾಚಲ ಪ್ರದೇಶಕ್ಕೆ ತೆರಳಿದ್ದ ವೇಳೆ ಅಲ್ಲಿನ ಜನರಿಗೆ ಪೆಟ್ ಪ್ಲಾನೆಟ್ ಬಗ್ಗೆ ತಿಳಿಸಿದ್ದೆ. ಅಲ್ಲಿನ ನಿವಾಸಿಗಳು ಹಣದ ಬದಲು ಚಮರಿಮೃಗಗಳನ್ನು ಕೊಡುಗೆ ನೀಡುತ್ತೇವೆ. ಅವುಗಳನ್ನು ನೋಡಲು ಪ್ರವಾಸಿಗರಿಗೂ ಖುಷಿಯಾಗುತ್ತದೆ ಎಂದು ಮೂರು ಚಮರಿಮೃಗಗಳನ್ನು ವಾಹನದಲ್ಲಿ ಕಳುಹಿಸಿದ್ದು, ಎಲ್ಲವೂ ಆರೋಗ್ಯವಾಗಿವೆ. ಇಲ್ಲಿನ ವಾತಾವರಣಕ್ಕೆ ಹೊಂದಿಕೊಂಡಿವೆ’ ಎಂದು ಪ್ಲಾನೆಟ್‌ನ ಪ್ರಮುಖ ರಾಜೇಂದ್ರ ಶಿರ್ಸಿಕರ ಮಾಹಿತಿ ಹಂಚಿಕೊಂಡರು.

‘14 ವರ್ಷ ಮತ್ತು 10 ತಿಂಗಳ ಹೆಣ್ಣು ಮತ್ತು 2 ವರ್ಷದ ಒಂದು ಗಂಡು ಚಮರಿ ಮೃಗವಿದೆ. ಹಿಮಾಚಲದ ವಾತಾ ವರಣದ ಅನುಭವಕ್ಕಾಗಿ ಶೆಡ್ ಫ್ಯಾನ್ ಅಳವಡಿಸಲಾಗಿದೆ. ಪಶ್ಚಿಮಘಟ್ಟದ ವಾತಾವರಣಕ್ಕೆ ಬಹುತೇಕ ಎಲ್ಲ ಪ್ರಬೇಧಗಳ ಪ್ರಾಣಿಗಳು ಹೊಂದಿಕೊಳ್ಳುತ್ತವೆ’ ಎಂದರು.

ಒಳಮೀಸಲಾತಿ ಸಮರ್ಪಕ ಅನುಷ್ಠಾನಕ್ಕೆ ಕಾಯ್ದೆ

ಒಂದನೇ ಪುಟದಿಂದ...

‘ಜಾತಿ ಪ್ರಮಾಣ ಪತ್ರ ಯಾವ ರೀತಿಯಲ್ಲಿ ನೀಡಬೇಕು ಎಂಬ ಕುರಿತು ವಿವರವಾದ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ. ನೇಮಕಾತಿಗೆ ಇದ್ದ ನಿರ್ಬಂಧ ತೆರವುಗೊಳಿಸಿದ ಬಳಿಕ ಅಭ್ಯರ್ಥಿಗಳ ವಯೋಮಿತಿಯನ್ನು ಒಂದು ಅವಧಿಗೆ ಹೆಚ್ಚಳ ಮಾಡಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೇಮಕಾತಿ ಅಧಿಸೂಚನೆ ಹೊರಡಿಸಿದೆ. ಒಳ ಮೀಸಲಾತಿ ಹೋರಾಟಗಾರರ ಮೇಲಿನ ಪ್ರಕರಣವನ್ನೂ ವಾಪಸ್ ಪಡೆಯುತ್ತೇವೆ’ ಎಂದು ಹೇಳಿದರು.

ಸಚಿವರಾದ ಜಿ.ಪರಮೇಶ್ವರ, ಡಾ.ಎಚ್‌.ಸಿ.ಮಹದೇವಪ್ಪ, ಕೆ.ಎಚ್‌. ಮುನಿಯಪ್ಪ, ಶಿವರಾಜ ತಂಗಡಗಿ, ಪ್ರಿಯಾಂಕ್ ಖರ್ಗೆ, ಆರ್‌.ಬಿ.ತಿಮ್ಮಾಪುರ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ರೋಸ್ಟರ್ ಜಾರಿ ಕುರಿತು ಎಲ್ಲರ ಅಹವಾಲುಗಳನ್ನೂ ಆಲಿಸಬೇಕು. ಯಾವುದೇ ಜಾತಿಗೂ ಅನ್ಯಾಯವಾಗದಂತೆ ಮೀಸಲಾತಿ ಸಿಗುವುದನ್ನು ಖಾತ್ರಿಪಡಿಸಬೇಕು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಒಳ ಮೀಸಲಾತಿ ಸಮರ್ಪಕ ಅನುಷ್ಠಾನಕ್ಕೆ, ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಸೂಕ್ತ ಪ್ರಾತಿನಿಧ್ಯ ಒದಗಿಸಲು, ಎಲ್ಲರಿಗೂ ಅವಕಾಶ, ನ್ಯಾಯ ಸಿಗುವಂತೆ ಮಾಡಲು ಕಾನೂನಿನ ಅಗತ್ಯವಿದೆ

ಎಚ್‌.ಕೆ.ಪಾಟೀಲ, ಕಾನೂನು ಸಚಿವ

ಸ್ಮಶಾನಗಳ ಕಾರ್ಮಿಕರಿಗೆ ವೇತನ ನೀಡಲು ಒತ್ತಾಯ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಸ್ಮಶಾನಗಳಲ್ಲಿ ಕೆಲಸ ಮಾಡುವ 147 ಕಾರ್ಮಿಕರಿಗೆ ಎಂಟು ತಿಂಗಳಿನಿಂದ ವೇತನ ನೀಡದೆ ಸರ್ಕಾರ ವಂಚನೆ ಮಾಡುತ್ತಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ದುಬಾರಿ ಹಣ ಖರ್ಚು ಮಾಡಿ ಸುರಂಗ ಮಾರ್ಗ ಮಾಡಲು ಮುಂದಾಗಿರುವ ಕಾಂಗ್ರೆಸ್ ಆಡಳಿತ ಕಾರ್ಮಿಕರಿಗೆ ವೇತನ ನೀಡಿಲ್ಲ. ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಕ್ಷಣ ಬಾಕಿ ವೇತನ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.



ಒಂದೇ ಒಂದು ರಸ್ತೆ ಗುಂಡಿ ಮುಚ್ಚಲು ದುಡ್ಡಿಲ್ಲ, ಪಾಲಿಕೆ ಶಾಲೆಗಳ ಶಿಕ್ಷಕರಿಗೆ 6 ತಿಂಗಳಿಂದ ವೇತನ ಕೊಟ್ಟಿಲ್ಲ, ಬೆಂಗಳೂರಿನ ಜನ ಕಟ್ಟುತ್ತಿರುವ ಸಾವಿರಾರು ಕೋಟಿ ರೂಪಾಯಿ ತೆರಿಗೆ ಹಣ ಎಲ್ಲಿ?

ಆರ್‌.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ



ಗುತ್ತಿಗೆ ಕೆಲಸ ಮಾಡಿ ಬಂಡವಾಳ ಹಾಕಿದವರು ಬೀದಿಗೆ ಬಂದಿದ್ದಾರೆ. ಸಾಲ ಸೋಲ ಮಾಡಿ ಕೆಲಸ ಮಾಡಿದ ಸಣ್ಣ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಬಿಹಾರ ಚುನಾವಣೆಗೆ ಹಣ ಕಳಿಸಲು ಔತಣಕೂಟ, ಉಪಹಾರದ ನೆಪದಲ್ಲಿ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ. ಶಾಸಕ ಕೆ.ಎನ್‌.ರಾಜಣ್ಣ ಹೇಳಿರುವಂತೆ ಕಾಂಗ್ರೆಸ್ ಕಚೇರಿಗೆ ಬೀಗ ಹಾಕುವುದೇ ಆದರೆ ಏಳು ಲೀವರ್‌ಗಳ ನವತಾಳ್ ಬೀಗವನ್ನೇ ಹಾಕಿ, ಯಾರೂ ತೆಗೆಯಲು ಆಗಬಾರದು’ ಎಂದರು.

‘ಕ್ವಾಂಟಮ್ ಸಿಟಿ: ಹೂಡಿಕೆಗೆ ಸ್ವಿಸ್ ಕಂಪನಿಗಳ ಆಸಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಕ್ವಾಂಟಮ್ ಸಿಟಿಯಲ್ಲಿ ಸಹಭಾಗಿತ್ವಕ್ಕೆ ಸ್ವಿಟ್ಜರ್ಲೆಂಡ್‌ನ ಕಂಪನಿಗಳೂ ಸೇರಿ ಜಾಗತಿಕ ಮಟ್ಟದ ಹಲವು ಕಂಪನಿಗಳು ಆಸಕ್ತಿ ತೋರಿವೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್‌.ಎಸ್‌.ಬೋಸರಾಜು ಹೇಳಿದರು.



ಎನ್‌.ಎಸ್‌. ಬೋಸರಾಜು

ಸ್ವಿಟ್ಜರ್ಲೆಂಡ್‌ನಲ್ಲಿ ಈಚೆಗೆ ನಡೆದ ಸ್ವಿಸ್‌ನೆಕ್ಸ್ ಕ್ವಾಂಟಮ್ ಸಮಾವೇಶದಲ್ಲಿ ಭಾಗಿಯಾಗಿದ್ದರ ಬಗ್ಗೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು. ‘ಕ್ವಾಂಟಮ್ ಕ್ಷೇತ್ರದಲ್ಲಿ ಹೂಡಿಕೆಗೆ ಇರುವ ಅವಕಾಶಗಳು ಹಾಗೂ ಈ ಕ್ಷೇತ್ರದ ಅಭಿವೃದ್ಧಿಗೆ ಕರ್ನಾಟಕದಲ್ಲಿ ಇರುವ ಅವಕಾಶಗಳ ಬಗ್ಗೆ ಸಮಾವೇಶದಲ್ಲಿ ಭಾಗಿಯಾಗಿದ್ದ ಕಂಪನಿಗಳಿಗೆ ವಿವರಿಸಲಾಗಿದೆ’ ಎಂದು ಹೇಳಿದರು.

‘ದೇಶದ ಮೊದಲ ಕ್ವಾಂಟಮ್ ಸಮಾವೇಶ ಬೆಂಗಳೂರಿನಲ್ಲಿ ನಡೆದಿತ್ತು ಮತ್ತು ಅದರಲ್ಲಿ ಘೋಷಿಸಿದ್ದಂತೆ ಕ್ವಾಂಟಮ್ ಸಿಟಿ ಸ್ಥಾಪನೆಗೆ ರಾಜ್ಯ ಸರ್ಕಾರವು ಈಗಾಗಲೇ ಜಮೀನು ಮಂಜೂರು ಮಾಡಿದೆ. ಜತೆಗೆ ಕ್ವಾಂಟಮ್ ತಂತ್ರಜ್ಞಾನದಲ್ಲಿ ಪರಿಣಿತರನ್ನು ರೂಪಿಸುವ ಉದ್ದೇಶದಿಂದ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಈ ಅಂಶಗಳು ಕ್ವಾಂಟಮ್ ಕ್ಷೇತ್ರದ ಜಾಗತಿಕ ಮಟ್ಟದ ಕಂಪನಿಗಳನ್ನು ಆಕರ್ಷಿಸಿವೆ’ ಎಂದರು.

‘ಈ ಪ್ರವಾಸದ ವೇಳೆ ಕ್ವಾಂಟಮ್ ಬೇಸೆಲ್, ಸಿಇಆರ್‌ಎನ್, ಇಟಿಎಚ್ ಝ್ಯೂರಿಚ್ ಆ್ಯಂಡ್ ಝ್ಯೂರಿಚ್ ಇನ್‌ಸ್ಟ್ರುಮೆಂಟ್ಸ್ ಸಂಸ್ಥೆಗಳಿಗೆ ಭೇಟಿ ನೀಡಲಾಗಿತ್ತು. ಬೆಂಗಳೂರಿನ ಕ್ವಾಂಟಮ್ ಸಿಟಿಯಲ್ಲಿ ಹೂಡಿಕೆ ಮಾಡುವಂತೆ ಈ ಕಂಪನಿಗಳಿಗೆ ಆಹ್ವಾನ ನೀಡಲಾಗಿದೆ. ಕಂಪನಿಗಳ ಪ್ರತಿನಿಧಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಿಎಂಐಡಿಪಿ: ಹೈಕೋರ್ಟ್ ಆದೇಶ

ಅನುದಾನ ತಾರತಮ್ಯ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ‘ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ’ (ಸಿಎಂಐಡಿಪಿ) ಅಡಿ ಶಾಸಕರ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಎಸಗಲಾಗಿದೆ’ ಎಂದು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಆರ್ಥಿಕ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

‘ಸಿಎಂಐಡಿಪಿ ಯೋಜನೆಯಡಿ ಆಡಳಿತ ಪಕ್ಷದ ಶಾಸಕರಿಗೆ ತಲಾ ₹50 ಕೋಟಿ ಹಾಗೂ ವಿರೋಧ ಪಕ್ಷದ ಶಾಸಕರಿಗೆ ತಲಾ ₹25 ಕೋಟಿ ಅನುದಾನ ಹಂಚಿಕೆ ಮಾಡಿ ತಾರತಮ್ಯ ಎಸಗಲಾಗಿದೆ’ ಎಂದು ಆರೋಪಿಸಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಜಗದೀಶ್ ಶಿವಯ್ಯ ಗುಡಗುಂಟಿ ಸಲ್ಲಿಸಿರುವ ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.



ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಬಾಗಲಕೋಟೆ ಜಿಲ್ಲಾಧಿಕಾರಿಗೆ ನೋಟಿಸ್ ಜಾರಿಗೊಳಿಸಿದ ನ್ಯಾಯಪೀಠ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಪ್ರತಿವಾದಿಗಳಿಗೆ ಸೂಚಿಸಿ ವಿಚಾರಣೆಯನ್ನು 2026ರ ಜನವರಿ 31ಕ್ಕೆ ಮುಂದೂಡಿತು.

ಆಕ್ಷೇಪವೇನು?: ‘ಅನುದಾನ ಹಂಚಿಕೆಯಲ್ಲಿ ಆಡಳಿತ ಪಕ್ಷದ ಶಾಸಕರು ಹಾಗೂ ವಿರೋಧ ಪಕ್ಷದ ಶಾಸಕರಿಗೆ ತಾರತಮ್ಯ ಮಾಡುತ್ತಿರುವ ಸರ್ಕಾರದ ಈ ಧೋರಣೆ ಸಂವಿಧಾನದ 14ನೇ ವಿಧಿ ಅಡಿಯಲ್ಲಿ ಖಾತ್ರಿಪಡಿಸಲಾದ ಮೂಲಭೂತ ಹಕ್ಕುಗಳು ಹಾಗೂ 38 ಮತ್ತು 39ನೇ ವಿಧಿ ಅಡಿಯಲ್ಲಿನ ರಾಜ್ಯ ನೀತಿ ನಿರ್ದೇಶಕ ತತ್ವಗಳ ಉಲ್ಲಂಘನೆಯಾಗಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ದರ್ಶನ್‌ಗೆ 3ಂಗಳಿಗೆ ಒಮ್ಮೆ ಬೆಡ್‌ಶೀಟ್, ಬಟ್ಟೆ

ಒಂದನೇ ಪುಟದಿಂದ...

‘ದರ್ಶನ್ ಅವರು ಸಿನಿಮಾ ನಟ ಆಗಿರುವುದರಿಂದ ಓಡಾಡಿದರೆ ಇತರೆ ಬ್ಯಾರಕ್‌ನವರು ಕಿರುಚುತ್ತಾರೆ. ಅಕ್ಕಪಕ್ಕದ ಅಪಾರ್ಟ್‌ಮೆಂಟ್‌ಗಳಿಂದ ಫೋಟೊ ತೆಗೆಯುತ್ತಾರೆಂದು ಜೈಲಾಧಿಕಾರಿ ಆಕ್ಷೇಪಿಸಿದ್ದಾರೆ. ಜೈಲಿನ ಶಿಸ್ತುಪಾಲನೆ ಹಾಗೂ ನಿರ್ವಹಣೆ ಹೊರತುಪಡಿಸಿ, ನಡಿಗೆಗೆ ಹಾಗೂ ಆಟಕ್ಕೆ ಅವಕಾಶ ನೀಡಬೇಕು’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.



ಸಾಕ್ಷಿಗಳ ವಿಚಾರಣೆಗೆ ಅಸ್ತು

ದರ್ಶನ್ ಮತ್ತು ಪವಿತ್ರಾಗೌಡ ಸೇರಿ ಪ್ರಕರಣದ 6 ಆರೋಪಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಬುಧವಾರ ವಿಚಾರಣೆಗೆ ಹಾಜರಾಗಿದ್ದರು. ಉಳಿದ ಆರೋಪಿಗಳು ಖುದ್ದು ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಸಾಕ್ಷಿಗಳ ವಿಚಾರಣೆ ಕೋರಿ ಎಸ್‌ಪಿಪಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿದ ಕೋರ್ಟ್, ಅ.31ರಂದು ದರ್ಶನ್ ಸೇರಿ ಎಲ್ಲಾ ಆರೋಪಿಗಳ ವಿರುದ್ಧದ ದೋಷಾರೋಪಣೆಯ ಕಾನೂನು ಪ್ರಕ್ರಿಯೆ ಆರಂಭಿಸುವುದಾಗಿ ನ್ಯಾಯಾಲಯವು ಹೇಳಿತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸೋಮಾರಿತನದಿಂದ ಕಾಲ ಕಳೆಯುವುದು ಅಪಮಾನಕರವಾದ ನಡತೆ.

ಲಿಯೊ ಟಾಲ್‌ಸ್ಟಾಯ್

ಸಂಪಾದಕೀಯ

ಕಸಾಪಕ್ಕೆ ಆಡಳಿತಾಧಿಕಾರಿ ನೇಮಕ ತನಿಖೆಯಿಂದ ಸತ್ಯ ಹೊರಬರಲಿ

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆಡಳಿತಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಇದರೊಂದಿಗೆ, ಕಸಾಪ ತನ್ನ ಇತಿಹಾಸದಲ್ಲಿ ಎರಡನೇ ಬಾರಿ ಆಡಳಿತಾಧಿಕಾರಿಯನ್ನು ಕಂಡಂತಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಮತ್ತು ಸದಾಶಯದೊಂದಿಗೆ ಆರಂಭಗೊಂಡ ಹಾಗೂ ನೂರಾ ಹತ್ತು ವರ್ಷಗಳನ್ನು ದಾಟಿ ಮುನ್ನಡೆದಿರುವ ಸಾಹಿತ್ಯ ಪರಿಷತ್ತಿನ ಘನತೆಗೆ ಆಡಳಿತಾಧಿಕಾರಿಯ ನೇಮಕ ಕಸಿವಿಸಿ ಉಂಟುಮಾಡುವಂತಹದ್ದು. ಆದರೆ, ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ ಹಣ ಮತ್ತು ಅಧಿಕಾರದ ದುರ್ಬಳಕೆಯ ಆರೋಪಗಳ ಹಿನ್ನೆಲೆಯಲ್ಲಿ ಸರ್ಕಾರದ ಮಧ್ಯಪ್ರವೇಶ ಅನಿವಾರ್ಯವಾಗಿತ್ತು. ಪರಿಷತ್ತಿನ ಅಧ್ಯಕ್ಷರಾಗಿದ್ದ ಮಹೇಶ ಜೋಶಿ ಅವರ ಮೇಲಿನ ಟೀಕೆ ಟಿಪ್ಪಣಿಗಳ ಹಿನ್ನೆಲೆಯಲ್ಲಿ, ಕಸಾಪ ಅಧ್ಯಕ್ಷರಿಗೆ ನೀಡಲಾಗಿದ್ದ ರಾಜ್ಯ ಸಚಿವ ಸ್ಥಾನಮಾನ ಮತ್ತು ಸವಲತ್ತುಗಳನ್ನು ಸರ್ಕಾರ ಹಿಂಪಡೆದಿತ್ತು. ‘ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960’ರ ಕಲಂ 25ರ ಅಡಿ, ಸಾಹಿತ್ಯ ಪರಿಷತ್ತಿನ ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾ ಅಧಿಕಾರಿಯನ್ನು ಸಹಕಾರ ಇಲಾಖೆ ನೇಮಿಸಿತ್ತು. ವಿಚಾರಣೆಗೆ ಸಂಬಂಧಿಸಿದಂತೆ ಕಸಾಪ ಅಧ್ಯಕ್ಷರು ಸಹಕಾರ ನೀಡದ ಕಾರಣದಿಂದಾಗಿ ಆಡಳಿತಾಧಿಕಾರಿ ನೇಮಿಸುವಂತೆ ಸಹಕಾರ ಇಲಾಖೆಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಮಹೇಶ ಜೋಶಿ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಿ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೆಲವು ಸಾಹಿತಿಗಳು ಹಾಗೂ ಪರಿಷತ್ತಿನ ಹಿತಚಿಂತಕರು ಸರ್ಕಾರವನ್ನು ಒತ್ತಾಯಿಸಿದ್ದರು. ಈ ಎಲ್ಲ ಬೆಳವಣಿಗೆಯ ಭಾಗವಾಗಿ ಪರಿಷತ್ತಿಗೆ ಆಡಳಿತಾಧಿಕಾರಿ ನೇಮಕಗೊಂಡಿದ್ದಾರೆ. ಮೂರು ತಿಂಗಳ ಅವಧಿಗೆ ಅಥವಾ ವಿಚಾರಣೆ ಪೂರ್ಣಗೊಳ್ಳುವವರೆಗೆ ಆಡಳಿತಾಧಿಕಾರಿ ಕಾರ್ಯ ನಿರ್ವಹಿಸಲಿದ್ದಾರೆ.



> ಸಾಹಿತ್ಯ ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಆತಂಕ ಹುಟ್ಟಿಸುವಂತಹದ್ದು. ಪಾರದರ್ಶಕ ತನಿಖೆಯ ಮೂಲಕ ಕಸಾಪ ವರ್ಚಸ್ಸು ಮರಳುವಂತಾಗಲಿ.

ಮಹೇಶ ಜೋಶಿ ಅವರ ಮೇಲಿನ ಆರೋಪಗಳು ಗಂಭೀರವಾದವು ಹಾಗೂ ಪರಿಷತ್ತಿನ ವರ್ಚಸ್ಸಿಗೆ ಧಕ್ಕೆ ತರುವಂತಹವು. ಪರಿಷತ್ತಿನ ಅಧ್ಯಕ್ಷರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಕೆಲವು ಲೇಖಕರು ಹಾಗೂ ಕಸಾಪದ ಕೆಲವು ಜಿಲ್ಲಾ ಘಟಕಗಳ ಅಧ್ಯಕ್ಷರು ಆರೋಪಿಸಿದ್ದಾರೆ. ಬೆಂಗಳೂರು, ಹಾಸನ, ಮಂಡ್ಯ ಸೇರಿದಂತೆ ನಾಡಿನ ವಿವಿಧೆಡೆಗಳಲ್ಲಿ ಜೋಶಿಯವರ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು. ಪರಿಷತ್ತಿನಿಂದ ಹೊರಗೆ ಬಂದಿರುವ ಕಸಾಪದ ಇಬ್ಬರು ಗೌರವ ಕಾರ್ಯದರ್ಶಿಗಳು ಅಧ್ಯಕ್ಷರ ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತು ರಾಜೀನಾಮೆ ನೀಡಿರುವುದಾಗಿ ಹೇಳಿದ್ದಾರೆ. ಪರಿಷತ್ತಿನ ಹಣವನ್ನು ಕಸಾಪ ಅಧ್ಯಕ್ಷರ ಕುಟುಂಬದ ಸದಸ್ಯರ ಕಾರ್ಯಕ್ರಮಗಳಿಗೆ ನಿಯಮಬಾಹಿರವಾಗಿ ಬಳಕೆ ಮಾಡಿಕೊಳ್ಳಲಾಗಿದೆ; ಕಂಪ್ಯೂಟರ್ ಖರೀದಿ, ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ, ಅಗ್ನಿಶಾಮಕ ಉಪಕರಣದ ಅಳವಡಿಕೆ ಹಾಗೂ ಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಹಣದ ದುರುಪಯೋಗ ಆಗಿದೆ ಎನ್ನುವ ಗುರುತರ ಆರೋಪಗಳು ಮಹೇಶ ಜೋಶಿ ಅವರ ಮೇಲಿವೆ. ಪರಿಷತ್ತಿನ ಆಡಳಿತ ಮಂಡಳಿಯ ನಿರ್ಣಯಗಳನ್ನು ಸಹಕಾರ ಸಂಘದ ನಿಯಮ ನಿಬಂಧನೆಗೆ ವಿರುದ್ಧವಾಗಿ ದಾಖಲಿಸಲಾಗಿದೆ ಎನ್ನುವ ಆರೋಪಗಳೂ ಇವೆ. ಕನ್ನಡ ನಾಡು–ನುಡಿಯ ಸಬಲೀಕರಣದ ನಿಟ್ಟಿನಲ್ಲಿ ಕೆಲಸ ಮಾಡಬೇಕಾದ ಸಂಸ್ಥೆ ಭ್ರಷ್ಟಾಚಾರದ ಆರೋಪಗಳ ಕಾರಣದಿಂದ ನಿರಂತರವಾಗಿ ಸುದ್ದಿಯಲ್ಲಿರುವುದು ದುರದೃಷ್ಟಕರ.

ಆಡಳಿತಾಧಿಕಾರಿಯ ನೇಮಕದೊಂದಿಗೆ ಮಹೇಶ ಜೋಶಿ ಅವರ ಮೇಲಿನ ಆರೋಪಗಳ ತನಿಖೆಗೆ ಇದ್ದವೆನ್ನಲಾದ ಅಡಚಣೆಗಳು ದೂರವಾಗಿವೆ. ಮಹೇಶ ಜೋಶಿ ಅವರು ಕಸಾಪ ಅಧ್ಯಕ್ಷರಾದಾಗಿನಿಂದ ಒಂದಲ್ಲಾ ಒಂದು ವಿವಾದ ನಿರಂತರವಾಗಿ ಸೃಷ್ಟಿಯಾಗುತ್ತಿದ್ದು, ಆ ವಿವಾದಗಳ ಪರಿಣಾಮ ಪರಿಷತ್ತಿನ ಮೇಲಾಗಿದೆ. ಪರಿಷತ್ತಿನ ಹಿತಚಿಂತಕರೂ ಮುಜುಗರ ಅನುಭವಿಸುವಂತಾಗಿದೆ. ಪರಿಷತ್ತಿಗೆ ಅಂಟಿಕೊಂಡಿರುವ ಮಸಿಯನ್ನು ನಿವಾರಿಸುವ ನಿಟ್ಟಿನಲ್ಲಿ ತನಿಖೆಯಿಂದ ಹೊರಬರುವ ಸತ್ಯಾಂಶಗಳಿಗೆ ಮಹತ್ವದ ಪಾತ್ರವಿದೆ. ಹಾಗಾಗಿ, ತನಿಖೆಯನ್ನು ಪಾರದರ್ಶಕವಾಗಿ ನಡೆಸುವ ಹಾಗೂ ವಿಳಂಬಕ್ಕೆ ಆಸ್ಪದವಿಲ್ಲದೆ ಮುಗಿಸುವ ಜವಾಬ್ದಾರಿಯನ್ನು ಸಹಕಾರ ಇಲಾಖೆ ನಿರ್ವಹಿಸಬೇಕಾಗಿದೆ. ಪ್ರಜಾಪ್ರಭುತ್ವ ಸಂಸ್ಥೆಯೊಂದಕ್ಕೆ, ಅದರಲ್ಲೂ ಸಾಹಿತ್ಯ ಪರಿಷತ್ತಿನಂಥ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಗೆ ಆಡಳಿತಾಧಿಕಾರಿಯ ನೇಮಕ ಇರುಸುಮುರುಸು ಮಾಡುವಂತಹದ್ದು. ಆದಷ್ಟು ಬೇಗ ವಿಶ್ವಾಸಾರ್ಹ ಪ್ರಜಾಪ್ರಭುತ್ವ ವ್ಯವಸ್ಥೆ ಕಸಾಪದಲ್ಲಿ ಮರಳುವಂತೆ ಸರ್ಕಾರ ನೋಡಿಕೊಳ್ಳಬೇಕಾಗಿದೆ. ಈ ಪ್ರಕರಣ ಕಸಾಪ ಸದಸ್ಯರ ಆತ್ಮಾವಲೋಕನಕ್ಕೂ ಅವಕಾಶ ಕಲ್ಪಿಸಬೇಕಾಗಿದೆ. ಪರಿಷತ್ತನ್ನು ಮುನ್ನಡೆಸಲು ಎಂಥ ವ್ಯಕ್ತಿಗಳು ಬೇಕು ಎನ್ನುವುದರ ಬಗ್ಗೆ ಹಾಗೂ ಪರಿಷತ್ತನ್ನು ನಿಜವಾದ ಅರ್ಥದಲ್ಲಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆಗಿಸುವ ನಿಟ್ಟಿನಲ್ಲಿ ಕಸಾಪ ಸದಸ್ಯರು ಹಾಗೂ ಪ್ರಾಜ್ಞರು ಚಿಂತನೆ ನಡೆಸಲು ಇದು ಸಕಾಲ.

ಜಾತೀಯ ಅಹಂನ ಸಮೀಕ್ಷೆ ನೋಡಾ!



ಅನುರಣನ

ನಾರಾಯಣ ಎ.

> ಅಧಿಕಾರ ಮತ್ತು ಸಂಪತ್ತಿನ ನ್ಯಾಯಯುತ ಮರುಹಂಚಿಕೆಗೆ ಅಗತ್ಯವಾದ ಮಾಹಿತಿಯನ್ನು ಸಮರ್ಪಕವಾಗಿ ಕಲೆಹಾಕುವಂತೆ ಮಾಡುವ ಶಕ್ತಿಯೂ ಹಿಂದುಳಿದ ಸಮುದಾಯಗಳ ನಾಯಕರಿಗಿಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸುತ್ತ ನಡೆಯುತ್ತಿರುವ ವಿದ್ಯಮಾನಗಳು ಈ ವಾಸ್ತವವನ್ನು ಸಾರಿ ಹೇಳುತ್ತಿವೆ.

ಕರ್ನಾಟಕದಲ್ಲಿ ಸರ್ಕಾರ ನಡೆಸಲು ಹೊರಟದ್ದು ಜಾತಿ ಆಧಾರಿತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು. ಆದರೆ, ರಾಜ್ಯದಲ್ಲಿ ನಿಜಕ್ಕೂ ನಡೆದದ್ದು ಮತ್ತು ನಡೆಯುತ್ತಿರುವುದು ಬಹುತೇಕ ಜಾತಿ–ಆಧಾರಿತ ಅಹಂಕಾರದ ಸಮೀಕ್ಷೆ. ‘ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದಿಲ್ಲ, ನಡೀರಿ’ ಅಂತ ಸಮೀಕ್ಷಕರನ್ನು ಹೊರಗಟ್ಟಿದವರಿಗೆ ತಮ್ಮ ಜಾತಿಯವರು ಇತರರಿಗಿಂತ ಹೆಚ್ಚು ಸಂಪತ್ತು–ಅಧಿಕಾರ ಹೊಂದಿರುವುದು ಎಲ್ಲಿ ಜಗಜ್ಜಾಹೀರು ಆಗಿಬಿಡುತ್ತದೋ ಎಂಬ ಆತಂಕ ಇದ್ದಿರಬಹುದು. ಆದರೆ, ಅದಕ್ಕಿಂತ ಹೆಚ್ಚಾಗಿ ಅವರಲ್ಲಿ ಕಂಡದ್ದು ಅಹಂಕಾರ. ಎಲ್ಲರ ಉದ್ಧಾರಕ್ಕೆ ಸಂಬಂಧಿಸಿದ್ದು ನಮಗೆ ಸಂಬಂಧಿಸಿದ್ದಲ್ಲ ಎನ್ನುವ ತಿರಸ್ಕಾರ. ಬೆಂಗಳೂರು ಮಹಾನಗರವೊಂದರಲ್ಲೇ ಸುಮಾರು ಆರು ಲಕ್ಷ ಕುಟುಂಬಗಳು ಸಮೀಕ್ಷೆಯಲ್ಲಿ ಭಾಗಿಯಾಗಿಲ್ಲ ಎನ್ನುವುದು ಈ ತನಕದ ಅಧಿಕೃತ ವರದಿ.

ಈ ಸಮೀಕ್ಷೆಯನ್ನು ಒಂದು ರಾಜಕೀಯ ಪಕ್ಷವು ತನ್ನ ಖಯಾಲಿಗಾಗಿ ನಡೆಸುತ್ತಿದೆ, ಓರ್ವ ಮುಖ್ಯಮಂತ್ರಿ ಯಾರನ್ನೋ ತುಷ್ಟೀಕರಿಸಲು ನಡೆಸುತ್ತಿದ್ದಾರೆ ಎನ್ನುವ ಅಪಪ್ರಚಾರ ನಡೆದಿದೆ. ವಾಸ್ತವ ಅದಲ್ಲ. ಹಿಂದುಳಿದವರನ್ನು ಗುರುತಿಸಲು ಜಾತಿ ಆಧಾರಿತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯೊಂದನ್ನು ಇಡೀ ಜನಸಂಖ್ಯೆಯನ್ನು ಒಳಗೊಂಡಂತೆ ನಡೆಸಬೇಕೆಂದು ಹೇಳಿದ್ದು ಸರ್ವೋಚ್ಚ ನ್ಯಾಯಾಲಯದ 1992ರ ತೀರ್ಪು. ಆ ತೀರ್ಪಿಗೆ ಆಧಾರ, ಸಂವಿಧಾನದ ಪೀಠಿಕೆಯಲ್ಲೇ ಪ್ರತಿಪಾದಿತವಾದ ಸಾಮಾಜಿಕ–ರಾಜಕೀಯ–ಆರ್ಥಿಕ ನ್ಯಾಯ. ಸಮೀಕ್ಷೆ ನಡೆಸಲು ಕಾನೂನಿನ ಒತ್ತಾಸೆ ಒದಗಿಸಿದ್ದು ಕರ್ನಾಟಕದ ವಿಧಾನಮಂಡಲ 1995ರಲ್ಲಿ ಅಂಗೀಕರಿಸಿದ ಕಾಯ್ದೆ. ಸಮೀಕ್ಷೆಗೆ ನೈತಿಕ ಸಮರ್ಥನೆ ನೀಡಿದ್ದು ‘ಬಿದ್ದವರನು ಮೇಲೆತ್ತಲು ಎಲ್ಲರೂ ಕೈನೀಡಬೇಕೆಂಬ’ ಮಾನವತೆಯ ಮಂತ್ರ.

ಸಮೀಕ್ಷೆಯನ್ನು ಶತಾಯಗತಾಯ ಕುಲಗೆಡಿಸಬೇಕೆಂದು ಹೊರಟ ಕುಲೀನ ಜಾತಿಗಳ ಕುತಂತ್ರದ ಹಿಂದೆ ಕೆಲಸ ಮಾಡಿದ್ದು ಒಂದೇ ಒಂದು ಶಕ್ತಿ. ಅದರ ಹೆಸರು: ಜಾತಿ ಆಧಾರಿತ ಅಹಂಕಾರ. ಆ ಅಹಂಕಾರದ ಅಪರಿಮಿತ ಆಳ–ಅಗಲ ಎಷ್ಟಿದೆಯೆಂದರೆ, ಅವರಿಗೆ ಸಂವಿಧಾನ, ಸರ್ವೋಚ್ಚ ನ್ಯಾಯಾಲಯ, ವಿಧಾನಮಂಡಲದ ಉಭಯ ಸದನಗಳು, ಆ ಸದನಗಳು ರೂಪಿಸಿದ ಕಾಯ್ದೆ, ಆ ಕಾಯ್ದೆಗೆ ಅಂತಿಮಮುದ್ರೆ ಒತ್ತಿದ್ದ ರಾಜ್ಯಪಾಲರು – ಹೀಗೆ ಎಲ್ಲರೂ ಕಾಲಕಸ. ಹಾಗಾಗಿಯೇ ‘ವರ್ಣಾಶ್ರಮ–ಅಧರ್ಮ’ದ ತುತ್ತತುದಿಯಲ್ಲಿ ಪ್ರತಿಷ್ಠಾಪಿಸಿಕೊಂಡಿರುವ ಒಂದು ಜಾತಿಗೆ ಸೇರಿದ ಮತ್ತು ತಮ್ಮ ಅಪಕ್ವ ಹೇಳಿಕೆಗಳಿಗೆ ಹೆಸರಾಗಿರುವ ಸಂಸದರು ಸಿಡಿದೆದ್ದು ಸಮೀಕ್ಷೆಗೆ ಸಹಕರಿಸಬೇಡಿ ಎಂದು ಕರೆ ನೀಡಿದ್ದು. ಸಾಲದು ಎಂಬಂತೆ, ಪಕ್ವ ವಯಸ್ಸಿನ ಮಾಜಿ ಅಡ್ವೋಕೇಟ್ ಜನರಲ್‌ವರೆಗೆ ಆ ಜಾತಿಯ ಆಯಕಟ್ಟಿನ ಜಾಗದಲ್ಲಿರುವವರೆಲ್ಲಾ ಸೇರಿ ಸ್ವಬಾಂಧವರಿಗೆ ಸಮೀಕ್ಷೆ ಬಹಿಷ್ಕರಿಸಿ ಎನ್ನುವ ಬ್ರಹ್ಮಜ್ಞಾನ ಉದ್ದೇಶಿಸಿದ್ದು. ಹಾಗೆ ಅವರುಗಳು ನೀಡಿದ ಅಸಹಕಾರ ಚಳವಳಿಯ ಕರೆ ವಾಟ್ಸ್‌ಆ್ಯಪ್ ವಿಶ್ವವಿದ್ಯಾನಿಲಯದ ಮೂಲಕ ಮನೆಮನೆಗಳಿಗೆ ತಲುಪಿದ ಪರಿಣಾಮವಾಗಿಯೇ ಇಡೀ ಸಮೀಕ್ಷೆಯ ಬಗ್ಗೆ ಒಂದು ರೀತಿಯ ಅಪನಂಬಿಕೆ, ಅವಗಣನೆ, ತಿರಸ್ಕಾರ ಹುಟ್ಟಿಕೊಂಡದ್ದು.

ಸರ್ಕಾರದ ಜತೆಗೆ ಅಸಹಕಾರ ತೋರುವುದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಳಕೆಯಾದ ಅಸ್ತ್ರ. ಸರ್ಕಾರವೊಂದು ಜನವಿರೋಧಿ, ಜೀವವಿರೋಧಿ, ಪರಿಸರ ವಿರೋಧಿ ಕ್ರಮಗಳಿಗೆ ಮುಂದಾದಾಗ ಅಸಹಕಾರ ತೋರಿ ಪ್ರತಿಭಟಿಸುವುದು ಅಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ, ಸಾಮಾಜಿಕ ನ್ಯಾಯವನ್ನು ವಿಸ್ತರಿಸುವ ಉದ್ದೇಶ ಹೊಂದಿದ ಸರಳವಾದ ಅಂಕಿ–ಅಂಶ ಸಂಗ್ರಹದ ಕೆಲಸಕ್ಕೆ ಚುನಾಯಿತ ಸರ್ಕಾರವೊಂದು ನ್ಯಾಯಾಲಯದ ಆದೇಶದ ಮೇರೆಗೆ ಮುಂದಾದಾಗ ಅಸಹಕಾರಕ್ಕೆ ಯಾರಾದರೂ ಕರೆನೀಡಿದ್ದು ಇದೇ ಮೊದಲಿರಬೇಕು. ನ್ಯಾಯದ ವಿರುದ್ಧ ಅಸಹಕಾರ ತೋರುವುದು ಅನ್ಯಾಯ ಆಗುತ್ತದೆ. ಅನ್ಯಾಯಕ್ಕೆ ಬಹಿರಂಗ ಕರೆನೀಡುವ ಧೈರ್ಯ ಒದಗಿಸಬಲ್ಲ ಒಂದು ಶಕ್ತಿ ಸಂವಿಧಾನೋತ್ತರ ಭಾರತದಲ್ಲಿ ಇನ್ನೂ ಉಳಿದುಕೊಂಡಿದ್ದರೆ ಅದರ ಹೆಸರೇ ಜಾತಿ ಮತ್ತು ಕೆಲವು ಜಾತಿಗಳಿಗೆ ತಮ್ಮ ಅಸ್ಮಿತೆಯ ಒಂದೇ ಕಾರಣದಿಂದ ಸಂಚಯವಾಗುವ ಶಕ್ತಿ ನೀಡುವ ಅಹಂ. ಸಮೀಕ್ಷಕರು ಮನೆಗೆ ಬಂದಾಗ ಮಾಹಿತಿ ನೀಡದೆ ಹೊರದಬ್ಬಿ ಎನ್ನುವ ಅರ್ಥದ ಕರೆನೀಡಿದವರಿಗೆ ಆ ಧೈರ್ಯ ನೀಡಿದ್ದು ಅವರ ಜಾತಿ. ಈ ಸಮೀಕ್ಷೆ ಮೇಲ್ಜಾತಿಯವರ ವಿರುದ್ಧ ನಡೆಯುತ್ತಿರುವ ಹುನ್ನಾರ ಎಂದು ಇನ್ನೋರ್ವ ಕೇಂದ್ರ ಸಚಿವರು ಅರ್ಥಹೀನ ಹೇಳಿಕೆ ನೀಡಲು ಪ್ರೇರೇಪಣೆ ನೀಡಿದ್ದು ಅವರ ಜಾತಿ. ಇಷ್ಟೆಲ್ಲಾ ಪ್ರಶ್ನೆಗಳನ್ನು ಯಾಕೆ ಕೇಳಬೇಕು ಎಂದು ಸಮೀಕ್ಷೆಯ ಪ್ರಶ್ನಾವಳಿಯ ಪ್ರಸ್ತುತತೆಯನ್ನೇ ಪ್ರಶ್ನಿಸುವ ಮೂಲಕ ತಮ್ಮದೇ ಪಕ್ಷದ, ತಮ್ಮದೇ ಸರ್ಕಾರದ ನೈತಿಕ ಸ್ಥೈರ್ಯ ಕುಗ್ಗಿಸುವ ಅಸಂಗತ ಹೇಳಿಕೆ ನೀಡಲು ಉಪ ಮುಖ್ಯಮಂತ್ರಿಗಳಿಗೆ ಒತ್ತಾಸೆ ಒದಗಿಸಿದ್ದು ಕೂಡ ಅವರ ಜಾತಿಬಲ.

ಹಿಂದಿನ ಸಮೀಕ್ಷೆ ಅಪೂರ್ಣವಾಗಿತ್ತು, ಆ ಕಾರಣಕ್ಕೆ ಅದು ಅವೈಜ್ಞಾನಿಕ ಮತ್ತು ಅದರ ಫಲಿತಾಂಶ ತಿರಸ್ಕರಿಸಬೇಕು ಎಂದು ರಂಪ ಮಾಡಿದ್ದ ಶಕ್ತಿಗಳೇ ಈ ಸಮೀಕ್ಷೆಯಲ್ಲಿ ಪಾಲ್ಗೊಳ್ಳದೇ ಅದನ್ನು ಅಪೂರ್ಣಗೊಳಿಸಿ ಎಂದು ಕರೆ ನೀಡುತ್ತಿದ್ದಾರೆ. ಎರಡನೆಯ ಸಮೀಕ್ಷೆಯ ಅಂಕಿ–ಅಂಶಗಳನ್ನೂ ತಿರಸ್ಕರಿಸಬೇಕೆಂದು ಪಟ್ಟುಹಿಡಿಯಲು ಬೇಕಾದ ಸಿದ್ಧತೆಗಳು ಈ ಮೂಲಕ ನಡೆಯುತ್ತಿವೆ. ಒಟ್ಟಿನಲ್ಲಿ, ಕರ್ನಾಟಕದ ಶಕ್ತಿವಂತ–ಯುಕ್ತಿವಂತ ಜಾತಿಗಳ ಕೆಲವರು ವಿಧವಿಧದ ತಂತ್ರ–ಪ್ರತಿತಂತ್ರ ಹೂಡಿ, ವಾದ–ವಿವಾದ ಎಬ್ಬಿಸಿ, ತರ್ಕ–ಕುತರ್ಕಗಳನ್ನು ಮಂಡಿಸಿ ಸದರಿ ಚಾಲ್ತಿಯಲ್ಲಿರುವ ಎರಡನೆಯ ಸಮೀಕ್ಷೆಯನ್ನೂ ಹಳ್ಳಹಿಡಿಯುವಂತೆ ಮಾಡಲು ಹಗಲಿರುಳು ಶ್ರಮಿಸುತ್ತಿದ್ದರೆ, ಕರ್ನಾಟಕದ ಮಂತ್ರಿಮಂಡಲದಲ್ಲಿ ಇರುವ ಹಿಂದುಳಿದ ಜಾತಿಗಳಿಗೆ ಸೇರಿದ ಐವರು ಸಚಿವರಿಗೆ (ಹೌದು, ಐದೇ ಐದು ಮಂದಿ) ಈ ಎಲ್ಲ ಅಪಪ್ರಚಾರ–ಪಿತೂರಿಗಳ ಬಗ್ಗೆ ಗಟ್ಟಿಯಾಗಿ ಧ್ವನಿ ಎತ್ತುವ ಧೈರ್ಯವೂ ಬಾರದೆ ಹೋದದ್ದಕ್ಕೆ ಕಾರಣ ಅವರ ಜಾತಿ. ಯಾರ ಧ್ವನಿ ಎಷ್ಟಿದೆ ಎನ್ನುವುದು ಸಮೀಕ್ಷೆಯ ಪೂರ್ವಭಾವಿ ಹಂತದಲ್ಲೇ ತಿಳಿದುಹೋಗಿದೆ. ತಿಳಿದ ಸತ್ಯಕ್ಕೂ ಅಧಿಕೃತ ಅಂಕಿ–ಅಂಶಗಳ ಆಧಾರ ಇರಬೇಕು ಎನ್ನುವ ಕಾರಣಕ್ಕಷ್ಟೇ ಸಮೀಕ್ಷೆ ಪೂರ್ಣಗೊಳ್ಳಬೇಕಿರುವುದು.

ಆಡಳಿತ ಪಕ್ಷಗಳು ಬದಲಾಗಬಹುದು, ಪ್ರತಿನಿಧಿಗಳು ಬದಲಾಗಬಹುದು, ಮುಖ್ಯಮಂತ್ರಿ ಮತ್ತು ಮಂತ್ರಿಗಳು ಯಾವುದೇ ಜಾತಿಯಿಂದಲಾದರೂ ಬರಬಹುದು. ಅದೇನೇ ತಲೆಕೆಳಗಾದರೂ, ಈ ದೇಶದಲ್ಲಿ ನಿಜವಾದ ಅಧಿಕಾರ ಚಲಾಯಿಸಲು ಸಾಧ್ಯ ಆಗುವುದು ಕೆಲವೇ ಜಾತಿಗಳಿಗೆ ಮಾತ್ರ. ಈ ಜಾತಿಗಳು ಸಂಖ್ಯೆಯಲ್ಲಿ ಕಡಿಮೆ ಇರಬಹುದು, ಅವರ ಚುನಾಯಿತ ಪ್ರತಿನಿಧಿಗಳ ಸಂಖ್ಯೆ ಎಷ್ಟಾದರೂ ಇರಬಹುದು. ಅಧಿಕಾರದ ಮೇಲಿನ ಅವರ ನಿಯಂತ್ರಣ ಮಾತ್ರ ಅಬಾಧಿತವಾಗಿರುತ್ತದೆ. ಅಕಸ್ಮಾತ್ತಾಗಿ ದುರ್ಬಲ ಜಾತಿಗಳ ನಡುವೆ ಮೇಲೆದ್ದು ಬಂದ ನಾಯಕನೊಬ್ಬ ಅಧಿಕಾರದ ತುತ್ತತುದಿಯ ಹುದ್ದೆಗೆ ಏರಿದರೂ, ಅಧಿಕಾರದ ಮೇಲೆ ಅವರಿಗೆ ಪೂರ್ತಿ ನಿಯಂತ್ರಣ ಇರುವುದಿಲ್ಲ.

ಆಯಕಟ್ಟಿನ ರಾಜಕೀಯ ಹುದ್ದೆಗಳನ್ನು ಪಡೆಯುವುದು ಬೇರೆ, ನಿಜವಾದ ಅಧಿಕಾರವನ್ನು ಪಡೆಯುವುದೇ ಬೇರೆ. ದುರ್ಬಲ ಜಾತಿಗಳಿಗೆ ಇದು ಇನ್ನೂ ಅರ್ಥವಾದಂತೆ ಕಾಣಿಸುವುದಿಲ್ಲ. ತಮ್ಮ ಜಾತಿಯ ಅಥವಾ ತಮ್ಮ ಸಾಮಾಜಿಕ ಹಿನ್ನೆಲೆಯ ನಾಯಕನೊಬ್ಬ ಮುಖ್ಯಮಂತ್ರಿಯಾಗಿ ಬಿಟ್ಟರೆ, ಅವರ ಮೂಲಕ ಒಂದಷ್ಟು ಉನ್ನತಾಧಿಕಾರದ ಹುದ್ದೆಗಳನ್ನು ಆಯಾ ಜಾತಿಯ ಸಮುದಾಯದ ಮಂದಿಗೆ ಕೊಡಿಸಿಬಿಟ್ಟರೆ, ರಾಜಕೀಯ ಅಧಿಕಾರ ನಮಗೆ ಸಿಕ್ಕಿಬಿಟ್ಟಿತು ಎನ್ನುವ ಭ್ರಮೆಯಲ್ಲಿ ಈ ಜಾತಿಗಳು ಇರುತ್ತವೆ. ಆದರೆ, ವಾಸ್ತವದಲ್ಲಿ ಅಧಿಕಾರವನ್ನು ಮತ್ತು ಸಂಪತ್ತನ್ನು ನ್ಯಾಯಯುತವಾಗಿ ತಮ್ಮ ಪರ ಮರುಹಂಚಿಕೆ ಮಾಡಲು ಅಗತ್ಯವಾಗಿರುವ ಮಾಹಿತಿಯನ್ನು ಕೂಡ ನೆಟ್ಟಗೆ ಕಲೆಹಾಕುವಂತೆ ಮಾಡುವ ಶಕ್ತಿ ಈ ಸಮುದಾಯಗಳ ನಾಯಕರಿಗೆ ಇರುವುದಿಲ್ಲ. ಕರ್ನಾಟಕದಲ್ಲಿ ಸಮೀಕ್ಷೆಯ ಸುತ್ತ ನಡೆಯುತ್ತಿರುವ ವಿದ್ಯಮಾನಗಳು ಈ ವಾಸ್ತವವನ್ನು ಸಾರಿ ಹೇಳುತ್ತಿವೆ.

ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿ ಇರುವುದು ಹಿಂದುಳಿದ ಜಾತಿಗೆ ಸೇರಿದ, ಭಾರೀ ಜನಬೆಂಬಲ ಹೊಂದಿರುವ ನಾಯಕ. ಆದರೂ, ಹಿಂದುಳಿದ ಜಾತಿಗಳಿಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಅಗತ್ಯ ಇರುವ ಕನಿಷ್ಠ ಅಂಕಿ–ಅಂಶಗಳನ್ನು ಸಂಗ್ರಹಿಸುವ, ಪ್ರಕ್ರಿಯೆಯೊಂದನ್ನು ಪ್ರಾರಂಭಿಸಿ ತಾರ್ಕಿಕ ಅಂತ್ಯಕ್ಕೆ ಒಯ್ಯಲು ಅಸಾಧ್ಯವೇನೋ ಎನ್ನುವ ಪರಿಸ್ಥಿತಿ ಇದೆ.

ಈ ದೇಶದಲ್ಲಿ ನ್ಯಾಯಯುತವಾದ ಬೇಡಿಕೆ ಮಂಡಿಸುವವರು ಶಕ್ತಿಯುತರೂ ಆಗಿರಬೇಕು. ಇಲ್ಲದೆ ಹೋದರೆ ಅವರನ್ನು ದೈವವೂ ಕಣ್ಣೆತ್ತಿ ನೋಡುವುದಿಲ್ಲ. ಇತರ ಹಿಂದುಳಿದ ವರ್ಗ (ಒಬಿಸಿ) ಎಂದು ಅಧಿಕೃತವಾಗಿ ರೂಪುಗೊಂಡಿರುವ ಪಟ್ಟಿಯಲ್ಲಿರುವ ನಿಜವಾದ ಹಿಂದುಳಿದ ಜಾತಿಗಳು ಒಟ್ಟಾದರೆ ಅದು ಬಹುದೊಡ್ಡ ಸಂಖ್ಯೆ, ಭಾರೀ ಶಕ್ತಿ. ಹಿಂದುಳಿದ ಜಾತಿಗಳು ಇದನ್ನು ಅರಿಯುತ್ತಿಲ್ಲ. ತಮ್ಮಂತೆ ದುರ್ಬಲರಾಗಿರುವ ದಲಿತ–ಅಲ್ಪಸಂಖ್ಯಾತರೊಂದಿಗೆ ಸೇರಿ ಒಂದು ರಾಜಕೀಯ ಶಕ್ತಿಯಾಗಿ ಆವಿರ್ಭವಿಸುತ್ತಿಲ್ಲ. ಹೆಚ್ಚು ಅವಕಾಶಗಳನ್ನು ಪಡೆದುಕೊಂಡಿರುವ ಹಿಂದುಳಿದ ಜಾತಿಗಳು ತೀರಾ ಹಿಂದುಳಿದವರಿಗಾಗಿ ಒಂದಷ್ಟು ತ್ಯಾಗಕ್ಕೆ ಸಿದ್ಧರಾಗುತ್ತಿಲ್ಲ. ಈ ಸ್ಥಿತಿ ಮುಂದುವರಿದಷ್ಟೂ ಕಾಲ ಅವರ ಮೇಲೆ ಪ್ರಬಲ ಜಾತಿಗಳ ಅಹಂ ಸವಾರಿ ಮಾಡುತ್ತಲೇ ಇರುತ್ತದೆ. ಹಿಂದುಳಿದ ಜಾತಿಗೆ ಸೇರಿದವರು ಈ ಸತ್ಯವನ್ನು ಅರಿತು ಎರಡನೆಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಬರುತ್ತಿರುವ ವಿರೋಧವನ್ನು ಒಗ್ಗಟ್ಟಾಗಿ ಹಿಮ್ಮೆಟ್ಟಿಸದೆ ಹೋದರೆ, ಮೊದಲ ಸಮೀಕ್ಷೆಯ ವರದಿಗಾದ ಗತಿಯೇ ಈ ಸಮೀಕ್ಷೆಯ ವರದಿಗೂ ಕಾದಿದೆ.



ವಾಚಕರ ವಾಣಿ

ಅನುದಾನಿತರಿಗೂ ಸಲ್ಲಲಿ ಆರೋಗ್ಯ ಭಾಗ್ಯ

ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗೆ ‘ಆರೋಗ್ಯ ಸಂಜೀವಿನಿ’ ಯೋಜನೆಯನ್ನು ಜಾರಿಗೊಳಿಸಿದೆ. ಇದರಿಂದ ನೌಕರರು ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ನಗದುರಹಿತ ಚಿಕಿತ್ಸೆ ದೊರೆಯಲಿದೆ. ಅನುದಾನಿತ ಶಾಲಾ–ಕಾಲೇಜಿನ ನೌಕರರು ಸಹ ಸರ್ಕಾರದ ವೇತನ ಶ್ರೇಣಿಯ ವೇತನ, ಭತ್ಯೆ ಪಡೆಯುತ್ತಾರೆ. ಸರ್ಕಾರಿ ಖಜಾನೆ, ಎಚ್‌ಆರ್‌ಎಂಎಸ್ ದತ್ತಾಂಶದ ವ್ಯವಸ್ಥೆಯಡಿಯೇ ಅವರಿಗೆ ವೇತನ ಪಾವತಿಸಲಾಗುತ್ತಿದೆ. ಹೀಗಿದ್ದರೂ, ಆರೋಗ್ಯ ಸೌಲಭ್ಯ ಕಲ್ಪಿಸುವಲ್ಲಿ ಈ ನೌಕರರ ಬಗ್ಗೆ ಮಲತಾಯಿ ಧೋರಣೆ ತಳೆಯಲಾಗಿದೆ. ಅನುದಾನಿತ ನೌಕರರಿಗೂ ಈ ಯೋಜನೆಯನ್ನು ವಿಸ್ತರಿಸಬೇಕಿದೆ.

ಆರ್. ಕುಮಾರ್, ಬೆಂಗಳೂರು

ಸತ್ವದ ನೆಲೆಯ ಅರ್ಥಪೂರ್ಣ ವಿಶ್ಲೇಷಣೆ

‘ಹಿಂದೂ ನಾವೆಲ್ಲ ಒಂದು! ಎಂದು?’ ಲೇಖನದಲ್ಲಿ (ಲೇ: ರಘುನಾಥ ಚ.ಹ., ಪ್ರ.ವಾ., ಅ. 29) ಜಾತೀಯತೆ ಮತ್ತು ಮತೀಯತೆ ನಾಡಿನ ನರನಾಡಿಗಳನ್ನು ವ್ಯಾಪಿಸಿರುವುದರ ಕುರಿತಾದ ವಾಸ್ತವಿಕ ಚಿತ್ರಣವಿದೆ. ಏನೂ ಹೇಳದೆ ಭ್ರಮೆ ಮೂಡಿಸುವ ‘ಕಾಂತಾರ 1’ ಸಿನಿಮಾ ಎಲ್ಲೆಡೆ ವ್ಯಾಪಿಸಿದರೆ, ನೆಲದ ವಾಸ್ತವವನ್ನು ತೆರೆದು ತೋರುವ ‘ಹೆಬ್ಬುಲಿ ಕಟ್’ ಸಿನಿಮಾ ನೇಪಥ್ಯಕ್ಕೆ ಸರಿದಿರುವುದು ಯೋಜಿತ ಸಾಂಸ್ಕೃತಿಕ ರಾಜಕಾರಣದ ಫಲಶ್ರುತಿಯೇ ಆಗಿದೆ. ಈ ಕುರಿತು ಪ್ರಗತಿಪರ ಮತ್ತು ಎಚ್ಚರಗೊಂಡ ದಲಿತ ಸಮುದಾಯಗಳು ತಮ್ಮ ಮುಂದಿನ ನಡೆಯನ್ನು ರೂಪಿಸಿಕೊಳ್ಳಬೇಕಾಗಿದೆ. ಮುಖ್ಯವಾಗಿ ನಾವು ‘ಹೆಬ್ಬುಲಿ ಕಟ್’ ಸಿನಿಮಾ ನೋಡಬೇಕು ಮತ್ತು ಇತರರೂ ನೋಡುವಂತೆ ಪ್ರೇರೇಪಿಸಬೇಕು.

ಸರ್ಜಾಶಂಕರ ಹರಳಿಮಠ, ಶಿವಮೊಗ್ಗ

ರೋಸ್ಟರ್ ಬಿಂದು: ಪರಾಮರ್ಶೆ ಅಗತ್ಯ

ಅವೈಜ್ಞಾನಿಕವಾಗಿ ರೂಪಿಸಿರುವ ಮೀಸಲಾತಿಯ ರೋಸ್ಟರ್ ಬಿಂದು ಕುರಿತು ಒಕ್ಕಲಿಗರ ಸಂಘ ಮತ್ತು ವೀರಶೈವ ಮಹಾಸಭಾ ಧ್ವನಿ ಎತ್ತಿವೆ. 3ಎ ಮತ್ತು 3ಬಿ ಪ್ರವರ್ಗಕ್ಕೆ ಸರ್ಕಾರ ಪ್ರಕಟಿಸಿರುವ ಈ ರೋಸ್ಟರ್ ಬಿಂದುವಿನಿಂದ ಅನ್ಯಾಯ ಆಗಲಿದೆ. ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವಾಗ ಹುದ್ದೆಗಳು 25ಕ್ಕಿಂತ ಕಡಿಮೆ ಇದ್ದಾಗ ಈ ಅನ್ಯಾಯ ಸರ್ವೇಸಾಮಾನ್ಯ. ಹುದ್ದೆಗಳು 25ಕ್ಕಿಂತ ಕಡಿಮೆ ಇದ್ದಾಗ 3ಎಗೆ ಯಾವುದೇ ಮೀಸಲಾತಿ ಲಭಿಸುವುದಿಲ್ಲ. 20 ಹುದ್ದೆಗಳಿದ್ದಾಗ 3ಬಿಗೆ ಮೀಸಲಾತಿ ಸಿಗುವುದಿಲ್ಲ. ಇದೇ ಹುದ್ದೆಗಳ ಮಾದರಿಯಲ್ಲಿ 10 ಭಾರಿ ಅರ್ಜಿ ಆಹ್ವಾನಿಸಿದರೂ ಇದೇ ರೀತಿ ಆಗುತ್ತದೆ. ಹಾಗಾಗಿ, ರೋಸ್ಟರ್ ಬಿಂದುವನ್ನು ಪರಾಮರ್ಶಿಸಬೇಕಿದೆ.

ಪ್ರೀತಿ ದೇವೇಂದ್ರಪ್ಪ ಕಲಕುಟ್ರ, ಸವದತ್ತಿ

ರಸ್ತೆ ಗುಂಡಿ

ನಾಡಿನ ಕೋಟ್ಯಂತರ
ಜನರಿಗೆ ಬೆಳಕು
ನೀಡುತ್ತಿದೆ
ಜೋಗದ ಗುಂಡಿ
ನಿತ್ಯ ಲಕ್ಷಾಂತರ
ಜನರಿಗೆ ಕೊಳಕು
ದರ್ಶನ ಮಾಡಿಸುತ್ತಿವೆ
ರಾಜಧಾನಿಯ
ರಸ್ತೆ ಗುಂಡಿ!

ವೈ. ಯಮುನೇಶ್, ಹೊಸಪೇಟೆ

ಆರೋಗ್ಯ ಸಂಜೀವಿನಿ: ಗೊಂದಲ ತಪ್ಪಿಸಿ

ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗೆ ಅಕ್ಟೋಬರ್‌ನಿಂದ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಿದೆ. ಹಾಗಾಗಿ, ‘ಸಿ’ ಮತ್ತು ‘ಡಿ’ ದರ್ಜೆಯ ನೌಕರರಿಗೆ ನೀಡುತ್ತಿದ್ದ ವೈದ್ಯಕೀಯ ಭತ್ಯೆಯನ್ನು ಸ್ಥಗಿತಗೊಳಿಸಲಾಗಿದೆ. ಯೋಜನೆಗೆ ಒಳಪಟ್ಟರೆ ಯೋಜನೆಯ ಪಟ್ಟಿಯಲ್ಲಿ ಅಧಿಕೃತವಾಗಿ ಸೇರಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯಲಷ್ಟೆ ಅವಕಾಶವಿದೆ. ಹೊರರೋಗಿಯಾಗಿ ಚಿಕಿತ್ಸೆ ಪಡೆದಾಗ ಮಾಡುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಕುರಿತಾಗಲೀ ಅಥವಾ ಮುಂದುವರಿದ ಚಿಕಿತ್ಸೆಯ ವೆಚ್ಚ ಮರುಪಾವತಿಸುವ ಕುರಿತಾಗಲೀ ಸ್ಪಷ್ಟತೆಯಿಲ್ಲ. ಇದರಿಂದ ಬಹುಪಾಲು ನೌಕರರು ಯೋಜನೆಗೆ ಒಳಪಡಬೇಕೇ ಬೇಡವೇ ಎನ್ನುವ ಗೊಂದಲದಲ್ಲಿದ್ದಾರೆ. ಸರ್ಕಾರ ಈ ಬಗ್ಗೆ ಸ್ಪಷ್ಟನೆ ನೀಡಬೇಕಿದೆ.

ಇಸ್ಮಾಯಿಲ್ ಜೋಕಟ್ಟೆ, ಮಂಗಳೂರು

ನಿವೃತ್ತರಿಗೆ ಪಿಂಚಣಿ: ತಾರತಮ್ಯ ಬೇಡ

ದೇಶದಾದ್ಯಂತ ಸುಮಾರು 78 ಲಕ್ಷ ಇರುವ ಇಪಿಎಸ್ ಪಿಂಚಣಿದಾರರು ಹೆಚ್ಚಿನ ಪಿಂಚಣಿ ಸಿಗದೆ ನಿರಾಶೆಗೊಂಡಿರುವುದು ವರದಿಯಾಗಿದೆ. ಇತ್ತೀಚೆಗೆ ಇಪಿಎಫ್ ವ್ಯಾಪ್ತಿಗೆ ಒಳಪಡುವ ಕೆಲವು ನಿವೃತ್ತ ಅಧಿಕಾರಿಗಳು ಮತ್ತು ಸಿಬ್ಬಂದಿಯ ನಿರಂತರ ಕಾನೂನು ಹೋರಾಟದ ಫಲವಾಗಿ ಕೆಲವು ಷರತ್ತು ವಿಧಿಸಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಹೆಚ್ಚಿನ ಪಿಂಚಣಿ ಬರುತ್ತಿದೆ. ಕೆಎಂಎಫ್‌ನಲ್ಲಿ 35 ವರ್ಷ ಸೇವೆ ಸಲ್ಲಿಸಿ 2019ರಲ್ಲಿ ನಿವೃತ್ತನಾದ ನನಗೂ ಹೆಚ್ಚಿನ ಪಿಂಚಣಿಯು ಕಳೆದ ಮೂರು ತಿಂಗಳಿಂದ ಬರುತ್ತಿದೆ. ಕೇಂದ್ರ ಸರ್ಕಾರ ನಿವೃತ್ತರ ನೋವಿಗೆ ಸ್ಪಂದಿಸಲಿ.

ಡಿ. ಪ್ರಸನ್ನಕುಮಾರ್, ಬೆಂಗಳೂರು

‘ಗಣೇಶನ ಮದುವೆ’ಯ ಸ್ಥಿತಿ ಬಾರದಿರಲಿ!

ಕೊನೆಗೂ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಪದಚ್ಯುತಿಗೊಳಿಸಲಾಗಿದೆ. ಆ ಸ್ಥಾನಕ್ಕೆ ಆಡಳಿತಾಧಿಕಾರಿ ನೇಮಕಗೊಂಡಿದ್ದಾರೆ. ಸಾಹಿತ್ಯಗಂಗೋತ್ರಿಗೆ ಈ ಅವಸ್ಥೆ ಬರಬಾರದಿತ್ತು. ಆಡಳಿತಾಧಿಕಾರಿಯು ತನ್ನ ಕಾಲಾವಧಿಯಲ್ಲಿ ಯಾವುದೇ ರಾಜಕೀಯ ಒತ್ತಡಕ್ಕೂ ಮಣಿಯದಿರಲಿ. ಅಧಿಕಾರಿ ವರ್ಗದ ಧೋರಣೆ ಪ್ರದರ್ಶಿಸದೆ ಇರಲಿ. ಸಾಹಿತ್ಯ–ಸಂಸ್ಕೃತಿ, ನಾಡು–ನುಡಿ, ಇವುಗಳ ಪರಿಚಾರಿಕೆಯ ವಿನಮ್ರ ಭಾವ ಹೊಂದಿ ಮುನ್ನಡೆಯಲಿ. ಸರ್ಕಾರವು ಬೇಗನೆ ನೂತನ ಅಧ್ಯಕ್ಷರ ಆಯ್ಕೆಗೆ ಅನುವು ಮಾಡಿಕೊಡಲಿ. ಅಧ್ಯಕ್ಷರ ಆಯ್ಕೆಯು ‘ಗಣೇಶನ ಮದುವೆ’ಯಂತೆ; ಬಿಬಿಎಂಪಿ ಚುನಾವಣೆಯಂತೆ ನನೆಗುದಿಗೆ ಬೀಳದಿರಲಿ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಚುಟುಕು

ಪುಸ್ತಕ–ಸಂಕಟ



ಸರ್ಕಾರ ಪುಸ್ತಕ ಖರೀದಿಸಿದ ಹಣ ಕೊಡುತ್ತಿಲ್ಲ. ಪುಸ್ತಕ ಖರೀದಿ ಸ್ಥಗಿತವಾಗಿದೆ. ಗ್ರಂಥಾಲಯ ಕರ ಯಾರದೋ ಪಾಲಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳಾಗಲಿ, ಸಚಿವರಾಗಲಿ ತಲೆ ಕೆಡಿಸಿಕೊಳ್ಳುತ್ತಿಲ್ಲ. ಅನುಪಯುಕ್ತ ಇಲಾಖೆ ಅಂತ ಯಾರಿಗೂ ಕಾಳಜಿ ಇಲ್ಲ!

ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಕಾಶಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಕೇಂದ್ರ ಸರ್ಕಾರವು ಸೆಮಿಕಂಡಕ್ಟರ್ ಮಿಷನ್ ಅಡಿ ವಿಶೇಷ ಪ್ರೋತ್ಸಾಹ ಕ್ರಮಗಳನ್ನು ಕೈಗೊಂಡಿದೆ. ಸೆಮಿಕಂಡಕ್ಟರ್ ಕಂಪನಿಗಳನ್ನು ಬಿಜೆಪಿ ಆಡಳಿತವಿರುವ ಗುಜರಾತ್, ಮಹಾರಾಷ್ಟ್ರ ಮುಂತಾದ ರಾಜ್ಯಗಳಿಗೆ ಕಳುಹಿಸಿಕೊಡುತ್ತಿದೆ. ಈ ತಾರತಮ್ಯ ನೀತಿಯನ್ನು ಕೇಂದ್ರ ಸರ್ಕಾರ ಬಿಡಬೇಕಿದೆ.

ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 30-10-2000

• **ಆಮೂರ, ನಾಯಕ್ ಸೇರಿದಂತೆ 55 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ?**

ಬೆಂಗಳೂರು, ಅ. 29– ಸಾಹಿತ್ಯಕ್ಕೆ ಜಿ.ಎಸ್. ಆಮೂರ ಮತ್ತು ಜಿ.ಎಚ್. ನಾಯಕ್, ಸಂಗೀತಕ್ಕೆ ಕೃಷ್ಣ ಹಾನಗಲ್, ರಂಗಭೂಮಿಗೆ ಉಮಾಶ್ರೀ ಮತ್ತು ಕೃಷಿಗೆ ಎಸ್.ಸಿ. ಪಾಟೀಲ್ ಸೇರಿದಂತೆ ಸುಮಾರು 55 ಮಂದಿ ಗಣ್ಯರಿಗೆ ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿಗಳನ್ನು ನಾಳೆ ಪ್ರಕಟಿಸುವ ಸಂಭವವಿದೆ.

ಪ್ರಶಸ್ತಿಗಾಗಿ ಸುಮಾರು 4,000 ಅರ್ಜಿಗಳು ಬಂದಿದ್ದ ಹಿನ್ನೆಲೆಯಲ್ಲಿ ಅವುಗಳನ್ನು ಪರಿಶೀಲಿಸಿದ ಸಮಿತಿಯು 55ಕ್ಕೆ ಸೀಮಿತಗೊಳಿಸಿ, ಸಿದ್ಧಗೊಳಿಸಿದ್ದ ಪಟ್ಟಿಗೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ರಾತ್ರಿ ಒಪ್ಪಿಗೆ ನೀಡಿದ್ದು ನಾಳೆ, ಪಟ್ಟಿಯು ಪ್ರಕಟವಾಗಲಿದೆ.

• **ಸೋನಿಯಾ ಗಾಂಧಿಗೆ ಜಿತೇಂದ್ರ ಪ್ರಸಾದ ಸವಾಲು**

ನವದೆಹಲಿ, ಅ. 29– ಉತ್ತರ ಪ್ರದೇಶದ ಕಾಂಗ್ರೆಸ್ ನಾಯಕ ಜಿತೇಂದ್ರ ಪ್ರಸಾದ ಇಂದು ನಾಮಪತ್ರ ಸಲ್ಲಿಸುವ ಮೂಲಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಇಂದಿರಾಗಾಂಧಿ–ನೆಹರೂ ಕುಟುಂಬದ ಸದಸ್ಯೆಯನ್ನು ಎದುರಿಸುವ ಸವಾಲು ಸ್ವೀಕರಿಸಿದ್ದಾರೆ.


75 ವರ್ಷಗಳ ಹಿಂದೆ

ಸೋಮವಾರ, 30-10-1950

• **ಭಾರತದಲ್ಲಿ ವಿದ್ಯಾ ಕ್ರಾಂತಿ ಮತ್ತು ಅಸ್ಪೃಶ್ಯತಾ ನಿವಾರಣೆ ಅತ್ಯಗತ್ಯ**

ಅಹಮದಾಬಾದ್, ಅ. 29– ‘ಅಸ್ಪೃಶ್ಯತೆಯನ್ನು ಕಿತ್ತೊಗೆಯದ ಹೊರತು ಭಾರತವು ಸ್ವತಂತ್ರವಾಗಿ ಬಾಳಲಾರದೆಂಬುದಾಗಿ ಎಚ್ಚರವೀಯಲು ಪೂಜ್ಯ ಮಹಾತ್ಮ ಗಾಂಧಿಯವರು ಸಾಬರಮತಿ ಆಶ್ರಮವನ್ನು ಹರಿಜನ ಆಶ್ರಮವನ್ನಾಗಿ ಪರಿವರ್ತಿಸಿದರು’ ಎಂದು ಉಪ ಮಹಾ ಪ್ರಧಾನಿ ಸರ್ದಾರ್ ಪಟೇಲರು ತಿಳಿಸಿದರು. ಗುಜರಾತ್ ವಿದ್ಯಾಪೀಠದ ಪದವೀದಾನ ಸಮಾರಂಭದಲ್ಲಿ ಮಾತನಾಡುತ್ತಾ, ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯತೆಯ ನಿರ್ಮೂಲನ ಮತ್ತು ವಿದ್ಯಾಭ್ಯಾಸದ ಕ್ರಾಂತಿಕಾರಕ ಬದಲಾವಣೆಯ ಅಗತ್ಯವನ್ನು ಒತ್ತಿ ಹೇಳಿದರು.

ಚುರುಮುರಿ



‘ಮಕ್ಕಳ’ ದಿನಾಚರಣೆ!

• ಗುರು ಪಿ.ಎಸ್.

ರಾಜಕೀಯ ಧುರೀಣರೆಲ್ಲ ಸಭೆ ಸೇರಿದರು. ನವೆಂಬರ್ 14ರ ಮಕ್ಕಳ ದಿನವನ್ನು ಹೇಗೆ ಆಚರಿಸಬೇಕೆಂಬುದು ಸಭೆಯ ಅಜೆಂಡಾ.

‘ನಾನಂತೂ ನನ್ನ ಮಗನನ್ನು ನಮ್ಮ ಪಕ್ಷದ ರಾಜ್ಯಾಧ್ಯಕ್ಷ ನನ್ನಾಗಿ ಮಾಡಿದ್ದೇನೆ’ ಚೂಪಾದ ಬಿಳಿ ಮೀಸೆಯಡಿ ನಸುನಕ್ಕರು ಹಿರಿಯ ರಾಜಕಾರಣಿ.

‘ನಾನು ರಾಷ್ಟ್ರಾಧ್ಯಕ್ಷ ಆಗಿರೋದಷ್ಟೇ ಅಲ್ಲ, ನನ್ನ ಮಗನಿಗೂ ಮಂತ್ರಿ ಸ್ಥಾನದ ಗಿಫ್ಟ್ ಕೊಟ್ಟಿದ್ದೇನೆ’ ಗೋಡಂಬಿ ಮೆಲ್ಲುತ್ತಾ ಹೇಳಿದರು ಮತ್ತೊಬ್ಬ ರಾಜಕಾರಣಿ.

ಪಂಚೆ ಎತ್ತಿಕಟ್ಟಿ ನಿಂತ ಮಾಸ್ ಲೀಡರ್ ಒಬ್ಬರು, ‘ನಾನು ಸಿ.ಎಂ. ಆಗಿರೋದಲ್ಲದೆ ನನ್ನ ಮಗನನ್ನ ಎಂಎಲ್ಸಿ ಮಾಡಿದ್ದೇನೆ. ಉಳಿದ ನಾಯಕರ ಮಾತಿರಲಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೂ ನನ್ನ ಮಗ ಕೇರ್ ಮಾಡಲ್ಲ’ ಎಂದರು ಹೆಮ್ಮೆಯಿಂದ.

‘ನಿಮ್ಮದೆಲ್ಲ ಏನ್ ಬಿಡಿ, ಸೆಂಟ್ರಲ್‌ನಲ್ಲಿ ನಾನು ಮಿನಿಸ್ಟರ್ ಆಗಿದೀನಿ. ಜೊತೆಗೆ, ನನ್ನ ಮಗನನ್ನ ನಮ್ಮ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ಮಾಡಿದೀವಿ. ನೀವೆಲ್ಲ ಗೆದ್ದವರಿಗೆ ಅವಕಾಶ ಕೊಟ್ಟಿದೀರಿ. ಆದರೆ, ಈವರೆಗೆ ಒಂದೇ ಒಂದು ಎಲೆಕ್ಷನ್ ಗೆಲ್ಲದ ನನ್ನ ಮಗನಿಗೆ ಹುದ್ದೆ ಕೊಡಿಸಿರೋ ನಾನೇ ಗ್ರೇಟ್’ ಬೆವರು ಒರೆಸಿಕೊಳ್ಳುತ್ತಾ ಹೇಳಿದರು ಮತ್ತೊಬ್ಬ ಲೀಡರ್.

ಹಿರಿಯ ನಾಯಕರೊಬ್ಬರು, ‘ಮಕ್ಕಳ ದಿನಾಚರಣೆ’ ಬಗ್ಗೆ ಅಂದರೆ ನಿಮ್ಮ ನಿಮ್ಮ ಮಕ್ಕಳ ಏಳಿಗೆ ಬಗ್ಗೆ ಅಲ್ಲ, ದಯವಿಟ್ಟು ರಾಜ್ಯದ ಮಕ್ಕಳ ಬಗ್ಗೆ ಮಾತನಾಡಬೇಕು ತಾವೆಲ್ಲರೂ’ ಎಂದು ವಿಷಾದದ ಧ್ವನಿಯಲ್ಲಿ ವಿನಂತಿಸಿದರು.

‘ನೋಡ್ರಿ, ಇಲ್ಲಿ ಗಾಡ್ ‘ಫಾದರ್’ ಇದ್ರೆ ಮಾತ್ರ ಅವಕಾಶ. ಗಾಡ್ ಫಾದರ್ ಅಂದ್ಕೊಂಡವರು ಮುಳ್ಳಂದಿ, ಕಾಡುಪಾಪ ಎಂದು ಬೈದಾಡಿಕೊಂಡು ಇರಬೇಕಷ್ಟೇ’ ಎಂದು ಬೇಸರಿಸಿದರು ಹಿರಿಯರೊಬ್ಬರು.

‘ನೋಡ್ರಿ ಸೀನಿಯರ್, ಒಂದು ಪಕ್ಷದ ಕಾರ್ಯಕರ್ತರು ಪಕ್ಷ, ಸಿದ್ಧಾಂತ ಅಂತ ಫೇಸ್‌ಬುಕ್‌ನಲ್ಲಿ ಹೊಡೆದಾಡೋದು, ಮತ್ತೊಂದು ಪಕ್ಷದ ಕಾರ್ಯಕರ್ತರು ದೊಣ್ಣೆ ಹಿಡ್ಕೊಂಡು ರಸ್ತೇಲಿ ಓಡಾಡೋದು ಮಾಡಿದರೆ ಹೇಗೆ ಉದ್ಧಾರ ಆಗ್ತಾರೆ. ಎಲ್ಲರೂ ನಮ್ಮಂಗೆ ಅವರವರ ಮಕ್ಕಳ ಬಗ್ಗೆ ಮಾತ್ರ ಯೋಚನೆ ಮಾಡೋದು ಕಲಿತರೆ ಅದೇ ನಿಜವಾದ ಮಕ್ಕಳ ದಿನಾಚರಣೆ’ ಎನ್ನುತ್ತಾ ಮೂರೂ ಪಕ್ಷದ ಧುರೀಣರು ಪರಸ್ಪರರ ಹೆಗಲ ಮೇಲೆ ಕೈ ಹಾಕಿಕೊಂಡು ಹೊರಹೋದರು.

ಸಂಗತ

ಕಿರುತೆರೆ ಕಥನಗಳು: ವರ್ತಮಾನಕ್ಕೆ ಕುರುಡು

ಕಿರುತೆರೆಯ ಧಾರಾವಾಹಿಗಳು ಅತ್ಯಂತ ಪ್ರಭಾವಶಾಲಿ. ಆದರೆ, ಈ ಕಥನಗಳಲ್ಲಿ ಕನ್ನಡತನದ ಸೊಗಡಿಲ್ಲ, ವರ್ತಮಾನದ ತವಕ–ತಲ್ಲಣಗಳ ಸೊಲ್ಲೂ ಇಲ್ಲ.

• ರಾಹುಲ ಬೆಳಗಲಿ

ಎಂಬತ್ತು ತೊಂಬತ್ತರ ದಶಕದಲ್ಲಿ ಇದ್ದುದು, ನವದೆಹಲಿಯ ದೂರದರ್ಶನ ಕೇಂದ್ರ ಒಂದೇ. ನಂತರದ ದಿನಗಳಲ್ಲಿ ಕನ್ನಡದಲ್ಲಿ ‘ಚಂದನ’ ಸೇರಿದಂತೆ, ಆಯಾ ರಾಜ್ಯಗಳಲ್ಲಿ ಭಾಷಾವಾರು ವಾಹಿನಿಗಳು ಆರಂಭಗೊಂಡವು. ಎಲ್ಲದಕ್ಕೂ ಅದರದ್ದೇ ಆದ ಅಸ್ತಿತ್ವ ಮತ್ತು ವೈವಿಧ್ಯ. ಪ್ರಸಾರದ ಕಾಲಾವಕಾಶ, ತಂತ್ರಜ್ಞಾನ, ಸೌಲಭ್ಯಗಳು ಸೀಮಿತವಾಗಿದ್ದವು. ಆದರೆ, ಎಂಥದ್ದೇ ಕಾರ್ಯಕ್ರಮ ಅಥವಾ ಧಾರಾವಾಹಿಯೇ ಆಗಿರಲಿ, ಹೆಚ್ಚು ಪುನರಾವರ್ತನೆ ಅಥವಾ ಏಕತಾನತೆಗೆ ಅವಕಾಶ ಇರಲಿಲ್ಲ. ಎಲ್ಲದಕ್ಕೂ ಮಿತಿ ಎಂಬುದು ಇತ್ತು.

ಹಿಂದಿ ಚಿತ್ರಗೀತೆಗಳಿಗೆ ಭಾನುವಾರ ‘ರಂಗೋಲಿ’, ಮತ್ತು ಬುಧವಾರ ‘ಚಿತ್ರಹಾರ’, ಕನ್ನಡ ಚಿತ್ರಗೀತೆಗಳಿಗೆ ಗುರುವಾರ ‘ಚಿತ್ರಮಂಜರಿ’ ಕಾರ್ಯಕ್ರಮ ಪ್ರಸಾರ ಆಗುತ್ತಿತ್ತು. ವಾರಾಂತ್ಯದಲ್ಲಿ ಚಲನಚಿತ್ರ ಪ್ರದರ್ಶನ ಇರುತ್ತಿತ್ತು. ಶಾಸ್ತ್ರೀಯ ಸಂಗೀತ, ರಂಗಭೂಮಿ, ಕೃಷಿ ಚಟುವಟಿಕೆ, ಮಕ್ಕಳ ಧಾರಾವಾಹಿ, ಹೀಗೆ ಕಾರ್ಯಕ್ರಮ ವೈವಿಧ್ಯ ಇರುತ್ತಿತ್ತು.

ಖಾಸಗಿ ವಾಹಿನಿಗಳು ಆರಂಭವಾದಾಗಲೂ, ಒಂದೇ ರೀತಿಯ ಕಾರ್ಯಕ್ರಮ ಅಥವಾ ಧಾರಾವಾಹಿಗಳು ಪ್ರಸಾರ ಆಗದಂತೆ ಎಚ್ಚರ ವಹಿಸಲಾಗಿತ್ತು. ಧಾರಾವಾಹಿಗಳಿಗೆ ಇದ್ದಷ್ಟೇ ಪ್ರಾಮುಖ್ಯ ಸಾಕ್ಷ್ಯಚಿತ್ರ, ಕಿರುಚಿತ್ರ, ವಿಶೇಷ ಟೆಲಿಚಿತ್ರಗಳಿಗೂ ಇರುತ್ತಿತ್ತು.

ಮಧ್ಯಾಹ್ನ, ಸಂಜೆ ಅಥವಾ ರಾತ್ರಿ ಪ್ರಸಾರ ಆಗುತ್ತಿದ್ದ ಧಾರಾವಾಹಿಗಳಲ್ಲೂ ವೈವಿಧ್ಯ ಇರುತ್ತಿತ್ತು. ಕೂಡು ಕುಟುಂಬದ ಬವಣೆಗಳು ಒಂದರಲ್ಲಿ ಇದ್ದರೆ, ಇನ್ನೊಂದರಲ್ಲಿ ಪುಟ್ಟ ಕುಟುಂಬದ ಬದುಕಿನ ಸವಾಲುಗಳು ಕಾಣಸಿಗುತ್ತಿದ್ದವು. ಶ್ರೀಮಂತ ವರ್ಗದವರ ಬದುಕಿನೊಂದಿಗೆ, ಮಧ್ಯಮವರ್ಗ– ಬಡವರ ಜೀವನವೂ ಅಲ್ಲಿ ಅನಾವರಣ ಆಗುತ್ತಿತ್ತು. ಸಂಸಾರದಲ್ಲಿನ ಹಾಸ್ಯ, ಮನರಂಜನೆಗೆ ಪ್ರತ್ಯೇಕ ಧಾರಾವಾಹಿಗಳು ಇರುತ್ತಿದ್ದವು. ಎಲ್ಲಾ ಜಾತಿ, ಧರ್ಮದವರ ಸಂಸ್ಕೃತಿ ಕಥನಗಳಲ್ಲಿ ಬಿಂಬಿತಗೊಳ್ಳುತ್ತಿದ್ದವು. ಧಾರಾವಾಹಿಗಳ ಪ್ರಸಾರ ಅವಧಿಯನ್ನು 13 ಕಂತುಗಳಿಗೆ ನಿರ್ಬಂಧಿಸಲಾಗುತ್ತಿತ್ತು. ಜನಪ್ರಿಯತೆ ಮತ್ತು ಬೇಡಿಕೆ ಮೇರೆಗೆ ಕೆಲವೊಂದಕ್ಕೆ ಮಾತ್ರ ರಿಯಾಯಿತಿ ಇರುತ್ತಿತ್ತು; ವೀಕ್ಷಕರ ಅಭಿಪ್ರಾಯಗಳಿಗೆ ಒತ್ತು ನೀಡಲಾಗುತ್ತಿತ್ತು.



ವರ್ಷಗಳು ಕಳೆದಂತೆ ಹಿಂದಿಯಲ್ಲಿ ಉದ್ಯಮ ಬದುಕು ಕುರಿತು ‘ಸ್ವಾಭಿಮಾನ’, ಮಹಿಳಾ ಸಬಲೀಕರಣ ಕುರಿತು ‘ಶಾಂತಿ’ ಮೆಗಾ ಧಾರಾವಾಹಿಗಳು, ಕನ್ನಡದಲ್ಲಿ ಕೌಟುಂಬಿಕ ಒಗ್ಗಟ್ಟಿನ ಕುರಿತು ‘ಮನೆತನ’ ಮತ್ತು ನಿರುದ್ಯೋಗಿ ಯುವಜನರ ಸಾಹಸಗಳ ಬಗ್ಗೆ ‘ಸಾಧನೆ’ ಮೆಗಾ ಧಾರಾವಾಹಿಗಳ ಪ್ರಸಾರ ಆರಂಭವಾದವು. ಇವು ಕುತೂಹಲ ಕಾಯ್ದುಕೊಂಡವು; ದೀರ್ಘಕಾಲ ಎಳೆಯಲಾಗುತ್ತಿದೆ ಎಂಬ ಭಾವನೆ ಮೂಡಲಿಲ್ಲ. ಸೈನಿಕರ ಬದುಕು ಆಧರಿಸಿದ ಕಥೆಗಳು, ಪತ್ತೇದಾರಿ ಕಥೆಗಳು, ವ್ಯಕ್ತಿಗತ ಸ್ಫೂರ್ತಿದಾಯಕ ಕಥೆಗಳು ಸೇರಿದಂತೆ ಬದುಕಿನ ಹಲವು ಆಯಾಮ ಆಧರಿಸಿದ ಧಾರಾವಾಹಿಗಳು ಪ್ರಸಾರಗೊಂಡವು.

ವರ್ಷಗಳು ಕಳೆದಂತೆ ಎಲ್ಲವೂ ಬದಲಾಯಿತು. ಖಾಸಗಿ ಉಪಗ್ರಹ ವಾಹಿನಿಗಳ ಅಬ್ಬರ ಹೆಚ್ಚಾಯಿತು. ಅವು ಧಾರಾವಾಹಿಗಳಲ್ಲಿ ವೈವಿಧ್ಯ ಉಳಿಸಿಕೊಳ್ಳಲು ಮತ್ತು ಭಿನ್ನವಾದ ಕಥೆಗಳನ್ನು ಹೇಳಲು ಪ್ರಯತ್ನಿಸಿದವು ನಿಜ. ಆದರೆ, ಆ ಕಾಳಜಿ ದೀರ್ಘ ಕಾಲ ಇರಲಿಲ್ಲ. ಕಥೆಗಳಲ್ಲಿ ಬೇರೆಯದ್ದೇ ಆದ ದೃಷ್ಟಿಕೋನ ಪರಿಚಯಿಸುವುದಿರಲಿ, ಆಳವಾಗಿ ಬೇರೂರಿದ ಏಕತಾನತೆಯನ್ನು ಕಿತ್ತೆಸೆಯಲು ಸಾಧ್ಯವಾಗಲಿಲ್ಲ.

ಇತ್ತೀಚಿನ ವರ್ಷಗಳಲ್ಲಿ, ಕಥೆ ತಿರುಚುವಿಕೆಗೆ ಮತ್ತು ಜನರ ಭಾವನೆಗಳನ್ನು ಕೆರಳಿಸಲು ಮಿತಿಯೇ ಇಲ್ಲ ಎಂಬಂತೆ ಆಗಿದೆ. ಬಹುತೇಕ ಧಾರಾವಾಹಿಗಳು ಒಂದೇ ಎಳೆಯ ಮೇಲೆ ಪ್ರಸಾರ ಆಗುತ್ತಿವೆ. ವೈವಿಧ್ಯ ಅಪರೂಪ ಅಥವಾ ಇಲ್ಲವೇ ಇಲ್ಲ.

ಬಹುತೇಕ ಧಾರಾವಾಹಿಗಳು ಪ್ರೇಮ ಮತ್ತು ಮದುವೆಗೆ, ಪತಿ–ಪತ್ನಿಯ ವಿರಸಕ್ಕೆ, ಅತ್ತೆ–ಸೊಸೆಯ ಜಗಳಕ್ಕೆ, ತ್ರಿಕೋನ ಪ್ರೇಮಕಥನಕ್ಕೆ, ಮೈಬಣ್ಣ ಆಧರಿಸಿದ ವೈವಾಹಿಕ ಸಂಬಂಧಗಳಿಗೆ, ಧಾರ್ಮಿಕ ಆಚರಣೆ ಹೆಸರಿನಲ್ಲಿ ಮೂಢನಂಬಿಕೆ ಬಿತ್ತುವಿಕೆಗೆ, ದ್ವೇಷ ಸಾಧನೆಗೆ ಸೀಮಿತವಾಗಿವೆ. ಮೂರು ತಿಂಗಳು ಅಥವಾ ಆರು ತಿಂಗಳು ಬಿಟ್ಟು ವೀಕ್ಷಿಸಿದರೂ ಧಾರಾವಾಹಿಗಳ ಕಥೆಗಳು ಅಲ್ಲಿಯೇ ಗಿರಕಿ ಹೊಡೆಯುತ್ತಿರುತ್ತವೆ.

ವೈದ್ಯರು, ಶಿಕ್ಷಕರು, ಉದ್ಯಮಿಗಳ ವೃತ್ತಿ ಬದುಕೇ ಪ್ರಧಾನವೆಂದು ಬಿಂಬಿಸಿಕೊಂಡು ಕೆಲ ಧಾರಾವಾಹಿಗಳು ಆರಂಭಗೊಳ್ಳುತ್ತವೆ. ಆದರೆ, ದಿನಗಳೆದಂತೆ ಅವು ಪಾತ್ರಧಾರಿಗಳ ವೈವಾಹಿಕ ಅಥವಾ ಇನ್ನಿತರ ಸಂಬಂಧಗಳ ಸುತ್ತ ಸುರುಳಿ ಸುತ್ತುತ್ತವೆ. ಆಯಾ ವೃತ್ತಿಯ ಸವಾಲುಗಳು ಕಾಣಿಸುವುದೇ ಇಲ್ಲ. ಹೊಸ ಆಲೋಚನೆ, ದೃಷ್ಟಿಕೋನ ಕಾಣಿಸುವುದಿಲ್ಲ.

ಅನ್ಯ ರಾಜ್ಯಗಳ ಖಾಸಗಿ ವಾಹಿನಿಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳು ಇಲ್ಲಿ ಯಥಾವತ್ತು ರೀಮೇಕ್ ಆಗುತ್ತವೆ. ಇದರ ಜೊತೆಗೆ ಡಬ್ಬಿಂಗ್ ಕೂಡ ಸೇರಿಕೊಂಡಿದೆ. ಈ ಬೆಳವಣಿಗೆ ಕನ್ನಡದಲ್ಲಿ ಕಥೆಗಳ ಕೊರತೆ ಇದೆಯೆಂದು ಹೇಳುತ್ತಿದೆಯೇ ಅಥವಾ ಸೃಜನಶೀಲ ಮನೋಭಾವ ಶೂನ್ಯ ಎಂಬುದರ ಸಂಕೇತವೇ? ‘ಕೊಟ್ಟಿದ್ದನ್ನು ನೋಡಬೇಕು, ಭಿನ್ನಾಭಿಪ್ರಾಯ ಹೇಳಬಾರದು’ ಎನ್ನುವುದು ಧಾರಾವಾಹಿ ನಿರ್ಮಾತೃಗಳ ನಿಲುವಾದರೆ, ಅದು ಹೇರಿಕೆ ಆಗುತ್ತದೆಯೇ ಹೊರತು ವೀಕ್ಷಕರ ಮೆಚ್ಚುಗೆ ಗಳಿಸುವುದಿಲ್ಲ. ಇನ್ನೊಂದು ವಿಷಯ: ಧಾರಾವಾಹಿ ನಿರ್ಮಿಸುವ ಅಥವಾ ನಿರ್ದೇಶಿಸುವವರಿಗೆ ಪ್ರಚಲಿತ ವಿದ್ಯಮಾನ, ಜನಪರ ಹೋರಾಟ, ನಿರುದ್ಯೋಗ ಸಮಸ್ಯೆ, ಸಮಾಜದ ಆಗುಹೋಗುಗಳು ಕಾಣುವುದಿಲ್ಲವೇ? ಗೊತ್ತಿದ್ದರೂ ಅದನ್ನು ವ್ಯವಸ್ಥಿತವಾಗಿ ನಿರ್ಬಂಧಿಸಲಾಗುತ್ತದೆಯೇ?

ನವೆಂಬರ್ ಸಮೀಪಿಸುತ್ತಿದೆ. ಕನ್ನಡ ಮಾಸದ ಚರ್ಚೆಗಳಲ್ಲಿ, ಕನ್ನಡ ಕಿರುತೆರೆಯ ಕಾಯಕಲ್ಪವೂ ಸೇರಿಕೊಳ್ಳಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಸ್ ಪ್ರಯಾಣ, ಸುರಕ್ಷತೆ ಗೌಣ

ಕರ್ನೂಲ್ ಬಸ್ ದುರಂತ ಮತ್ತು ಅದರ ಹಿಂದೆಮುಂದೆ ನಡೆದ ಕೆಲವು ಅಪಘಾತಗಳು ಬಸ್ ಪ್ರಯಾಣದ ಸುರಕ್ಷತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿವೆ. ಹೆಚ್ಚಿನ ಅಪಘಾತಗಳಿಗೆ ನಿಯಮಗಳನ್ನು ಪಾಲಿಸದ ಬಸ್ ಸಿಬ್ಬಂದಿ ಮತ್ತು ಅವುಗಳ ಸ್ಥಿತಿಗತಿ ಸರಿಯಾಗಿ ನಿಭಾಯಿಸದ ಅಧಿಕಾರಿಗಳು ಕಾರಣಕರ್ತರಾಗಿದ್ದಾರೆ. ಹಲವು ದೇಶಗಳಲ್ಲಿ ಬಸ್ ಪ್ರಯಾಣವು ಅತ್ಯಂತ ಸುರಕ್ಷಿತ ಎಂದು ಹೆಸರಾಗಿದ್ದರೂ ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪರಿಸ್ಥಿತಿ ವ್ಯತಿರಿಕ್ತವಾಗಿದೆ

ಪ್ರಜಾವಾಣಿ ವಾರ್ತೆ

ಅಕ್ಟೋಬರ್ 14. ರಾಜಸ್ಥಾನದ ಜೈಸಲ್ಮೇರ್‌ನಿಂದ ಜೋಧಪುರಕ್ಕೆ ಹೊರಟಿದ್ದ ಹವಾನಿಯಂತ್ರಿತ ಖಾಸಗಿ ಸ್ಲೀಪರ್ ಬಸ್‌ಗೆ ಮಾರ್ಗಮಧ್ಯೆ ಬೆಂಕಿ ಹತ್ತಿಕೊಂಡು, ಅದರಲ್ಲಿದ್ದ 57 ಮಂದಿ ಪೈಕಿ 20ಕ್ಕೂ ಹೆಚ್ಚು ಮಂದಿ ಸುಟ್ಟು ಕರಕಲಾಗಿದ್ದರು. ಆ ಬಸ್‌ನಲ್ಲಿ ಮೂಲತಃ ಎ.ಸಿ ಸೌಲಭ್ಯ ಇರಲಿಲ್ಲ. ನಂತರ ಅನಧಿಕೃತವಾಗಿ ಬಸ್‌ನ ಎಲೆಕ್ಟ್ರಿಕ್ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಿ, ಎ.ಸಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಎ.ಸಿ ಶಾರ್ಟ್ ಸರ್ಕಿಟ್‌ನಿಂದ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು, ಬಸ್ ತುಂಬಾ ವ್ಯಾಪಿಸಿತ್ತು. ಮುಚ್ಚಿದ್ದ ಬಾಗಿಲುಗಳು ಜಾಮ್ ಆಗಿ ತೆಗೆಯಲು ಸಾಧ್ಯವಾಗದೇ ಪ್ರಯಾಣಿಕರು ಸಾವಿಗೀಡಾಗಿದ್ದರು.

ಅ.24: ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಸ್ಲೀಪರ್ ಬಸ್ ಕರ್ನೂಲ್ ಬಳಿ ಅಪಘಾತಕ್ಕೀಡಾಯಿತು. ಕರ್ನೂಲ್‌ನ ಯುವಕನೊಬ್ಬ ಮದ್ಯ ಕುಡಿದು ಮಧ್ಯರಾತ್ರಿಯಲ್ಲಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ಸ್ಥಳದಲ್ಲೇ ಸತ್ತುಬಿದ್ದಿದ್ದ. ಸುಮಾರು 10 ನಿಮಿಷಗಳ ನಂತರ ಅದೇ ಮಾರ್ಗವಾಗಿ ಸಾಗುತ್ತಿದ್ದ ಬಸ್, ರಸ್ತೆಯಲ್ಲಿ ಬಿದ್ದಿದ್ದ ಬೈಕ್‌ಗೆ ಡಿಕ್ಕಿ ಹೊಡೆದು, ಅದನ್ನು ಒಂದಷ್ಟು ದೂರ ಎಳೆದುಕೊಂಡು ಹೋಗಿತ್ತು. ಪರಿಣಾಮವಾಗಿ, ಬೆಂಕಿ ಕಾಣಿಸಿಕೊಂಡು, ಅದು ಬಸ್ ಅನ್ನು ವ್ಯಾಪಿಸಿ, ಬಾಗಿಲುಗಳು ಜಾಮ್ ಆಗಿ, 20 ಮಂದಿ ಪ್ರಯಾಣಿಕರು ಸಜೀವ ದಹನವಾಗಿದ್ದರು. ಬೆಂಕಿ ಶರವೇಗದಲ್ಲಿ ವ್ಯಾಪಿಸಿ ಬಸ್ ಹತ್ತಿ ಉರಿಯಲು ಅದರಲ್ಲಿ ನಿಯಮಬಾಹಿರವಾಗಿ ಸಾಗಿಸುತ್ತಿದ್ದ ನೂರಾರು ಮೊಬೈಲ್ ಫೋನ್‌ಗಳೇ ಕಾರಣ ಎನ್ನಲಾಗುತ್ತಿದೆ. 7ನೇ ತರಗತಿ ಅಷ್ಟೇ ಓದಿದ್ದ ಆ ಬಸ್ ಚಾಲಕ, ನಕಲಿ ಎಸ್‌ಎಸ್‌ಎಲ್‌ಸಿ ಸರ್ಟಿಫಿಕೇಟ್ ನೀಡಿ ವಾಹನ ಚಾಲನಾ ಪರವಾನಗಿ ಪಡೆದಿದ್ದ ಎನ್ನುವುದು ನಂತರ ತಿಳಿದುಬಂತು.

ಅ.28: ರಾಜಸ್ಥಾನದ ಜೈಪುರ ಜಿಲ್ಲೆಯಲ್ಲಿ ಉತ್ತರ ಪ್ರದೇಶದ ಕಾರ್ಮಿಕರು ಸ್ಲೀಪರ್ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಬಸ್‌ನ ಮೇಲ್ಭಾಗದಲ್ಲಿ ಅಳತೆ ಮೀರಿ ಲಗೇಜ್ ಪೇರಿಸಲಾಗಿತ್ತು. ಅದರಲ್ಲಿದ್ದ ಸೈಕಲ್ ರಸ್ತೆ ಬದಿಯಲ್ಲಿದ್ದ ವಿದ್ಯುತ್ ತಂತಿಗಳಿಗೆ ತಗುಲಿ ಬಸ್‌ಗೆ ಬೆಂಕಿ ಹತ್ತಿಕೊಂಡು ಕನಿಷ್ಠ ಇಬ್ಬರು ಕಾರ್ಮಿಕರು ಸಾವಿಗೀಡಾಗಿದ್ದರು. ಬಸ್‌ನಲ್ಲಿ ನಿಯಮಬಾಹಿರವಾಗಿ 15 ಸಿಲಿಂಡರ್‌ಗಳನ್ನು ಸಾಗಿಸಲಾಗುತ್ತಿತ್ತು. ಅವು ಸ್ಫೋಟಗೊಂಡಿದ್ದರಿಂದ ಬೆಂಕಿ ತೀವ್ರಸ್ವರೂಪ ಪಡೆದಿತ್ತು ಎಂದು ವರದಿಯಾಗಿದೆ.

ಎರಡು ವಾರಗಳ ಅಂತರದಲ್ಲಿ ನಡೆದಿರುವ ಈ ಮೂರು ಅವಘಡಗಳು, ಭಾರತದಲ್ಲಿ ಏಕೆ ಮತ್ತು ಹೇಗೆ ಬಸ್‌ಗಳು ಪದೇ ಪದೇ ಅಪಘಾತಗಳಿಗೆ ಕಾರಣವಾಗುತ್ತಿವೆ ಎನ್ನುವುದನ್ನು ವಿವರಿಸುತ್ತವೆ. ಬಸ್ ಅಪಘಾತಕ್ಕೆ ಮುಖ್ಯ ಕಾರಣ ಒಂದೇ ಆಗಿದ್ದರೂ, ಅದರ ತೀವ್ರತೆ ಹೆಚ್ಚಾಗಲು ಹಲವು ಭಿನ್ನ ಕಾರಣಗಳು ಇದ್ದವು.

ದೇಶದಲ್ಲಿ 2013ರಿಂದ ಕನಿಷ್ಠ ಏಳು ಬಸ್‌ಗಳು ಬೆಂಕಿಗಾಹುತಿಯಾಗಿದ್ದು, 130ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ. ಸಣ್ಣಪುಟ್ಟ ಅಪಘಾತಗಳು ಆಗಿಂದಾಗ್ಗೆ ವರದಿಯಾಗುತ್ತಲೇ ಇದ್ದು, ಸಾವುನೋವಿನ ಸಂಖ್ಯೆ ಲೆಕ್ಕಕ್ಕಿಲ್ಲದಂತಾಗಿದೆ. ಬಹುತೇಕ ಸಂದರ್ಭಗಳಲ್ಲಿ ಅವು ವರದಿಯಾಗುವುದೇ ಇಲ್ಲ.

ಅವಘಡ ಸಂಭವಿಸಿ, ಸಾವುನೋವು ವರದಿಯಾದ ನಂತರ ಬಸ್‌ನಲ್ಲಿದ್ದ ದೋಷಗಳು, ಕೊರತೆಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ. ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಲೋಪ, ಬಸ್ ಮಾಲೀಕ, ಚಾಲಕರ ತಪ್ಪುಗಳ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತದೆ. ಒಂದಷ್ಟು ದಿನಗಳ ನಂತರ (ಸಾವುನೋವಿಗೆ ಗುರಿಯಾದವರನ್ನು ಹೊರತುಪಡಿಸಿ) ಎಲ್ಲರೂ ಅದನ್ನು ಮರೆತುಬಿಡುತ್ತಾರೆ. ಮತ್ತೊಂದು ಅಫಘಾತ ನಡೆದ ನಂತರ ಅದೇ ಪುನರಾವರ್ತನೆಯಾಗುತ್ತದೆ.

ಆಧಾರ: ಪಿಟಿಐ, ಟೈಮ್ ಮ್ಯಾಗಜಿನ್, ಮಾಧ್ಯಮ ವರದಿಗಳು



ಅಪಘಾತಕ್ಕೆ ಕಾರಣಗಳು

- ಹೆಚ್ಚಿನ ಅಪಘಾತಗಳಿಗೆ ಚಾಲಕರ ಅತಿವೇಗ ಅಥವಾ ನಿರ್ಲಕ್ಷ್ಯದ ಚಾಲನೆ ಕಾರಣವಾಗಿರುತ್ತದೆ. ರಾತ್ರಿ ಪ್ರಯಾಣದ ವೇಳೆ ಚಾಲಕರು ತೂಕಡಿಸುವುದು; ಒಬ್ಬನೇ ಚಾಲಕ ರಾತ್ರಿಪೂರಾ ಚಾಲನೆ ಮಾಡುವುದು, ಪರ್ಯಾಯ ಚಾಲಕನ ವ್ಯವಸ್ಥೆ ಇಲ್ಲದಿರುವುದು ಕೂಡ ಕಾರಣ
- ಬಸ್ ಹಳೆಯದಾಗಿರುವುದು, ತಾಂತ್ರಿಕ ದೋಷದಿಂದ ಕೂಡಿರುವುದು, ಉತ್ತಮ ಸ್ಥಿತಿಯಲ್ಲಿ ಇಲ್ಲದಿರುವುದು, ಸುರಕ್ಷತಾ ಕ್ರಮಗಳ ಕೊರತೆ
- ರಸ್ತೆ ಗುಂಡಿ, ಅವೈಜ್ಞಾನಿಕ ಕಾಮಗಾರಿ, ಬೆಳಕಿನ ಕೊರತೆ
- ಬಸ್‌ಗಳಲ್ಲಿ ಮೊಬೈಲ್ ಚಾರ್ಜಿಂಗ್, ಎ.ಸಿ, ಅಲಂಕಾರಿಕ ದೀಪ ಇತ್ಯಾದಿ ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸಲು ಎಲೆಕ್ಟ್ರಿಕ್ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವುದು ಇತ್ತೀಚೆಗೆ ಹೆಚ್ಚಾಗಿದೆ. ಇದರಿಂದ ಶಾರ್ಟ್ ಸರ್ಕಿಟ್‌ನಂಥ ಅವಘಡಗಳು ಉಂಟಾಗುತ್ತಿವೆ. ಕೆಲವು ಬಸ್‌ಗಳಲ್ಲಿ ಹೆಚ್ಚುವರಿ ಸೀಟ್‌ಗಳನ್ನೂ ಅಳವಡಿಸಿರುತ್ತಾರೆ
- ಹೆಚ್ಚಿನ ಬಸ್‌ಗಳಲ್ಲಿ ತುರ್ತು ನಿರ್ಗಮನ ದ್ವಾರಗಳನ್ನು ಶಾಶ್ವತವಾಗಿ ಮುಚ್ಚಲಾಗಿರುತ್ತದೆ. ಬಸ್‌ಗಳ ಚಾವಣಿಯಲ್ಲಿ ತುರ್ತು ರಕ್ಷಣೆಯ ವ್ಯವಸ್ಥೆಯನ್ನೂ ಬಂದ್ ಮಾಡಲಾಗಿರುತ್ತದೆ. ತುರ್ತು ಸಂದರ್ಭಗಳಲ್ಲಿ ಕಿಟಕಿ ಗಾಜುಗಳನ್ನು ಒಡೆಯಲು ಉಪಕರಣಗಳು ಲಭ್ಯವಿರುವುದಿಲ್ಲ
- ಅಗ್ನಿಶಾಮಕ ವ್ಯವಸ್ಥೆಯು ಬಹುತೇಕ ಬಸ್‌ಗಳಲ್ಲಿ ಇರುವುದಿಲ್ಲ. ಹೆಚ್ಚಿನ ಬಸ್‌ಗಳಲ್ಲಿ ಅವು ಖಾಲಿ ಇರುತ್ತವೆ ಇಲ್ಲವೇ ನಿಷ್ಕ್ರಿಯವಾಗಿರುತ್ತವೆ
- ಪ್ರಯಾಣಿಕ ವಾಹನಗಳಲ್ಲಿ ಸರಕು ಸರಂಜಾಮು ಸಾಗಣೆ ಮಾಡುವಂತಿಲ್ಲ. ಆದರೆ, ಬಹುತೇಕ ಬಸ್‌ಗಳಲ್ಲಿ ನಿಯಮಬಾಹಿರವಾಗಿ ಲಗೇಜ್ ಅನ್ನು ಸಾಗಿಸಲಾಗುತ್ತದೆ. ಅದರಲ್ಲೂ ತ್ವರಿತವಾಗಿ ಬೆಂಕಿ ಹತ್ತಿಕೊಳ್ಳುವಂಥ ಎಲೆಕ್ಟ್ರಾನಿಕ್ ಉಪಕರಣಗಳು, ಸಿಲಿಂಡರ್‌ಗಳು, ಪಟಾಕಿಗಳು ಮುಂತಾದ ವಸ್ತುಗಳನ್ನು ಸಾಗಣೆ ಮಾಡುವುದು ಎಗ್ಗಿಲ್ಲದೇ ನಡೆಯುತ್ತಿದೆ

ಏನು ಮಾಡಬೇಕು?

- ಬಸ್‌ಗಳನ್ನು ಉತ್ತಮ ಸ್ಥಿತಿಯಲ್ಲಿಡುವುದು; ಕಾಲದಿಂದ ಕಾಲಕ್ಕೆ ಅಗತ್ಯ ದುರಸ್ತಿ ಮಾಡಿಸುವುದು
- ರಾತ್ರಿ ಚಾಲನೆಗೆ, ದೂರ ಪ್ರಯಾಣಕ್ಕೆ ಅನುಭವಿಗಳಾದ ಇಬ್ಬರು ಚಾಲಕರನ್ನು ನೇಮಿಸುವುದು
- ಅಗ್ನಿಶಾಮಕ ವ್ಯವಸ್ಥೆ ಮತ್ತಿತರ ಸುರಕ್ಷತಾ ಕ್ರಮಗಳನ್ನು ಚಾಚೂತಪ್ಪದೇ ಅಳವಡಿಸಿಕೊಳ್ಳುವುದು
- ಅಪಘಾತ ಸಂಭವಿಸಿದಾಗ ತುರ್ತು ಕ್ರಮಗಳ ಬಗ್ಗೆ ಬಸ್ ಸಿಬ್ಬಂದಿಗೆ ತರಬೇತಿ ನೀಡುವುದು
- ಬಸ್‌ಗಳಲ್ಲಿ ಬೆಂಕಿನಿರೋಧಕ ಸೀಟುಗಳು, ಕರ್ಟನ್‌ಗಳು ಮುಂತಾದವನ್ನು ಬಳಸುವುದು
- ಎಲೆಕ್ಟ್ರಿಕ್ ಮತ್ತು ಇಂಧನ ವ್ಯವಸ್ಥೆಯನ್ನು ಆಗಿಂದಾಗ್ಗೆ ಪರೀಕ್ಷಿಸುತ್ತಿರಬೇಕು
- ಅಪಘಾತದ ಸುದ್ದಿ ಕ್ಷಿಪ್ರ ರವಾನೆಗೆ ಜಿಪಿಎಸ್ ವ್ಯವಸ್ಥೆ ಅಳವಡಿಸಿಕೊಳ್ಳುವುದು

ಸ್ಲೀಪರ್ ಬಸ್‌ಗಳಲ್ಲೇ ಜಾಸ್ತಿ

ಈವರೆಗೆ ವರದಿಯಾದ ಅಗ್ನಿ ದುರಂತದ ಹೆಚ್ಚಿನ ಪ್ರಕರಣಗಳಲ್ಲಿ ಪ್ರಯಾಣಿಕರ ಪ್ರಾಣಕ್ಕೆ ಎರವಾಗಿದ್ದು ಸ್ಲೀಪರ್ ಬಸ್‌ಗಳೇ. ಈ ತಿಂಗಳಲ್ಲಿ ನಡೆದಿರುವ ನಾಲ್ಕು ದುರಂತಗಳೇ (ಕರ್ನೂಲ್, ರಾಜಸ್ಥಾನದಲ್ಲಿ ಎರಡು ಮತ್ತು ಮಧ್ಯಪ್ರದೇಶದಲ್ಲಿ ಒಂದು (ಅದೃಷ್ಟವಶಾತ್ ಇಲ್ಲಿ ಜೀವ ಹಾನಿಯಾಗಿಲ್ಲ) ಅದಕ್ಕೆ ಇತ್ತೀಚಿನ ನಿದರ್ಶನಗಳು. ಈ ಕಾರಣಕ್ಕೆ ಸ್ಲೀಪರ್ ಬಸ್‌ಗಳನ್ನು ಸಂಚರಿಸುವ ಶವಪೆಟ್ಟಿಗೆ ಎಂದು ಕರೆಯುವುದುಂಟು. ಭಾರತ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ಮತ್ತು ಬಡ ರಾಷ್ಟ್ರಗಳಲ್ಲಿ ಇಂತಹ ಬಸ್‌ಗಳ ಸಂಖ್ಯೆ ಹೆಚ್ಚು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸ್ಲೀಪರ್ ಬಸ್‌ಗಳ ಕಾರ್ಯಾಚರಣೆ ಹೆಚ್ಚಿಲ್ಲ.

ನಮ್ಮ ದೇಶದಲ್ಲಿ ಮೂರು ವರ್ಷಗಳಲ್ಲಿ ಸಂಭವಿಸಿದ ಪ್ರಮುಖ ಎಂಟು ಬಸ್‌ಗಳ ಅಗ್ನಿ ದುರಂತಗಳಲ್ಲಿ 100ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಬಹುತೇಕ ದುರ್ಘಟನೆಗಳು ಬೆಳಗಿನ ಜಾವದಲ್ಲಿ ನಡೆದಿವೆ. ಸ್ಲೀಪರ್ ಬಸ್‌ಗಳ ವಿನ್ಯಾಸ ಮತ್ತು ಸುರಕ್ಷತಾ ಕ್ರಮಗಳ ಕೊರತೆಯು ಅಗ್ನಿ ಆಕಸ್ಮಿಕ ಸಂಭವಿಸಿದಾಗ ಹೆಚ್ಚು ಜೀವ ಹಾನಿಗೆ ಕಾರಣವಾಗುತ್ತಿದೆ.

ಬಸ್‌ನ ಮಧ್ಯೆ ಜನರ ಓಡಾಟಕ್ಕೆ ಜಾಗ ಕಡಿಮೆ ಇರುವುದು, ತ್ವರಿತವಾಗಿ ಬೆಂಕಿ ಹತ್ತಿಕೊಳ್ಳುವ ಮತ್ತು ಬಹುಬೇಗ ಹರಡುವುದಕ್ಕೆ ಅವಕಾಶ ನೀಡುವ ವಸ್ತುಗಳನ್ನು ಒಳಾಂಗಣ ವಿನ್ಯಾಸಕ್ಕೆ ಬಳಸುವುದು, ತುರ್ತು ಸಂದರ್ಭದಲ್ಲಿ ಹೊರ ಹೋಗಲು ಸಮರ್ಪಕ ವ್ಯವಸ್ಥೆ ಇಲ್ಲದಿರುವುದು, ತುರ್ತು ಕಿಟಕಿಗಳ ಕೊರತೆ, ಅಗ್ನಿಶಾಮಕ ಸಲಕರಣೆಗಳು ಇಲ್ಲದಿರುವುದು, ಸಿಬ್ಬಂದಿಗೆ ತರಬೇತಿ ಇಲ್ಲದಿರುವುದು ಸೇರಿದಂತೆ ದುರಂತಕ್ಕೆ ಹಲವು ಕಾರಣಗಳನ್ನು ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ (IRF) ಪಟ್ಟಿ ಮಾಡಿದೆ.

ಶಾರ್ಟ್ ಸರ್ಕಿಟ್ ಆದ ಸಂದರ್ಭದಲ್ಲಿ ಬಾಗಿಲು ತನ್ನಿಂತಾನೆ ಜಾಮ್ ಆಗುವುದು ಕೂಡ ಹೆಚ್ಚು ಜೀವ ಹಾನಿ ಆಗಲು ಮತ್ತೊಂದು ಕಾರಣ. ಸ್ಲೀಪರ್ ಬಸ್‌ಗಳಲ್ಲಿ ಎರಡೂ ಬದಿಗಳಲ್ಲಿ ಕೆಳಗಡೆ ಮತ್ತು ಮೇಲ್ಗಡೆ ಆಸನಗಳಿರುತ್ತವೆ. ಮಲಗಲು ಅವಕಾಶ ಇರುವುದರಿಂದ ಪ್ರಯಾಣಿಕರು ಗಾಢ ನಿದ್ರೆಗೆ ಜಾರುತ್ತಾರೆ. ಅಗ್ನಿ ಅವಘಡ ಸಂಭವಿಸಿದಾಗ ನಿದ್ದೆಯಲ್ಲಿರುವವರಿಗೆ ಇದರ ಅರಿವೇ ಇರುವುದಿಲ್ಲ. ಒಂದು ವೇಳೆ ಗಮನಕ್ಕೆ ಬಂದರೂ, ಎರಡೂ ಬದಿಯ ಮಧ್ಯದಲ್ಲಿ ಕಿರಿದಾದ ಜಾಗ ಇರುವುದರಿಂದ ಪ್ರಯಾಣಿಕರಿಗೆ ಬೇಗ ಇಳಿಯುವುದಕ್ಕೆ ಆಗುವುದಿಲ್ಲ. ಕಿಟಕಿಗಳೂ ಕಿರಿದಾಗಿರುತ್ತವೆ. ಅದರಿಂದ ಹೊರಗಡೆ ಹಾರುವುದೂ ಸುಲಭವಿಲ್ಲ. ಇವೆಲ್ಲವೂ ಪ್ರಾಣ ಹಾನಿಯನ್ನು ಹೆಚ್ಚು ಮಾಡುತ್ತವೆ.

ಭವಿಷ್ಯದಲ್ಲಿ ಇಂತಹ ದುರಂತಗಳನ್ನು ತಪ್ಪಿಸಬೇಕಾದರೆ ಬಸ್‌ನ ವಿನ್ಯಾಸದಲ್ಲಿ ಬದಲಾವಣೆ ಮಾಡಬೇಕು. ಬೆಂಕಿ ನಂದಿಸುವ ಸಲಕರಣೆಗಳ ಅಳವಡಿಕೆ, ತುರ್ತು ಬಾಗಿಲುಗಳ ವ್ಯವಸ್ಥೆ, ಕಡ್ಡಾಯ ಸ್ಪೀಡ್ ಗವರ್ನರ್ ಅಳವಡಿಕೆ ಮತ್ತು ಚಾಲಕರಿಗೆ ಹೆಚ್ಚು ಒತ್ತಡವಾಗದಂತೆ ಕರ್ತವ್ಯದ ಅವಧಿ ನಿಗದಿಯಂತಹ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಐಆರ್‌ಎಫ್ ಅಭಿಪ್ರಾಯ ಪಟ್ಟಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಚ್ಚು

ಅಮೆರಿಕ, ಯುರೋಪ್‌ನಲ್ಲಿ ಬಸ್ ಪ್ರಯಾಣವು ಅತ್ಯಂತ ಸುರಕ್ಷಿತ ಎಂದು ಹೆಸರಾಗಿದೆ. ಆದರೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಸ್ ಪ್ರಯಾಣವು ಅಪಘಾತಗಳಿಂದ ಕುಖ್ಯಾತಿ ಗಳಿಸಿದೆ. 2023ರ ಅಧ್ಯಯನವೊಂದರ ಪ್ರಕಾರ, ನೇಪಾಳ, ಜಿಂಬಾಬ್ವೆ, ಥಾಯ್ಲೆಂಡ್, ತಾಂಜೇನಿಯಾ ಮತ್ತು ಭಾರತದಲ್ಲಿ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿದ್ದು, ಚಾಲಕರ ನಿರ್ಲಕ್ಷ್ಯವೇ ಅದಕ್ಕೆ ಮುಖ್ಯ ಕಾರಣವಾಗಿದೆ. ಬಸ್ ಅಪಘಾತಗಳಿಗೆ ಪಾಕಿಸ್ತಾನವು ಕುಖ್ಯಾತಿ ಗಳಿಸಿದೆ ಎಂದೂ ವರದಿ ಹೇಳಿದೆ.

ಸುರಕ್ಷತಾ ಆಡಿಟ್‌ಗೆ ಸೂಚನೆ

ಕರ್ನೂಲ್ ಬಸ್ ದುರಂತದ ಬೆನ್ನಲ್ಲೇ, ರಾಜ್ಯದ ಎಲ್ಲಾ ಬಸ್ಸುಗಳಲ್ಲಿರುವ ಸುರಕ್ಷತಾ ವ್ಯವಸ್ಥೆಗಳನ್ನು ಪರಿಶೀಲನೆ ನಡೆಸುವಂತೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಸಾರಿಗೆ ಇಲಾಖೆಯ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.



ರಾಮಲಿಂಗಾ ರೆಡ್ಡಿ

ಖಾಸಗಿ ಬಸ್ಸುಗಳಲ್ಲಿ ಯಾವುದೇ ವಾಣಿಜ್ಯ ಸರಕು/ ಲಗೇಜ್ ಸಾಗಿಸುವ ಸಂದರ್ಭದಲ್ಲಿ ತ್ವರಿತವಾಗಿ ಉರಿಯುವ ಅಥವಾ ಇತರೆ ಸ್ಫೋಟಕ ವಸ್ತುಗಳನ್ನು ಸಾಗಿಸದಂತೆ ನಿಗಾವಹಿಸಬೇಕು. ಎಲ್ಲಾ ಹವಾ ನಿಯಂತ್ರಿತ (ಎಸಿ) ಬಸ್‌ಗಳಲ್ಲಿ ತುರ್ತು ಸಂದರ್ಭಗಳಲ್ಲಿ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು ಕಡ್ಡಾಯವಾಗಿರಬೇಕು. ಲಗೇಜ್ ಸಾಗಿಸುವ ಜಾಗದಲ್ಲಿ ಯಾವುದೇ ವ್ಯಕ್ತಿ ಮಲಗಲು ಅವಕಾಶ ನೀಡಬಾರದು. ಬಸ್ಸುಗಳ ನವೀಕರಣ ಪರಿಶೀಲನೆ ನಡೆಸಬೇಕು ಮತ್ತು ಅನಧಿಕೃತವಾಗಿ ವಾಹನಗಳನ್ನು ಮಾರ್ಪಾಡು ಮಾಡಿರುವುದು ಕಂಡು ಬಂದರೆ ಕೂಡಲೇ ಪರವಾನಗಿಯನ್ನು ರದ್ದುಗೊಳಿಸಬೇಕು ಎಂದು ಅವರು ಹೇಳಿದ್ದಾರೆ.

ಯಾವುದೇ ನ್ಯೂನತೆ ಕಂಡು ಬಂದರೂ ನಿರ್ದಾಕ್ಷಿಣ್ಯವಾಗಿ, ಕಠಿಣ ಕ್ರಮಕೈಗೊಳ್ಳಬೇಕು ಎಂದು ತಾಕೀತು ಮಾಡಿರುವ ಸಚಿವರು, ಬಸ್ ಗಳಲ್ಲಿನ ಸುರಕ್ಷತಾ ಆಡಿಟ್ ಪರಿಶೀಲನೆಗೆ ತಂಡಗಳನ್ನು ರಚಿಸುವಂತೆ ಸೂಚಿಸಿದ್ದಾರೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಹಾಗೂ ಇತರೆ ಸಾರಿಗೆ ನಿಯಮಗಳಿಗೂ ಪತ್ರ ಬರೆದಿರುವ ರಾಮಲಿಂಗಾ ರೆಡ್ಡಿ ಅವರು ನಿಗಮಗಳ ಎಲ್ಲ ಬಸ್‌ಗಳ ಸುರಕ್ಷತಾ ಆಡಿಟ್ ನಡೆಸುವಂತೆ ಹೇಳಿದ್ದಾರೆ.



ಬಸ್‌ಗಳಲ್ಲಿ ‘ಅಗ್ನಿ’ ನಿಯಂತ್ರಣಕ್ಕೆ ಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಅಗ್ನಿ ಅವಘಡ ಸಂಭವಿಸಿದಾಗ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದ್ದಾರೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸೂಚನೆ ನೀಡಿದ ಬೆನ್ನಲ್ಲೇ, ವ್ಯವಸ್ಥಾಪಕ ನಿರ್ದೇಶಕರು ಸುರಕ್ಷತೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ಅವುಗಳ ಪಾಲನೆ ಮಾಡುವಂತೆ ತಿಳಿಸಿದ್ದಾರೆ.

ನಿಗಮದ ಬಸ್‌ಗಳಲ್ಲಿ ಇರುವ ಅಗ್ನಿ ನಂದಿಸುವ ಸಾಧನಗಳನ್ನು ಬಳಸುವ ಬಗ್ಗೆ ಎಲ್ಲ ಸಿಬ್ಬಂದಿಗೆ ತರಬೇತಿ ನೀಡಬೇಕು. ಸುರಕ್ಷತಾ ಕ್ರಮಗಳ ಬಗ್ಗೆ ಎಲ್ಲ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕಾರ್ಯ ವ್ಯವಸ್ಥಾಪಕರು, ಮುಖ್ಯ ಯಾಂತ್ರಿಕ ಎಂಜಿನಿಯರ್‌ಗಳು, ಉಗ್ರಾಣ ಮತ್ತು ಖರೀದಿ ನಿಯಂತ್ರಕರು, ಮುಖ್ಯ ಸಂಚಾರ ವ್ಯವಸ್ಥಾಪಕರು, ಮುಖ್ಯ ಗಣಕ ವ್ಯವಸ್ಥಾಪಕರು, ವಿಭಾಗ ಉಸ್ತುವಾರಿಗಳು ನವೆಂಬರ್10ರ ಒಳಗೆ ಎಲ್ಲ ಸಿಬ್ಬಂದಿಗೆ ತರಬೇತಿ ನೀಡಬೇಕು ಎಂದು ಅವರು ಸೂಚಿಸಿದ್ದಾರೆ.

ಸೂಚನೆಗಳೇನು?

- ಎಲ್ಲಾ ಐಷಾರಾಮಿ ಬಸ್‌ಗಳಲ್ಲಿ ಐದು ಲೀಟರ್‌ನ ಎರಡು ಅಗ್ನಿ ನಂದಕ ಇರಲೇಬೇಕು. ಇತರ ಬಸ್‌ಗಳಲ್ಲಿ ಇರುವ ಅಗ್ನಿನಂದಕಗಳನ್ನು ಸುಸ್ಥಿತಿಯಲ್ಲಿಡಬೇಕು
- ಬೆಂಕಿ ಪತ್ತೆ ಮತ್ತು ನಂದಿಸುವ ವ್ಯವಸ್ಥೆ (ಎಫ್‌ಡಿಎಸ್‌ಎಸ್), ಬೆಂಕಿ ಎಚ್ಚರಿಕೆ ಮತ್ತು ರಕ್ಷಣಾ ವ್ಯವಸ್ಥೆ (ಎಫ್‌ಎಪಿಎಸ್) ಉಪಕರಣಗಳು ಸುಸ್ಥಿಯಲ್ಲಿರುವಂತೆ ನೋಡಿಕೊಳ್ಳಬೇಕು
- ಬಸ್‌ಗಳಲ್ಲಿರುವ ಎಲೆಕ್ಟ್ರಿಕ್ ವೈರ್‌ಗಳು ಸುಸ್ಥಿತಿಯಲ್ಲಿವೆಯೆ ಎಂದು ನಿತ್ಯವೂ ಪರಿಶೀಲಿಸಬೇಕು. ಉಜ್ಜುವಿಕೆಯಿಂದ ಬೆಂಕಿ ಉಂಟಾಗುವುದನ್ನು ತಡೆಯಲು ಬ್ಯಾಟರಿ ಕೇಬಲ್‌ಗೆ ಸ್ಲೀಚ್, ರಬ್ಬರ್ ಗ್ರೊಮೆಟ್ ಬುಷ್ ಅಳವಡಿಸಬೇಕು
- ಹವಾನಿಯಂತ್ರಿತ ಬಸ್‌ಗಳಲ್ಲಿ ತುರ್ತು ಸಂದರ್ಭದಲ್ಲಿ ಕಿಟಕಿ ಗಾಜು ಒಡೆದು ಹೊರಬರಲು ಅನುಕೂಲವಾಗುವಂತೆ ಸುತ್ತಿಗೆ (ಹ್ಯಾಮರ್) ಇರಬೇಕು
- ರಾತ್ರಿ ವೇಳೆ ಚಾಲನಾ ಸಿಬ್ಬಂದಿ ಸೊಳ್ಳೆ ಕಾಯಿಲ್ ಹಚ್ಚಬಾರದು
- ಬಾಗಿಲುಗಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕು
- ಬೆಂಕಿ ಆಕರ್ಷಿಸುವ ವಸ್ತುಗಳನ್ನು ಒಯ್ಯಲು ಅವಕಾಶವಿಲ್ಲ ಎಂದು ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಲು ಆಗಾಗ ವಿಡಿಯೊ, ಆಡಿಯೊ ಪ್ರಸ್ತುತಪಡಿಸಬೇಕು

ಬಸ್‌ಗಳ ಸಂಖ್ಯೆ — ಒಟ್ಟು 26,100

ಕೆಎಸ್‌ಆರ್‌ಟಿಸಿ	8,893
ಬಿಎಂಟಿಸಿ	6,897
ಎನ್‌ಡಬ್ಲ್ಯುಆರ್‌ಟಿಸಿ	5,322
ಕೆಕೆಆರ್‌ಟಿಸಿ	4,988

ಅವಘಡ ಉಂಟಾದಾಗ...

- ಚಾಲನಾ ಸಿಬ್ಬಂದಿ ಪ್ಯಾನಿಕ್ ಬಟನ್ ಒತ್ತಿ ಪ್ರಯಾಣಿಕರನ್ನು ಎಚ್ಚರಿಸಬೇಕು. ಇಳಿಯಲು ಸೂಚಿಸಬೇಕು
- ಅಗ್ನಿನಂದಕ ಬಳಸಿ ಬೆಂಕಿ ನಂದಿಸಲು ಪ್ರಯತ್ನಿಸಬೇಕು.
- 101ಕ್ಕೆ ಕರೆ ಮಾಡಿ ನಿಖರ ಮಾಹಿತಿ ನೀಡಬೇಕು
- ಕೆಎಸ್‌ಆರ್‌ಟಿಸಿ ನಿಯಂತ್ರಣ ಕೊಠಡಿಯ ಸಂಖ್ಯೆ 7760990100 ಹಾಗೂ ಮೇಲಧಿಕಾರಿಗಳಿಗೆ ಮಾಹಿತಿ ನೀಡಬೇಕು
- ಸುತ್ತಿಗೆಯಿಂದ ಕಿಟಕಿಯ ಗಾಜುಗಳನ್ನು ಒಡೆದು ಪ್ರಯಾಣಿಕರು ಹೊರಬರುವಂತೆ ಮಾಡಬೇಕು
- ಗಾಯಗೊಂಡವರನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಕಳುಹಿಸಬೇಕು.
- ಘಟಕದ ಅಧಿಕಾರಿಗಳು ಪ್ರಯಾಣಿಕರ ವಿವರ ಸಂಗ್ರಹಿಸಿ ಪರ್ಯಾಯ ವ್ಯವಸ್ಥೆ ಮಾಡಬೇಕು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


✗ ಭಾರತೀಯ ಸೇನೆಯು ಆರ್‌ಎಸ್‌ಎಸ್‌ಗೆ ಸೇರಿದೆ. ಸೇನೆಯು ಹಿಂದೂ ರಾಷ್ಟ್ರದ ಸಶಸ್ತ್ರ ಪಡೆಯಾಗಿದ್ದು, ಮುಸ್ಲಿಂ, ಕ್ರೈಸ್ತರು ಅಥವಾ ದಲಿತರಂತಹ ಇತರ ಸಮುದಾಯಗಳಿಗೆ ಸೇರಿದ್ದಲ್ಲ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಸಾರ್ವಜನಿಕ ಸಮಾರಂಭವೊಂದರಲ್ಲಿ ಹೇಳಿದ್ದಾರೆ ಎನ್ನಲಾದ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ‘ಅಮಿತ್ ಶಾ ಅವರು ಬಹಿರಂಗವಾಗಿ ಲೆ.ಜ. ವಿನಯ್ ಫಾಯ್ ಅವರಿಗೆ ಎದಿರೇಟು ನೀಡಿದ್ದು, ಭಾರತೀಯ ಸೇನೆಯನ್ನು ಕೇಸರೀಕರಣಗೊಳಿಸುವುದಕ್ಕೆ ಬಹಿರಂಗ ಕರೆ ನೀಡಿದ್ದಾರೆ. ಸೇನಾ ಪಡೆಯನ್ನು ರಾಜಕೀಯಕರಣಗೊಳಿಸುವುದಕ್ಕೆ ವಿರೋಧ ವ್ಯಕ್ತಪಡಿಸುವವರನ್ನು ಪಾಕಿಸ್ತಾನಕ್ಕೆ ಕಳುಹಿಸಬೇಕು. ಭಾರತೀಯ ಸೇನೆಯು ‘ಹಿಂದುತ್ವ ಸೇನೆ’ಯಾಗಿದೆ ಮತ್ತು ಹಾಗೆಯೇ ಉಳಿಯಲಿದೆ’ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.

✓ ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ‘ಎಕ್ಸ್’ನಲ್ಲಿ ಎಎನ್‌ಐ ಸುದ್ದಿ ಸಂಸ್ಥೆ ಮಾಡಿದ್ದ ವಿಡಿಯೊ ಪೋಸ್ಟ್ ಸಿಕ್ಕಿತು. ಅದು ಇದೇ 25ರಂದು ಬಿಹಾರದ ಮುಂಗೇರ್‌ನಲ್ಲಿ ಅಮಿತ್ ಶಾ ಅವರು ಮಾಡಿದ ಭಾಷಣದ ವಿಡಿಯೊ. ಅವರ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿಯೂ ಅದು ಪ್ರಸಾರವಾಗಿತ್ತು. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ತುಣುಕಿಗೂ ಈ ವಿಡಿಯೊಗೂ ಸಾಮ್ಯತೆ ಇತ್ತು. ಆದರೆ, ಶಾ ಅವರು ತಮ್ಮ ಭಾಷಣದಲ್ಲಿ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿರುವ ಸಂಗತಿಗಳನ್ನು ಎಲ್ಲೂ ಪ್ರಸ್ತಾಪಿಸಿಲ್ಲ. ಅನುಮಾನ ಬಂದು, ಎಐ ಪತ್ತೆ ಟೂಲ್ ಆಗಿರುವ ಡೀಪ್‌ಫೇಕ್ ಒ-ಮೀಟರ್ ಬಳಸಿ ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಿದಾಗ, ವಿಡಿಯೊವನ್ನು ಎಐ ತಂತ್ರಜ್ಞಾನದ ಮೂಲಕ ತಿರುಚಿರುವುದು ದೃಢಪಟ್ಟಿತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಇದಕ್ಕೂ ಮೊದಲು, ‘ಸೇನೆಯನ್ನು ಕೇಸರೀಕರಣಗೊಳಿಸಲಾಗುತ್ತಿದೆ’ ಎಂದು ಲೆ.ಜ.ವಿನಯ್ ಫಾಯ್ ಅವರು, ಹೇಳಿದ್ದಾರೆ ಎನ್ನಲಾದ ಡೀಪ್‌ಫೇಕ್ ವಿಡಿಯೊ ಕೂಡ ಹರಿದಾಡಿತ್ತು.

ಮುಳ್ಳು ಮತ್ತು ಪ್ರೀತಿ

ನುಡಿ ಬೆಳಗು



ಪಿ.ಚಂದ್ರಿಕಾ

ಒಮ್ಮೆ ಮಹಾವೀರ ಕಿಷ್ಕಿಂಧೆಯಂತೆ ಇಕ್ಕಿರಿದು ಮುಳ್ಳುಗಿಡಗಳಿಂದ ಕೂಡಿದ್ದ ಕಾಡಿನ ಹಾದಿಯಲ್ಲಿ ಹೋಗುತ್ತಿದ್ದ. ಮಹಾವೀರನ ಶಿಷ್ಯರು ಮುಂದೆ ಹೋಗುತ್ತಿದ್ದವರು ಇನ್ನು ಮುಂದೆ ಹೋಗಲಾರೆವು ಎಂದು ನಿಂತುಬಿಟ್ಟರು. ಅವರ ಮೈ ಮುಳ್ಳುಗಳ ತರಚು ಗಾಯದಿಂದ ತುಂಬಿತ್ತು. ರಕ್ತವೊಸರುವ ಗಾಯಗಳನ್ನು ಅಲ್ಲೇ ಇದ್ದ ಎಲೆಗಳನ್ನು ಹರಿದು ಒರೆಸಿಕೊಳ್ಳುವಾಗ ಅದನ್ನು ಕಾಣದಂತೆ ಮಹಾವೀರ ಮುಂದಕ್ಕೆ ನಡೆದ. ಅವನನ್ನು ಶಿಷ್ಯರು ತಡೆದು ನಿಮ್ಮ ಮೈಗೂ ಹೀಗೇ ಗಾಯವಾಗಬಹುದು ನಿಲ್ಲಿ, ಮುಳ್ಳುಗಳನ್ನು ಸವರಿ ನಂತರ ಮುಂದಕ್ಕೆ ಹೋಗೋಣ ಎಂದರು. ಮಹಾವೀರ ಶಿಷ್ಯರ ಮಾತುಗಳಿಗೆ ನಸುನಕ್ಕು ಸುಮ್ಮನೆ ಅವನ ಪಾಡಿಗೆ ಅವನು ಮುಂದೆ ಹೊರಟ. ಅವನು ನಡೆಯುವ ಹಾದಿಯಲ್ಲಿ ಮುಳ್ಳುಗಳು ಹಿಂದಕ್ಕೆ ತಿರುಗಲಾರಂಭಿಸಿದವು. ಇದೇನು ಪವಾಡ ಎನ್ನುವಂತೆ ಅಚ್ಚರಿಯಿಂದ ನೋಡುತ್ತಾ ನಿಂತರು ಶಿಷ್ಯರು. ಮಹಾವೀರ ಮುಂದೆ ಹೋದಂತೆ ಹಿಂದಿನಿಂದ ಮುಳ್ಳುಗಳು ಯಥಾಸ್ಥಿತಿಗೆ ಬರುತ್ತಿದ್ದವು. ಮಹಾವೀರನ ಮೈಮೇಲೆ ಒಂದೇ ಒಂದು ಸಣ್ಣ ತರಚು ಗಾಯವೂ ಆಗಲಿಲ್ಲ. ಇದನ್ನು ನೋಡಿ ಇದೊಂದು ಪವಾಡವೇ ಸರಿ ಎಂದು ಶಿಷ್ಯರು ನಿರ್ಧರಿಸಿದರು. ತಾವು ಕಂಡು ಕೇಳರಿಯದ ಘಟನೆಗೆ ಶಿಷ್ಯರು ಸಾಕ್ಷಿಯಾಗಿದ್ದರು.

ಅಂದಿನ ಪ್ರಯಾಣವನ್ನು ಮುಗಿಸಿ ಒಂದೆಡೆ ಉಳಿಯುವ ನಿರ್ಧಾರವನ್ನು ಮಾಡಲಾಯಿತು. ಸಂಜೆ ಶಿಷ್ಯನೊಬ್ಬ ಕೇಳಿಯೇ ಬಿಟ್ಟ, ‘ಇದ್ಯಾವ ಪವಾಡ ನೀವು ನಡೆಸಿದ್ದು?’ ಮಹಾವೀರ ನಕ್ಕು, ‘ಪವಾಡ ಯಾವುದೂ ನಡೆಯಲಿಲ್ಲವಲ್ಲ’ ಎಂದ. ಕಣ್ಣಾರೆ ಕಂಡದ್ದನ್ನು ಹಾಗೇ ಬಿಡಲು ಯಾರು ಒಪ್ಪುತ್ತಾರೆ? ಮತ್ತೆ ಶಿಷ್ಯ ಪ್ರಶ್ನಿಸಿದ, ‘ಸುಳ್ಳು ಹೇಳಬೇಡಿ. ನಮಗೆ ಚುಚ್ಚಿದ ಮುಳ್ಳು ನಿನ್ನನ್ನು ಯಾಕೆ ಚುಚ್ಚಲಿಲ್ಲ?’ ಎಂದು. ಮಹಾವೀರ ಗಂಭೀರನಾದ. ‘ಅಲ್ಲಿ ಯಾವ ಪವಾಡವೂ ನಡೆಯಲಿಲ್ಲ; ಅಲ್ಲಿ ಸಂಭವಿಸಿದ್ದು ಪ್ರೀತಿ ಮಾತ್ರ’ ಎಂದ. ಶಿಷ್ಯನಿಗೆ ಇದ್ಯಾಕೋ ಅತಿರೇಕ ಎನ್ನಿಸಿ ಮುಳ್ಳಿಗೆ ಒಬ್ಬರಿಗೆ ಚುಚ್ಚಬೇಕು ಇನ್ನೊಬ್ಬರನ್ನು ಪ್ರೀತಿಸಬೇಕು ಎಂದು ಗೊತ್ತಾಗುತ್ತದೆಯಲ್ಲವೆ ಎಂದ ವ್ಯಂಗ್ಯದಿಂದ.

ಅತ್ಯಂತ ಕರುಣೆಯಿಂದ ‘ಹೌದು ಗೊತ್ತಾಗುತ್ತದೆ. ಪ್ರಾಣಿ-ಪಕ್ಷಿ, ಗಿಡ -ಮರ ಎಲ್ಲಕ್ಕೂ ಗೊತ್ತಾಗುವ ಒಂದೇ ಒಂದು ಭಾಷೆ ಎಂದರೆ, ಅದು ಪ್ರೀತಿ. ಸುಮ್ಮನೆ ಒಂದು ನಾಯಿ ಮರಿಯ ಮೇಲೆ ಕೈ ಆಡಿಸಿ. ಅದು ನಿಮ್ಮನ್ನು ಹಿಂಬಾಲಿಸುತ್ತದೆ. ಹಸುವಿನ ಮೇಲೆ ಕೈ ಆಡಿಸಿ, ನಿಮ್ಮ ನೆತ್ತಿಯನ್ನು ನೆಕ್ಕುತ್ತದೆ. ಬಿರುಬಿಸಿಲಲ್ಲಿ ಗಿಡ ನೆರಳು ಕೊಡುತ್ತದೆ. ಇದರಲ್ಲಿ ಅಚ್ಚರಿಯೇನಿದೆ’ ಎಂದ. ಅವನ ಮಾತಿಗೆ ಶಿಷ್ಯ, ‘ಹಾಗಾದರೆ ನಾವು ಮಾಡಿದ್ದೇನು, ಕೇಡನ್ನು ಬಯಸಿದ್ದೆವೆ’ ಎಂದ. ಆಗ ಮಹಾವೀರ, ‘ಒಮ್ಮೆ ಪ್ರಯತ್ನಿಸು ನಿನ್ನ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಲು, ನೀನು ಒಳ್ಳೆಯವನಾಗಲು ಯತ್ನಿಸಿದಷ್ಟೂ ಜಗತ್ತು ನಿನಗೆ ಒಳಿತನ್ನು ಮಾಡುವ ಎಲ್ಲವನ್ನೂ ತಂದು ಎದುರು ನಿಲ್ಲಿಸುತ್ತದೆ. ದುರಾಸೆ-ದ್ವೇಷ, ಮದ- ಮತ್ಸರಗಳು ನಮ್ಮನ್ನು ಹಿಂಬಾಲಿಸುತ್ತಲೇ ಇದ್ದರೆ ಪ್ರತೀಕಾರದ ಬೆಂಕಿಯಲ್ಲಿ ನಾವು ಉರಿದು ಹೋಗುತ್ತೇವೆ. ನಾನು ನಮ್ಮ ಸುತ್ತಾ ಏನನ್ನು ಇರಲು ಬಯಸುತ್ತೇವೋ ಅದೇ ನಮಗೆ ಹಿಂದಿರುಗಿ ಬರುತ್ತದೆ. ಇದನ್ನು ಬಿಟ್ಟರೆ ಬೇರೆ ಪವಾಡ ಏನಿದೆ’ ಎನ್ನುತ್ತಾನೆ.

ಮಹಾವೀರನಿಗೆ ಮುಳ್ಳು ತಳಕೆಳಗಾಗಿ ಚುಚ್ಚಲಿಲ್ಲವೋ ಚುಚ್ಚಿತೋ ತಿಳಿಯದು. ಆದರೆ ಅವನ ಪ್ರೀತಿಯ ಸಂದೇಶ ಅರ್ಥ ಮಾಡಿಕೊಂಡರೆ ತಾಪಗಳಿಲ್ಲದ ಶುದ್ಧ ಜೀವನ ನಮ್ಮದಾಗುತ್ತದೆ.

ಪದಬಂಧ 6208


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇಹಲೋಕಕ್ಕೆ ಸಂಬಂಧಿಸಿದ್ದು (3)
3.ನೊಣ ಇಲ್ಲಿ ಬಂದಿದೆಯಲ್ಲಾ! (3)
5.ಇದು ಸೂರ್ಯನ ರಶ್ಮಿ (5)
6.ತಡಸಲನ್ನು ಸೇರುವಾಗಲೇ ನಿಧಾನ! (2)
8.ಶಹನಾಯಿಯ ಹತ್ತಿರವಿರುವ ಶುನಕ (2)
9.ನಾಗರಿಕನ ಹತ್ತಿರ ಸ್ತ್ರೀ ಬಂದಿದ್ದಾಳಲ್ಲಾ! (2)
10.ಕಲಾವಿದನಿಗಾಗಿ ತೆರೆದ ಬಾಗಿಲು (2)
14.ಮನುಷ್ಯನನ್ನು ತಿನ್ನುವ ಪ್ರಾಣಿ (5)
15.ಕಮಂಡಲು ಹಿಡಿದವನು ನೋಡುತ್ತಿರುವ ಸಮುದ್ರ (3)
16.ಸಂಪೂರ್ಣ ನಾಶವಿದು (3)

ಮೇಲಿಂದ ಕೆಳಕ್ಕೆ

1.ಇಂದ್ರನ ಆನೆಯಿದು (4)
2.ತೆಂಗಿನ ಚಿಪ್ಪು ಇಲ್ಲದೇ (3)
3.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4.ಇನ್ನೂ ಬಲಿಯದ ಕಾಯಿ (4)
7.ಅಗಲ ಬಾಯುಳ್ಳ ಲೋಹದ ಪಾತ್ರೆ (3)
8.ದೇವರನ್ನು ನಂಬದವನು (3)
9.ನಡುವೆ ಗರಿ ಹಿಡಿದಿರುವ ಸುಸಂಸ್ಕೃತ (4)
11.ಹತ್ತನೆಯ ಒಂದು ಭಾಗ (4)
12.ಪ್ರವಾಹವನ್ನು ಹೀಗೂ ಹೇಳುವರು (3)
13.ಈತ ಕೆಟ್ಟ ಕವಿ (3)



6207ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭ್ಯಂಜನ 3.ಮಹಾಕಾವ್ಯ 5.ಖಚರ 7.ತನ್ಮಯ 8.ತವರ 10.ವಿಚಾರವಂತ 11.ಮರಾಲ 13.ಮಥಿತ 14.ಭವಿಷ್ಯ 16.ರೈತಶಕ್ತಿ 17.ಶಿರೋನಾಮೆ

ಮೇಲಿಂದ ಕೆಳಕ್ಕೆ:
1.ಅಭ್ಯಾಗತ 2.ನಖ 3.ಮರ 4.ವ್ಯತ್ಯಯ 6.ಚನ್ನವೀರಕಣವಿ 7.ತರತಮ 9.ರವಿಸುತ 12.ಲವಾಜಮೆ 13.ಮಧುರೈ 14.ಭಕ್ತಿ 15.ಷ್ಯರಿ

ಸುಡೊಕು 6592

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		9			7	1		4
				3				
5		7	4		6	2		3
					5			1
	5	1		8			2	7
3	2		9					
		2		1			9	
9			7		8		1	2
	8	3		2		4		

6591 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಅಕ್ಟೋಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಅಷ್ಟಮಿ ಗಂ. 10-07 ನಕ್ಷತ್ರ: ಶ್ರವಣ ಗಂ 18-34 ಯೋಗ: ಶೂಲ ಗಂ 7-21 ಕರಣ: ಬವ ಗಂ. 10-07 ತುಲಾ ಮಾಸದ 13 ನೇ ದಿನ. ಮಳೆ ನಕ್ಷತ್ರ : ಸ್ವಾತಿ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-28 ಸೂರ್ಯಾಸ್ತ : 06-01 ಮುಸ್ಲಿಂ ದಿನಾಂಕ : 07 ಜುಮಾದುಲ್ಲಾವಲ್ ಅದೃಷ್ಟ ಸಂಖ್ಯೆ : 3, 8

ಮೇಷ: ಮನೆಯಲ್ಲಿ ಶಾಂತ ವಾತಾವರಣವಿರಲಿದ್ದು, ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಸಿಗುವುದು. ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿ, ಕೆಲಸಗಳನ್ನು ಮುಂದುವರಿಸುವಿರಿ.

ವೃಷಭ: ಎಣ್ಣೆ, ಬೇಳೆಕಾಳು ವ್ಯಾಪಾರ ಉತ್ತಮವಾಗಿರುವುದು. ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ತೀರ್ಮಾನ ತೆಗೆದುಕೊಂಡವರು ವಾತಾವರಣವನ್ನು ಉದ್ದೇಶಿಸಿ ಇನ್ನೊಮ್ಮೆ ಯೋಚಿಸಿ, ತೀರ್ಮಾನಿಸಿ.

ಮಿಥುನ: ಹೊಸ ಯೋಜನೆ ರೂಪಿಸಲು ಒಳ್ಳೆಯ ಸಮಯ, ಸಹೋದರರಿಂದ ಉತ್ತಮ ಸಹಕಾರ ಸಿಗುತ್ತದೆ. ವಿವಾಹ ಅಪೇಕ್ಷಿಗಳಿಗೆ ಶುಭವಿರುತ್ತದೆ. ದೂರ ಪ್ರಯಾಣ ಮಾಡಬೇಕಾದ ಸಂದರ್ಭ ಬರಲಿದೆ.

ಕರ್ಕಾಟಕ: ವ್ಯವಸ್ಥಿತವಾಗಿ ನಿಮ್ಮ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆಗಳು ಪೂರ್ಣಗೊಳ್ಳಲಿವೆ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತವೆ.

ಸಿಂಹ: ಆದಾಯ ವೆಚ್ಚಗಳನ್ನು ಸರಿದೂಗಿಸಿಕೊಳ್ಳುವಿರಿ. ನಿಮ್ಮ ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ. ಅಧಿಕಾರ, ಅನುಭವದಿಂದ ನಿಮ್ಮ ಆತ್ಮಾಭಿಮಾನ ವೃದ್ಧಿಯಾಗಲಿದೆ.

ಕನ್ಯಾ: ಉದ್ಯೋಗದ ವಿಷಯದಲ್ಲಿನ ಅನಿಶ್ಚಿತತೆಯ ಭಯ ದೂರವಾಗುವುದು. ಹಣಕಾಸಿನ ಸಮಸ್ಯೆಗಳು ಹಂತ ಹಂತವಾಗಿ ಪರಿಹಾರವಾಗಲಿದೆ. ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಅಪರಾಹ್ನ ಹೆಚ್ಚಿನ ಕೆಲಸವಿರಲಿದೆ.

ತುಲಾ: ಮಾಹಿತಿ ತಂತ್ರಜ್ಞಾನದ ವಲಯದವರಿಗೆ ಹೆಚ್ಚಿನ ಆದಾಯ ಇದ್ದರೂ ಕೆಲಸದಲ್ಲಿ ಅಸಮಾಧಾನ ಉಂಟಾಗಬಹುದು. ಸಿದ್ಧ ಉಡುಪು ತಯಾರಕರಿಗೆ ಹೆಚ್ಚಿನ ಬೇಡಿಕೆ ದೊರೆತು ಸಂತೋಷಕರ ವಾತಾವರಣ ನಿಮ್ಮದಾಗಲಿದೆ.

ವೃಶ್ಚಿಕ: ಅತ್ಯಂತ ಬುದ್ಧಿವಂತರಾದ, ತಿಳಿವಳಿಕೆ ಹೊಂದಿದವರಾದ ನೀವು ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯ ಸಾಧಿಸುವಲ್ಲಿ ವಿಫಲರಾಗುವಿರಿ. ದಂತವೈದ್ಯರಿಗೆ ಅನುಕೂಲದ ದಿನ.


ಧನು: ಕೋರ್ಟ್ ಕಚೇರಿ ಕೆಲಸಗಳಲ್ಲಿ ಜಯ ಸಿಗುತ್ತದೆ. ಉದ್ಯೋಗದಲ್ಲಿ ಅಭಿವೃದ್ಧಿ ಹೊಂದುವಿರಿ. ಮನೆಯಲ್ಲಿ ಮಂಗಳಕಾರ್ಯಗಳು ನೆರವೇರುತ್ತವೆ. ಉದ್ಯೋಗಕ್ಕಾಗಿ ಹೊರ ದೇಶದ ಪ್ರಯಾಣದ ಅವಕಾಶಗಳು ಸಿಗಬಹುದು.

ಮಕರ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಬೆಂಕಿಯಿಂದ ಅನಾಹುತಗಳು ಸಂಭವಿಸುವ ಲಕ್ಷಣಗಳಿರುವುದರಿಂದ ಜಾಗೃತರಾಗಿರುವುದು ಒಳ್ಳೆಯದು.

ಕುಂಭ: ವರ್ತನೆಯಲ್ಲಿ ಸಮತೋಲನ ಹಾಗೂ ಸ್ಥಿರತೆ ಕಾಯ್ದುಕೊಳ್ಳುವುದು ಉತ್ತಮ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಕಂಡುಬರಲಿದೆ. ಯಾವುದೇ ರೀತಿಯಲ್ಲೂ ಆರೋಗ್ಯದ ಬಗ್ಗೆ ಉದಾಸೀನ ತೋರದಿರಿ.

ಮೀನ: ಆತ್ಮಗೌರವ, ರಕ್ಷಣೆ ದೃಷ್ಟಿಯಿಂದ ಸಂದರ್ಭಗಳೊಡನೆ ರಾಜಿಮಾಡಿಕೊಳ್ಳುವುದು ಸೂಕ್ತ ಎನಿಸಲಿದೆ. ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು. ರಾಜಕಾರಣಿಗಳಿಗೆ ಶುಭ ಸುದ್ದಿ ದೊರೆಯಲಿದೆ.

ಗುಂಡಣ್ಣ




ಮುಂಬೈ ಧಾರಣೆ (ಶೇಂಗಾ) 29-10-2025

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1278 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,20,200 (1,18,000)
ಬೆಳ್ಳಿ ಕೆ.ಜಿಗೆ	1,46,700 (1,43,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,936
ಇಂದಿನ ಅಂತ್ಯ:	26,053
ದಿನದ ಗರಿಷ್ಠ:	26,097
	117

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹595
	12 ಕ್ಕೆ	₹80
ಮೈಸೂರು:	100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹167

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೊಲೀನ್	₹1280 (1285)

‘ಭಾರತದ ಜೊತೆ ವ್ಯಾಪಾರ ಒಪ್ಪಂದ’

ಪ್ರಧಾನಿ ಮೋದಿ ಜೊತೆಗಿನ ಸಂಬಂಧ ಬಹಳ ದೊಡ್ಡದು ಎಂದ ಟ್ರಂಪ್

ಸೋಲ್ (ಪಿಟಿಐ): ಅಮೆರಿಕವು ಭಾರತದ ಜೊತೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ. ಒಪ್ಪಂದದ ವಿಚಾರವಾಗಿ ಅಮೆರಿಕ ಮತ್ತು ಭಾರತದ ಅಧಿಕಾರಿಗಳ ನಡುವೆ ಮಾತುಕತೆ ನಡೆಯುತ್ತಿದೆ.

ಏಷ್ಯಾ ಪೆಸಿಫಿಕ್ ಆರ್ಥಿಕ ಸಹಕಾರ – ಸಿಇಒ ಶೃಂಗದಲ್ಲಿ ಮಾತನಾಡಿದ ಟ್ರಂಪ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ತಮಗೆ ‘ಅಪಾರ ಗೌರವ ಹಾಗೂ ಪ್ರೀತಿ’ ಇರುವುದಾಗಿ ಹೇಳಿದ್ದಾರೆ. ಪ್ರಧಾನಿ ಮೋದಿ ಅವರ ಜೊತೆಗಿನ ತಮ್ಮ ಸ್ನೇಹ ಬಹಳ ದೊಡ್ಡದು ಎಂದೂ ಟ್ರಂಪ್ ಹೇಳಿಕೊಂಡಿದ್ದಾರೆ.

ಆದರೆ ವಾಣಿಜ್ಯ ಒಪ್ಪಂದದ ಕುರಿತಾಗಿ ಅವರು ಹೆಚ್ಚಿನ ಮಾಹಿತಿ ನೀಡಲಿಲ್ಲ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಕ್ವಾಲಾಲಂಪುರದಲ್ಲಿ ಸೋಮವಾರ ಭೇಟಿಯಾಗಿದ್ದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು, ವ್ಯಾಪಾರ ಒಪ್ಪಂದದ ಕುರಿತಾಗಿ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ.

ಆದರೆ, ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದಕ್ಕಾಗಿ ಭಾರತದ ಮೇಲೆ ಹೆಚ್ಚುವರಿಯಾಗಿ ವಿಧಿಸಿರುವ ಶೇ 25ರಷ್ಟು ತೆರಿಗೆಯನ್ನು ರದ್ದುಪಡಿಸುವ ಬಗ್ಗೆ ಅಮೆರಿಕದಿಂದ ಭರವಸೆ ಸಿಕ್ಕಿರುವ ಸೂಚನೆ ಇಲ್ಲ. ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದವು ಅಂತಿಮ ಹಂತಕ್ಕೆ ಬಹಳ ಹತ್ತಿರದಲ್ಲಿದೆ ಎಂದು ಭಾರತದ ಅಧಿಕಾರಿಯೊಬ್ಬರು ಕಳೆದ ವಾರ ಹೇಳಿದ್ದಾರೆ.



ಭಾರತ ಮತ್ತು ಪಾಕಿಸ್ತಾನ ಸಂಘರ್ಷದ ವೇಳೆ ಹೊಸದಾದ ಏಳು ವಿಮಾನಗಳನ್ನೂ ಹೊಡೆದುರುಳಿಸಲಾಗಿದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

(ಯಾವ ದೇಶದ ವಿಮಾನವನ್ನು ಯಾರು ಹೊಡೆದುರುಳಿಸಿದರು ಎಂದು ತಮ್ಮ ಹೇಳಿಕೆಯಲ್ಲಿ ಅವರು ಸ್ಪಷ್ಟಪಡಿಸಲಿಲ್ಲ)

‘ಧೈರ್ಯವಾಗಿ ಪ್ರತಿಕ್ರಿಯಿಸಿ’

ಒಂದಾದ ಮೇಲೊಂದು ದೇಶದಲ್ಲಿ ಟ್ರಂಪ್ ಅವರು ಮೋದಿ ಮಾನ ತೆಗೆಯುತ್ತಿದ್ದಾರೆ. ದಕ್ಷಿಣ ಕೊರಿಯಾದ್ದು ಹೊಸತು. ಆಪರೇಷನ್ ಸಿಂಧೂರ ನಿಲ್ಲಿಸಲು ವ್ಯಾಪಾರವನ್ನು ಮುಂದಿಟ್ಟು ಮೋದಿ ಅವರನ್ನು ಬೆದರಿಸಲಾಯಿತು ಎಂದು ಟ್ರಂಪ್ ಮತ್ತೊಮ್ಮೆ ಹೇಳಿದ್ದಾರೆ. ಏಳು ವಿಮಾನಗಳನ್ನು ಹೊಡೆದುರುಳಿಸಲಾಯಿತು ಎಂದೂ ಹೇಳಿದರು. ಮೋದಿ ಅವರೇ ಭಯಪಡಬೇಡಿ. ಧೈರ್ಯವಾಗಿ ಪ್ರತಿಕ್ರಿಯಿಸಿ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

‘ಮೋದಿ ಅವರು ಕಠಿಣ ಮನುಷ್ಯ’

ಟೊಕಿಯೊ/ಸೋಲ್ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಬಹಳ ಕಠಿಣ ಮನುಷ್ಯ. ಬಹಳ ಸುಂದರವಾಗಿದ್ದಾರೆ ಕೂಡ. ನೀವು ಅವರನ್ನು ನೋಡಿದರೆ, ಅವರನ್ನು ತಂದೆಯನ್ನಾಗಿ ಪಡೆಯಬೇಕಿತ್ತು ಅನ್ನಿಸುತ್ತದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

ಟೊಕಿಯೊದಲ್ಲಿ ಉದ್ಯಮಿಗಳ ಜೊತೆ ಮಂಗಳವಾರ ಆಯೋಜಿಸಲಾಗಿದ್ದ ಭೋಜನ ಕೂಟದ ವೇಳೆ ಮತ್ತು ಬುಧವಾರ ದಕ್ಷಿಣ ಕೊರಿಯಾದಲ್ಲಿ ಏಷ್ಯಾ–ಪೆಸಿಫಿಕ್ ಆರ್ಥಿಕ ಸಹಕಾರ ಸಿಇಒ ಶೃಂಗದಲ್ಲೂ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

‘ನಾನು ಅವರಿಗೆ ಕರೆ ಮಾಡಿ, ನಾವು ನಿಮ್ಮೊಂದಿಗೆ ವ್ಯಾಪಾರ ಮಾಡಲು ಸಾಧ್ಯವಿಲ್ಲ ಎಂದೆ. ಅದಕ್ಕೆ ಅವರು (ಮೋದಿ) ಪ್ರತಿಕ್ರಿಯಿಸಿ, ‘ಇಲ್ಲ, ಇಲ್ಲ, ನಾವು ವ್ಯಾಪಾರ ಮಾಡಿಕೊಳ್ಳಲೇಬೇಕು’ ಎಂದರು. ಇಲ್ಲ ಇದು ಸಾಧ್ಯವಿಲ್ಲ. ನೀವು ಪಾಕಿಸ್ತಾನದೊಂದಿಗೆ ಯುದ್ಧ ಆರಂಭಿಸಿದ್ದೀರಿ ಎಂದು ನಾನು ಉತ್ತರಿಸಿದೆ’ ಎಂದು ವಿವರಿಸಿದರು. ‘ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರು ಕೂಡ ಉತ್ತಮ ಹೋರಾಟಗಾರ ಮತ್ತು ಬಹಳ ಒಳ್ಳೆಯ ಮನುಷ್ಯ’ ಎಂದು ಟ್ರಂಪ್ ಹೇಳಿದರು.

‘ನಾನು ಪಾಕಿಸ್ತಾನಕ್ಕೂ ಕರೆ ಮಾಡಿದ್ದೆ. ನಿಮ್ಮಿಬ್ಬರ ಬಳಿಯೂ ಪರಮಾಣು ಶಕ್ತಿ ಇದೆ ಎಂದು ನಿಮಗೆ ಗೊತ್ತಿದೆ ಅಲ್ಲವೇ. ನೀವು ಭಾರತದೊಂದಿಗೆ ಸಂಘರ್ಷಕ್ಕೆ ಇಳಿದಿದ್ದೀರಿ. ಆದ್ದರಿಂದ ನಾನು ನಿಮ್ಮೊಂದಿಗೆ ವ್ಯಾಪಾರ ಮಾಡುವುದಿಲ್ಲ ಎಂದೆ. ಇಲ್ಲ, ಇಲ್ಲ, ಇಲ್ಲ ನಾವು ಹೋರಾಡಲು ನೀವು ಅನುವು ಮಾಡಿಕೊಡಬೇಕು ಎಂದು ಅವರು ಪ್ರತಿಕ್ರಿಯಿಸಿದರು. ಭಾರತ ಕೂಡ ಹೀಗೆಯೇ ಹೇಳಿತ್ತು’ ಎಂದರು.

‘ನಿಜವಾಗಿಯೂ ಎರಡನೇ ದಿನದ ಬಳಿಕ ಇಬ್ಬರೂ ಕರೆ ಮಾಡಿದರು. ನಾವು ಅರ್ಥಮಾಡಿಕೊಳ್ಳುತ್ತೇವೆ ಎಂದರು. ಬಳಿಕ ಇಬ್ಬರೂ ಯುದ್ಧ ನಿಲ್ಲಿಸಿದರು. ಚೆನ್ನಾಗಿ ಆಯಿತು ಅಲ್ಲವೇ? ಬೈಡನ್ ಅವರು ಈ ರೀತಿ ಮಾಡುತ್ತಿದ್ದರು ಎಂದು ನಿಮಗೆ ಅನ್ನಿಸುತ್ತದೆಯೇ?’ ಎಂದರು.

ಸುದ್ದಿ 2 ನಿಮಿಷ

‘ಜಿಡಿಪಿ ಪ್ರಗತಿ ಶೇ 7ರಷ್ಟು ನಿರೀಕ್ಷೆ’

ಮುಂಬೈ (ಪಿಟಿಐ): ‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7ಕ್ಕೆ ತಲುಪುವ ಸಾಧ್ಯತೆ ಇದೆ’ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ (ಸಿಇಎ) ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಮೂರು ಜಾಗತಿಕ ರೇಟಿಂಗ್ ಸಂಸ್ಥೆಗಳು ಇತ್ತೀಚೆಗೆ ದೇಶದ ರೇಟಿಂಗ್ ಹೆಚ್ಚಿಸಿವೆ. ದೇಶವು ಇದೇ ಪಥದಲ್ಲಿ ಮುಂದುವರಿದರೆ ಶೀಘ್ರ ‘ಎ’ ರೇಟಿಂಗ್ ವರ್ಗಕ್ಕೆ ಸೇರ್ಪಡೆ ಆಗಬಹುದು ಎಂದು ಬುಧವಾರ ನಡೆದ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತೆಗೆದುಕೊಂಡ ಕ್ರಮಗಳು ದೇಶದ ಆರ್ಥಿಕತೆಯನ್ನು ‘ಆರಾಮದಾಯಕ ಸ್ಥಾನದಲ್ಲಿ’ ಇರಿಸುತ್ತವೆ. ಆದಾಯ ತೆರಿಗೆ ವಿನಾಯಿತಿ ಮತ್ತು ಜಿಎಸ್‌ಟಿ ಇಳಿಕೆಯಂತಹ ಆರ್ಥಿಕ ಕ್ರಮಗಳು ದೇಶದ ಆರ್ಥಿಕ ಪ್ರಗತಿಯನ್ನು ಹೆಚ್ಚಿಸಲಿವೆ ಎಂದು ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.3ಕ್ಕೆ ಇಳಿಕೆ ಆಗಬಹುದು ಎಂದು ಫೆಬ್ರುವರಿಯಲ್ಲಿ ಅನಂತ ನಾಗೇಶ್ವರನ್ ಹೇಳಿದ್ದರು. ಅಮೆರಿಕದ ಸುಂಕದಿಂದ ಜಿಡಿಪಿ ಶೇ 6ಕ್ಕೆ ಇಳಿಯುವ ನಿರೀಕ್ಷೆ ಇದೆ ಎಂದು ಹೇಳಿದ್ದರು.



ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿದ ಎಂಆರ್‌ಪಿಎಲ್


ಹೈದರಾಬಾದ್ (ರಾಯಿಟರ್ಸ್): ರಷ್ಯಾದ ತೈಲ ಉತ್ಪಾದನಾ ಕಂಪನಿಗಳ ಮೇಲೆ ಅಮೆರಿಕವು ನಿರ್ಬಂಧ ವಿಧಿಸಿರುವ ಕಾರಣದಿಂದ, ಅಲ್ಲಿಂದ ಕಚ್ಚಾ ತೈಲ ಖರೀದಿಸುವ ಆಲೋಚನೆ ತಕ್ಷಣಕ್ಕೆ ಇಲ್ಲ ಎಂದು ಎಂಆರ್‌ಪಿಎಲ್ ಬುಧವಾರ ಹೇಳಿದೆ.

ರಷ್ಯಾದ ರೊಸ್ನೆಫ್ಟ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ಅಮೆರಿಕವು ನಿರ್ಬಂಧ ವಿಧಿಸಿದೆ. ‘ನಿರ್ಬಂಧಕ್ಕೆ ಗುರಿಯಾಗಿರುವ ಕಂಪನಿಗಳನ್ನು ಬಿಟ್ಟು ಬೇರೆ ಕಂಪನಿಗಳಿಂದ ಕಚ್ಚಾ ತೈಲ ಖರೀದಿಯು ಎಂಆರ್‌ಪಿಎಲ್‌ಗೆ ಕಷ್ಟ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಸ್ಕರಿಸಿದ ತೈಲ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುವ ಸರ್ಕಾರಿ ಸ್ವಾಮ್ಯದ ಉದ್ದಿಮೆ ಎಂಆರ್‌ಪಿಎಲ್ ಮಾತ್ರ. ಹೀಗಾಗಿ ನಿರ್ಬಂಧಗಳ ಉಲ್ಲಂಘನೆ ಆಗದಂತೆ ನಿಗಾ ವಹಿಸಬೇಕಿದೆ ಎಂದು ಅವರು ಹೇಳಿದ್ದಾರೆ.

ಎಂಆರ್‌ಪಿಎಲ್ ಪ್ರತಿ ತಿಂಗಳು 30 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ರಷ್ಯಾದಿಂದ ಖರೀದಿಸುತ್ತಿದೆ. ನವೆಂಬರ್ ಹಾಗೂ ಡಿಸೆಂಬರ್‌ನ ಸಂಸ್ಕರಣಾ ಅಗತ್ಯಗಳಿಗೆ ಸಾಕಾಗುವಷ್ಟು ಕಚ್ಚಾ ತೈಲದ ಸಂಗ್ರಹ ತನ್ನಲ್ಲಿದೆ ಎಂದು ಎಂಆರ್‌ಪಿಎಲ್ ಹೇಳಿದೆ.

ನಿಧನ



ಗೌಡನಹಳ್ಳಿ ಎಸ್ ಲಕ್ಷ್ಮಣ್

ಇವರು ದಿ: 29.10.2025ರ ಬೆಳಗ್ಗೆ 11.40ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಓಂ ಶಾಂತಿ

ಕುಟುಂಬದವರು ಹಾಗೂ ಸ್ನೇಹಿತರು

ಮೊ: 94484 89238

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29750
ಎಸಿ	₹15400
ಆರ್‌ಪಿ	₹19000
ಆರ್‌ಸಿ	₹10900

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-636
ದ್ವಿತಳಿ (ಬಿ.ವಿ)	₹465-790

‘ಕೈಗಾರಿಕೆಗಳು ರಾಜ್ಯದಿಂದ ಹೋಗಿಲ್ಲ’

ಈ ಬಗ್ಗೆ ತಪ್ಪು ಸುದ್ದಿ ಹಬ್ಬಿಸಲಾಗುತ್ತಿದೆ: ಸಚಿವ ಎಂ.ಬಿ. ಪಾಟೀಲ ಹೇಳಿಕೆ

ಪ್ರಜಾವಾಣಿ ವಾರ್ತೆ



ಎಂ.ಬಿ.ಪಾಟೀಲ

ಮೈಸೂರು: ‘ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಅತ್ಯುತ್ತಮ ವಾತಾವರಣವಿದ್ದು, ಒಂದು ಕೈಗಾರಿಕೆಯೂ ಇಲ್ಲಿಂದ ಹೊರಹೋಗಿಲ್ಲ. ಈ ಬಗ್ಗೆ ತಪ್ಪು ಸುದ್ದಿಗಳನ್ನು ಹಬ್ಬಿಸಲಾಗುತ್ತಿದೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಇಲ್ಲಿ ಪ್ರತಿಪಾದಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯ ಸರ್ಕಾರ ಇದೇ ವರ್ಷದ ಫೆಬ್ರುವರಿಯಲ್ಲಿ ನಡೆಸಿದ್ದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹10.27 ಲಕ್ಷ ಕೋಟಿ ಹೂಡಿಕೆಯ ಖಾತರಿ ಸಿಕ್ಕಿತ್ತು. ಆ ಪೈಕಿ ಶೇಕಡ 60ಕ್ಕಿಂತ ಹೆಚ್ಚು ಹೂಡಿಕೆಯಾಗಿದೆ. ಸಾವಿರಾರು ಉದ್ಯೋಗಗಳೂ ಸೃಷ್ಟಿಯಾಗುತ್ತಿವೆ’ ಎಂದು ಹೇಳಿದರು.

‘ಫಾಕ್ಸ್ ಕಾನ್‌ನಂಥ ಬೃಹತ್ ಕಂಪನಿಯು ರಾಜ್ಯದಲ್ಲಿ ಬೃಹತ್ ಉತ್ಪಾದನಾ ಘಟಕ ತೆರೆದಿದೆ. ದುಬಾರಿ ಮೊಬೈಲ್ ಫೋನ್‌ಗಳ ರಫ್ತು ಆಗುತ್ತಿವೆ. ಜಪಾನ್‌ನಿಂದ ಎರಡು ವರ್ಷದಲ್ಲಿ ರಾಜ್ಯಕ್ಕೆ ₹10,500 ಕೋಟಿ ಹೂಡಿಕೆ ಖಾತರಿ ಸಿಕ್ಕಿದೆ. ಒಸಾಕಾವಾ ಕಂಪನಿಯೂ ಹೂಡಿಕೆಗೆ ಮುಂದೆ ಬಂದಿದೆ’ ಎಂದರು.

ಕೇಂದ್ರದಿಂದ ತಾರತಮ್ಯ: ಗೂಗಲ್ ಕಂಪನಿಯ ದತ್ತಾಂಶ ಕೇಂದ್ರವು ಆಂಧ್ರಪ್ರದೇಶದ ಪಾಲಾದ ಕುರಿತು ಪ್ರತಿಕ್ರಿಯಿಸಿದ ಸಚಿವರು, ‘ಕೇಂದ್ರ ಸರ್ಕಾರದ ತಾರತಮ್ಯ ನೀತಿ ಇದಕ್ಕೆ ಕಾರಣ’ ಎಂದು ದೂರಿದರು.

‘ಕೇಂದ್ರ ಸರ್ಕಾರವು ಸೆಮಿ ಕಂಡಕ್ಟರ್ ಮಿಷನ್ ಅಡಿಯಲ್ಲಿ ವಿಶೇಷ ಪ್ರೋತ್ಸಾಹಧನ ನೀಡುತ್ತಿದೆ. ಅದನ್ನು ಪಡೆಯುವ ಕಂಪನಿಗಳನ್ನು ಬಿಜೆಪಿ ಆಡಳಿತವಿರುವ ಗುಜರಾತ್, ಮಹಾರಾಷ್ಟ್ರದಂಥ ರಾಜ್ಯಗಳಿಗೆ ಕಳಿಸುತ್ತಿದೆ. ಆಂಧ್ರಪ್ರದೇಶದಲ್ಲಿ ಬಿಜೆಪಿಯ ಮಿತ್ರಪಕ್ಷವೇ ಅಧಿಕಾರದಲ್ಲಿದೆ. ಕೇಂದ್ರವೇ ಹೆಚ್ಚುವರಿ ಪ್ರೋತ್ಸಾಹ ಧನ ಕೊಟ್ಟು ಗೂಗಲ್ ಕೇಂದ್ರವನ್ನು ಅಲ್ಲಿಗೆ ಕಳುಹಿಸಿದೆ’ ಎಂದು ಹೇಳಿದರು.

‘ಈ ಹಿಂದೆ ಕಂಪನಿಯೊಂದು ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ರಾಜ್ಯದಲ್ಲೇ ಹೂಡಿಕೆ ಮಾಡಲು ತೀರ್ಮಾನಿಸಿತ್ತು. ಆದರೆ, ದೆಹಲಿಗೆ ಹೋದ ಮೇಲೆ ಕಂಪನಿಯ ನಿಲುವು ಬದಲಾಯಿತು. ಕೇಂದ್ರ ಸರ್ಕಾರ ಇನ್ನಾದರೂ ಇಂಥ ತಾರತಮ್ಯ ಧೋರಣೆಯನ್ನು ಬಿಡಬೇಕು’ ಎಂದು ಆಗ್ರಹಿಸಿದರು.

ಉದ್ಯಮ ಸ್ಥಾಪನೆ ಗಡುವು ವಿಸ್ತರಿಸಿ

ಮೈಸೂರು: ‘ಕೈಗಾರಿಕಾ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ, ಮೂಲಸೌಲಭ್ಯ ಕಲ್ಪಿಸಲು ವಿಳಂಬವಾಗಿರುವ ಕಡೆ ಉದ್ಯಮ ಸ್ಥಾಪಿಸಲು ಗಡುವನ್ನು ವಿಸ್ತರಿಸಬೇಕು’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸೂಚಿಸಿದರು.

ಉದ್ಯಮಿಗಳ ಸಭೆ ನಡೆಸಿದ ಅವರು, ‘ಮೂಲಸೌಕರ್ಯ ಒದಗಿಸದೆ ಉದ್ಯಮ ಸ್ಥಾಪಿಸಲು ನೀಡಿದ್ದ ಗಡುವು ಮುಗಿಯಿತು ಎನ್ನುವುದು ನ್ಯಾಯವಲ್ಲ. ಈ ಸಮಸ್ಯೆಯನ್ನು ರಾಜ್ಯದೆಲ್ಲೆಡೆ ಪರಿಶೀಲಿಸಬೇಕು. ಕೆಐಎಡಿಬಿಯಲ್ಲಿ ಈ ಕುರಿತು ನಿರ್ಣಯವನ್ನೇ ಕೈಗೊಳ್ಳಬೇಕು. ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಬೇಕು’ ಎಂದು ನಿರ್ದೇಶನ ನೀಡಿದರು.

‘ಇಲಾಖೆಯಲ್ಲಿ ಸಮಗ್ರ ಬದಲಾವಣೆಗಾಗಿ ಉದ್ಯಮಿಗಳ ಸಭೆ ನಡೆಸಿ ಅಭಿಪ್ರಾಯ, ಸಲಹೆಗಳನ್ನು ಆಲಿಸುತ್ತಿದ್ದೇನೆ. ಕಾಟಾಚಾರಕ್ಕೆ ಸಭೆ ನಡೆಸಲು ಬಂದಿಲ್ಲ. ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ರಾಜ್ಯವನ್ನು ಮಾದರಿ ಮಾಡಬೇಕು ಎಂಬುದೇ ಸರ್ಕಾರದ ಉದ್ದೇಶ’ ಎಂದರು.

ಎಲ್ ಆ್ಯಂಡ್ ಟಿ: ₹3,926 ಕೋಟಿ ಲಾಭ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ನಿರ್ಮಾಣ ಕ್ಷೇತ್ರದ ಪ್ರಮುಖ ಕಂಪನಿ ಲಾರ್ಸನ್ ಆ್ಯಂಡ್ ಟೊಬ್ರೊ (ಎಲ್ ಆ್ಯಂಡ್ ಟಿ) ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹3,926 ಕೋಟಿ ನಿವ್ವಳ ಲಾಭ ಗಳಿಸಿದೆ. ಕಂಪನಿಯ ನಿವ್ವಳ ಲಾಭದಲ್ಲಿ ಶೇ 15.6ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿ ₹3,395 ಕೋಟಿ ಲಾಭ ಗಳಿಸಿತ್ತು. ವರಮಾನದಲ್ಲಿನ ಹೆಚ್ಚಳದಿಂದ ಲಾಭದ ಪ್ರಮಾಣ ಏರಿಕೆ ಆಗಿದೆ ಎಂದು ಕಂಪನಿ ಷೇರುಪೇಟೆಗೆ ಬುಧವಾರ ತಿಳಿಸಿದೆ.

ವರಮಾನದಲ್ಲಿ ಶೇ 10ರಷ್ಟು ಹೆಚ್ಚಳವಾಗಿದ್ದು, ₹67,983 ಕೋಟಿಯಷ್ಟಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಕಂಪನಿ ಒಟ್ಟು ₹2,10,237 ಕೋಟಿ ಮೌಲ್ಯದ ಕಾರ್ಯಾದೇಶ ಪಡೆದಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 39ರಷ್ಟು ಏರಿಕೆಯಾಗಿದೆ. ಈ ಕಾರ್ಯಾದೇಶದ ಪೈಕಿ ಅಂತರ ರಾಷ್ಟ್ರೀಯ ಕಾರ್ಯಾದೇಶವು ₹1,24,236 ಕೋಟಿಯಷ್ಟಾಗಿದ್ದು, ಒಟ್ಟು ಕಾರ್ಯಾದೇಶದಲ್ಲಿ ಶೇ 59ರಷ್ಟು ಪಾಲು ಹೊಂದಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-31500	ಗೊರಬಲು	19009-45109	ಬಿಳೆಗೋಟು	30109-39099
ಹೊಸತು	26000-37000	ಹೊಸತು	46999-65599	ಚಾಲಿ	44299-50099
ಹಳತು	43000-53500	ರಾಶಿ	46009-65000	ಕೆಂಪುಗೋಟು	28599-39199
		ಸರಕು	67800-93896	ರಾಶಿ	53069-60066
ಶಿವಮೊಗ್ಗ		**ಶಿರಸಿ**		**ಕಾರ್ಕಳ**	
ಬೆಟ್ಟೆ	50009-77019	ಬೆಟ್ಟೆ	40099-54099	ಹಳತು	32500-53500

ಸಕ್ಕರೆ ರಫ್ತಿಗೆ ಅನುಮತಿ ಸಾಧ್ಯತೆ

ದಾಸ್ತಾನು ಹೆಚ್ಚಿರುವ ಕಾರಣ ರಫ್ತು ಅನುಮತಿಗೆ ಪರಿಶೀಲನೆ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2025–26ನೇ ಮಾರುಕಟ್ಟೆ ವರ್ಷದಲ್ಲಿ ಸಕ್ಕರೆ ರಫ್ತಿಗೆ ಅವಕಾಶ ನೀಡುವ ಬಗ್ಗೆ ಪರಿಶೀಲನೆ ನಡೆಸಿದೆ. ಕಾರ್ಖಾನೆಗಳು ಎಥೆನಾಲ್ ಉತ್ಪಾದನೆಗೆ ಬಳಸಿದ ಸಕ್ಕರೆಯ ಪ್ರಮಾಣವು ನಿರೀಕ್ಷೆಗಿಂತ ಕಡಿಮೆ ಆಗಿದ್ದ ಕಾರಣದಿಂದಾಗಿ, ಸಕ್ಕರೆ ದಾಸ್ತಾನು ಹೆಚ್ಚಿದೆ. ಹೀಗಾಗಿ ರಫ್ತಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

2024–25ರಲ್ಲಿ ದೇಶದ ಸಕ್ಕರೆ ಕಾರ್ಖಾನೆಗಳು 34 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ಎಥೆನಾಲ್ ಉತ್ಪಾದನೆಗೆ ಬಳಸಿಕೊಂಡವು. ಆ ವರ್ಷದಲ್ಲಿ ಕಾರ್ಖಾನೆಗಳು 45 ಲಕ್ಷ ಟನ್ ಸಕ್ಕರೆಯನ್ನು ಎಥೆನಾಲ್ ಉತ್ಪಾದನೆಗೆ ಬಳಸುವ ನಿರೀಕ್ಷೆ ಇತ್ತು ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ.

ಎಥೆನಾಲ್‌ಗೆ ಸಕ್ಕರೆ ಬಳಕೆ ಕಡಿಮೆಯಾದ ಪರಿಣಾಮವಾಗಿ 2025–26ನೇ ಮಾರುಕಟ್ಟೆ ವರ್ಷದ ಆರಂಭದಲ್ಲಿ ಸಕ್ಕರೆ ದಾಸ್ತಾನು ಹೆಚ್ಚಿನ ಮಟ್ಟದಲ್ಲಿದೆ ಎಂದು ಅವರು ತಿಳಿಸಿದ್ದಾರೆ. ಪ್ರತಿ ವರ್ಷದ ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯನ್ನು ಮಾರುಕಟ್ಟೆ ವರ್ಷ ಎಂದು ಪರಿಗಣಿಸಲಾಗುತ್ತದೆ.

2025–26ರಲ್ಲಿ ಸಕ್ಕರೆ ಉತ್ಪಾದನೆಯು 3.4 ಕೋಟಿ ಟನ್ ಆಗುವ ನಿರೀಕ್ಷೆ ಇದೆ. ದೇಶಿ ಮಾರುಕಟ್ಟೆಯಲ್ಲಿ ವಾರ್ಷಿಕ ಬೇಡಿಕೆಯು 2.85 ಕೋಟಿ ಟನ್ ಇರಲಿದೆ ಎಂದು ಚೋಪ್ರಾ ತಿಳಿಸಿದ್ದಾರೆ.

ಸಕ್ಕರೆ ರಫ್ತಿಗೆ ಅವಕಾಶ ಕಲ್ಪಿಸಬೇಕು ಎಂದು ಕಾರ್ಖಾನೆಗಳು ಆಗ್ರಹಿಸುತ್ತಿವೆ. ಈ ಕುರಿತು ಚೋಪ್ರಾ ಅವರನ್ನು ಪ್ರಶ್ನಿಸಿದಾಗ ‘ನಮ್ಮಲ್ಲಿ ಸಕ್ಕರೆ ದಾಸ್ತಾನು ಹೆಚ್ಚಿರುವುದು ನಿಜ... ರಫ್ತಿಗೆ ಅವಕಾಶ ಕಲ್ಪಿಸುವುದನ್ನು ನಾವು ಪರಿಶೀಲಿಸುತ್ತಿದ್ದೇವೆ’ ಎಂದು ಉತ್ತರಿಸಿದ್ದಾರೆ.

ಈ ವಿಚಾರವಾಗಿ ತೀರ್ಮಾನವು ಶೀಘ್ರವೇ ಆಗಬಹುದು ಎಂದು ಅವರು ಸೂಚ್ಯವಾಗಿ ಹೇಳಿದ್ದಾರೆ. ತೀರ್ಮಾನ ತೆಗೆದುಕೊಳ್ಳಲು ಸಚಿವರ ಸಮಿತಿಯೊಂದು ಮುಂದಿನ ವಾರ ಸಭೆ ಸೇರುವ ಸಾಧ್ಯತೆ ಇದೆ.

ಕಳೆದ ಮಾರುಕಟ್ಟೆ ವರ್ಷದಲ್ಲಿ 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಅನುಮತಿ ನೀಡಲಾಗಿತ್ತು. ಆದರೆ ಆ ವರ್ಷದಲ್ಲಿ ದೇಶದಿಂದ ಒಟ್ಟು 8 ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡಲಾಗಿದೆ.

ಚಿನ್ನದ ದರ ₹2,600, ಬೆಳ್ಳಿ ₹6,700 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2,600 ಹೆಚ್ಚಳವಾಗಿ, ₹1,24,400ರಂತೆ ಮಾರಾಟ ವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,23,800 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹6,700 ಜಿಗಿತವಾಗಿ, ₹1,51,700 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪಶ್ಚಿಮ ಏಷ್ಯಾದಲ್ಲಿ ರಾಜಕೀಯ ಬಿಕ್ಕಟ್ಟು ಹೆಚ್ಚಳವಾಗಿದೆ. ಇದರಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದ ಖರೀದಿಗೆ ಮುಂದಾಗಿದ್ದರಿಂದ ಚಿನ್ನದ ಬೆಲೆ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಇಂದಿನಿಂದ ಸ್ಟಾರ್‌ಲಿಂಕ್ ಪರೀಕ್ಷಾರ್ಥ ಪ್ರಯೋಗ

ನವದೆಹಲಿ (ಪಿಟಿಐ): ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್, ದೇಶದಲ್ಲಿ ಉಪಗ್ರಹ ಆಧಾರಿತ ಬ್ರಾಡ್‌ಬ್ಯಾಂಡ್ ಸೇವೆ ಆರಂಭಿಸುವುದಕ್ಕೆ ಸಂಬಂಧಿಸಿದ ಪರೀಕ್ಷಾರ್ಥ ಪ್ರಯೋಗವನ್ನು ಅಕ್ಟೋಬರ್ 30 ಮತ್ತು 31ರಂದು ಮುಂಬೈನಲ್ಲಿ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಕಾನೂನು ಜಾರಿ ಪ್ರಾಧಿಕಾರಗಳ ಸಮಕ್ಷಮದಲ್ಲಿ ಈ ಪರೀಕ್ಷಾರ್ಥ ಪ್ರಯೋಗ ನಡೆಸಲಿದೆ. ಇದು ಸ್ಟಾರ್‌ಲಿಂಕ್‌ಗೆ ಹಂಚಿಕೆ ಮಾಡಿರುವ ತಾತ್ಕಾಲಿಕ ತರಂಗಾತರವನ್ನು ಆಧರಿಸಿದೆ ಎಂದು ತಿಳಿಸಿವೆ.

ಸ್ಟಾರ್‌ಲಿಂಕ್ ಭಾರತದಲ್ಲಿ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಆರಂಭಿಸಲು ಈ ಪರೀಕ್ಷಾರ್ಥ ಪ್ರಯೋಗ ಕಡ್ಡಾಯವಾಗಿದೆ. ಸ್ಟಾರ್‌ಲಿಂಕ್ ತನ್ನ ವಾಣಿಜ್ಯ ಸೇವೆ ಆರಂಭಿಸುವುದಕ್ಕೂ ಮುನ್ನ ಅನುಮತಿ ಪಡೆಯುವುದು ಅತ್ಯವಶ್ಯಕವಾಗಿದೆ.

ಪಿಎಂ–ಶ್ರೀ ಯೋಜನೆ ಅನುಷ್ಠಾನಕ್ಕೆ ತಡೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಾಜ್ಯದಲ್ಲಿ ‘ಪ್ರಧಾನಮಂತ್ರಿ ಸ್ಕೂಲ್ ಫಾರ್ ರೈಸಿಂಗ್ ಇಂಡಿಯಾ’ (ಪಿಎಂ–ಶ್ರೀ) ಯೋಜನೆ ಅನುಷ್ಠಾನಗೊಳಿಸುವ ನಿರ್ಧಾರವನ್ನು ತಡೆಹಿಡಿಯಲು ಕೇರಳ ಸರ್ಕಾರ ನಿರ್ಧರಿಸಿದೆ. ಯೋಜನೆಗೆ ಸಿಪಿಐ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿರುವ ಕಾರಣ ಈ ನಿರ್ಧಾರಕ್ಕೆ ಬಂದಿದೆ. ‘ಏಳು ಮಂದಿ ಸದಸ್ಯರನ್ನು ಒಳಗೊಂಡ ಸಂಪುಟ ಉಪ ಸಮಿತಿಯು ಯೋಜನೆಯನ್ನು ಪರಿಶೀಲಿಸಲಿದೆ. ಸಮಿತಿಯ ವರದಿ ಆಧಾರದಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬುಧವಾರ ತಿಳಿಸಿದರು.

ಪಿಣರಾಯಿ ಅವರು, ‘ಯೋಜನೆಯನ್ನು ಪರಿಶೀಲನೆಗೆ ಕಳುಹಿಸಿರುವುದರಿಂದ ಈ ಕುರಿತ ಪ್ರಶ್ನೆಗಳು ಅನಗತ್ಯ’ ಎಂದು ಹೇಳುವ ಮೂಲಕ ಸುದ್ದಿಗಾರರ ಪ್ರಶ್ನೆಗಳನ್ನು ನಿರಾಕರಿಸಿದರು.

ಇದೇ ಸಂದರ್ಭದಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿಯು ಆರ್‌ಎಸ್‌ಎಸ್ ಸಿದ್ಧಾಂತವನ್ನು ಶಿಕ್ಷಣ ಕ್ಷೇತ್ರದ ಮೇಲೆ ಹೇರುವ ಹುನ್ನಾರ ಎಂದು ಅವರು ಪುನರುಚ್ಚರಿಸಿದರು.

ಉಪ ಸಮಿತಿ ಪರಿಶೀಲನೆ ನಂತರವೇ ಪಿಎಂ–ಶ್ರೀ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಬೇಕು ಎಂದು ಶಿಕ್ಷಣ ಇಲಾಖೆಗೆ ಪತ್ರದ ಮೂಲಕ ತಿಳಿಸಲಾಗಿದೆ.

ಗಾಜಾಪಟ್ಟಿ: ಮೃತರ ಸಂಖ್ಯೆ 104ಕ್ಕೆ ಏರಿಕೆ

ಗಾಜಾಪಟ್ಟಿ (ಎಪಿ): ಹಮಾಸ್ ಬಂಡುಕೋರರು ಕದನ ವಿರಾಮ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಇಸ್ರೇಲ್ ಸೇನೆ ಗಾಜಾಪಟ್ಟಿಯಲ್ಲಿ ರಾತ್ರೋರಾತ್ರಿ ನಡೆಸಿದ ಭಾರಿ ವಾಯು ದಾಳಿಯಲ್ಲಿ 46 ಮಕ್ಕಳು ಸೇರಿ ಮೃತಪಟ್ಟವರ ಸಂಖ್ಯೆ 104ಕ್ಕೆ ಏರಿಕೆಯಾಗಿದೆ.

ಮಂಗಳವಾರ ಸಂಜೆಯವರೆಗೆ 60 ಮಂದಿ ಮೃತಪಟ್ಟಿದ್ದರು. ಬುಧವಾರ ಏಳು ಮಹಿಳೆಯರು, ಆರು ಮಕ್ಕಳು ಸೇರಿ 21 ಜನರ ಮೃತದೇಹಗಳನ್ನು ಆಸ್ಪತ್ರೆಗೆ ತರಲಾಗಿದ್ದು, ಸಾವಿನ ಸಂಖ್ಯೆ ಏರಿದೆ ಎಂದು ಗಾಜಾಪಟ್ಟಿಯ ಅಲ್ ಶಿಫಾ ಆಸ್ಪತ್ರೆಯ ನಿರ್ದೇಶಕ ಮಹಮದ್ ಅಬು ಸಲ್ಮಿಯಾ ತಿಳಿಸಿದ್ದಾರೆ.

ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಗಂಭೀರ ಗಾಯಗಳೊಂದಿಗೆ 20 ಮಕ್ಕಳು ಸೇರಿ 45 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ಅನೇಕರ ಸ್ಥಿತಿ ಚಿಂತಾಜನಕವಾಗಿದೆ ಎಂದು ಅವರು ಹೇಳಿದ್ದಾರೆ. ಅಕ್ಟೋಬರ್ 10ರಂದು ಗಾಜಾಪಟ್ಟಿಯಲ್ಲಿ ಕದನ ವಿರಾಮ ಜಾರಿಯಾಗಿತ್ತು. ಆ ನಂತರ ಇಸ್ರೇಲ್ ಸೇನೆ ನಡೆಸಿದ ದೊಡ್ಡಮಟ್ಟದ ವಾಯು ದಾಳಿ ಇದಾಗಿದೆ.



ಇಸ್ರೇಲ್ ಸೇನಾ ದಾಳಿಯಲ್ಲಿ ಪುತ್ರನನ್ನ ಕಳೆದುಕೊಂಡ ತಾಯಿಯ ರೋದನ

–ಎಎಫ್‌ಪಿ ಚಿತ್ರ

ಕದನ ವಿರಾಮ ಮರುಸ್ಥಾಪನೆ: ‘ಗಾಜಾಪಟ್ಟಿ ಒಳಗಿನ ಬಂಡುಕೋರರು ಮತ್ತು ಅವರ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ ನಂತರವಷ್ಟೇ ಅಲ್ಲಿ ಕದನ ವಿರಾಮ ಮರುಸ್ಥಾಪನೆಗೊಂಡಿತು’ ಎಂದು ಇಸ್ರೇಲ್ ಸೇನೆ ಸಮರ್ಥಿಸಿಕೊಂಡಿದೆ.

‘ಕದನ ವಿರಾಮ ಒಪ್ಪಂದವನ್ನು ನಾವು ಎತ್ತಿ ಹಿಡಿಯುತ್ತೇವೆ. ಆದರೆ, ಯಾವುದೇ ರೀತಿಯ ಉಲ್ಲಂಘನೆಯನ್ನು ನಾವು ಸಹಿಸುವುದಿಲ್ಲ’ ಎಂದು ಇಸ್ರೇಲ್ ಸೇನೆ ಹೇಳಿದೆ.

ಯಶಸ್ವಿಯಾಗದ ಮೋಡ ಬಿತ್ತನೆ

ನವದೆಹಲಿ(ಪಿಟಿಐ): ಚಳಿಗಾಲದಲ್ಲಿ ಉಂಟಾಗುವ ವಾಯುಮಾಲಿನ್ಯ ತಗ್ಗಿಸಲು ದೆಹಲಿ ಸರ್ಕಾರವು, ಐಐಟಿ – ಕಾನ್ಪುರದ ಸಹಯೋಗದಲ್ಲಿ ಮಂಗಳವಾರ ನಗರದ ವಿವಿಧೆಡೆ ಕೈಗೊಂಡ ಮೋಡಬಿತ್ತನೆ ಕಾರ್ಯ ಫಲಪ್ರದವಾಗಿಲ್ಲ.

‘ಮೋಡಗಳಲ್ಲಿ ತೇವಾಂಶ ಕಡಿಮೆ ಇದ್ದ ಕಾರಣ, ಮೋಡಬಿತ್ತನೆ ಪ್ರಯೋಗದ ನಂತರವೂ ಮಳೆ ಬಂದಿಲ್ಲ. ಆದರೆ, ಈ ಪ್ರಯೋಗ ಉಪಯುಕ್ತ ಮಾಹಿತಿಯನ್ನು ಒದಗಿಸಿದೆ’ ಎಂದು ಕಾನ್ಪುರ ಐಐಟಿ ನಿರ್ದೇಶಕ ಮಣೀಂದ್ರ ಅಗರ್ವಾಲ್ ಹೇಳಿದ್ದಾರೆ.

ಈ ಕುರಿತು ವಿಡಿಯೊ ಹೇಳಿಕೆ ನೀಡಿರುವ ಅವರು, ವಾತಾವರಣದಲ್ಲಿ ಕೇವಲ ಶೇ 15 ರಷ್ಟು ತೇವಾಂಶವಿತ್ತು. ಇಷ್ಟು ಕಡಿಮೆ ತೇವಾಂಶದೊಂದಿಗೆ ಮಳೆಯಾಗುವ ಸಾಧ್ಯತೆ ಕಡಿಮೆ. ಹೀಗಾಗಿ ಯಶಸ್ಸು ದೊರೆತಿಲ್ಲ’ ಎಂದು ಅವರು ವಿವರಿಸಿದ್ದಾರೆ.

ದೆಹಲಿಯ ಬುರಾರಿ, ಉತ್ತರ ಕರೋಲ್ ಬಾಘ್, ಮಯೂರು ವಿಹಾರ್ ಪ್ರದೇಶಗಳಲ್ಲಿ ಮೋಡಬಿತ್ತನೆ ಪ್ರಯೋಗ ನಡೆಸಿತ್ತು. ಮೋಡಗಳಲ್ಲಿ ತೇವಾಂಶದ ಕೊರತೆ ಕಾರಣ ಬುಧವಾರ ನಿಗದಿಯಾಗಿದ್ದ ಮೋಡ ಬಿತ್ತನೆ ಪ್ರಯೋಗವನ್ನೂ ಸ್ಥಗಿತಗೊಳಿಸಲಾಯಿತು.

ಡ್ರಗ್ಸ್: 40 ಮೃತದೇಹಗಳು ಪತ್ತೆ

ರಿಯೊ ಡಿ ಜನ್ಯೆರೊ (ಎಎಫ್‌ಪಿ): ಬ್ರೆಜಿಲ್‌ನ ಫಾವಿಲಾದಲ್ಲಿನ ಮಾದಕ ವಸ್ತು ಜಾಲದ ಮೇಲೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ನೆತ್ತರು ಹರಿದಿದ್ದು, ಕನಿಷ್ಠ 40 ಮೃತದೇಹಗಳು ಪತ್ತೆಯಾಗಿವೆ.

ಈ ಮೃತದೇಹಗಳು ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಸಾವಿಗೀಡಾದ ಡ್ರಗ್ ಜಾಲದ 60 ಶಂಕಿತ ಸದಸ್ಯರವೇ ಎಂಬ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿಲ್ಲ.

ಕಾರ್ಯಾಚರಣೆಯಲ್ಲಿ 2,500 ಪೊಲೀಸ್ ಅಧಿಕಾರಿಗಳು ಭಾಗಿ ಯಾಗಿದ್ದು, ಈ ಪೈಕಿ ನಾಲ್ವರು ಮೃತಪಟ್ಟಿದ್ದಾರೆ.

‘ಶೋಧ ಕಾರ್ಯಾಚರಣೆ ವೇಳೆ 60 ಅಪರಾಧಿಗಳನ್ನು ಹತ್ಯೆ ಮಾಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕಾರ್ಯಾಚರಣೆ ಸಂದರ್ಭದಲ್ಲಿ ಪಾತಕಿಗಳು ಡ್ರೋನ್ ಬಳಸಿ ಪೊಲೀಸ್ ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು’ ಎಂದು ರಿಯೊ ಸ್ಟೇಟ್ ಗವರ್ನರ್ ಕ್ಲೌಡಿಯೊ ಅವರು ತಿಳಿಸಿದರು.

ರಫೇಲ್ ಜೆಟ್‌ನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮೊದಲ ಬಾರಿಗೆ ಸಂಚಾರ

‘ರಕ್ಷಣಾ ಸಾಮರ್ಥ್ಯದ ಬಗ್ಗೆ ಹೆಮ್ಮೆ ಮೂಡಿತು’

ಅಂಬಾಲ(ಹರಿಯಾಣ)(ಪಿಟಿ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಇಲ್ಲಿನ ವಾಯುನೆಲೆಯಿಂದ ರಫೇಲ್ ಯುದ್ಧ ವಿಮಾನದಲ್ಲಿ ಸಂಚರಿಸಿದರು.

ಬೆಳಿಗ್ಗೆ ವಾಯುನೆಲೆಗೆ ಆಗಮಿಸಿದ ರಾಷ್ಟ್ರಪತಿ ಮುರ್ಮು ಅವರಿಗೆ ಭಾರತೀಯ ವಾಯುಪಡೆಯ (ಐಎಎಫ್) ಯೋಧರು ಗೌರವ ವಂದನೆ ಸಲ್ಲಿಸಿದರು. ನಂತರ ಮುರ್ಮು ಅವರು ಜಿ–ಸೂಟ್ ಮತ್ತು ಸನ್‌ಗ್ಲಾಸ್ ಧರಿಸಿ (ಪೈಲಟ್ ದಿರಿಸು), ಏರ್ ಚೀಫ್ ಮಾರ್ಷಲ್ ಮತ್ತು ವಾಯು ಪಡೆಯ ಅಧಿಕಾರಿಗಳೊಂದಿಗೆ ಫೋಟೊಗೆ ಪೋಸ್ ನೀಡಿದರು.

ಮುರ್ಮು ಅವರು ಏರಿದ ವಿಮಾನ 11.27ಕ್ಕೆ ಹಾರಾಟ ಆರಂಭಿಸಿತು. 17ನೇ ಸ್ಕ್ವಾಡ್ರನ್‌ನ ಕಮಾಂಡಿಂಗ್ ಆಫೀಸರ್ ಗ್ರೂಪ್ ಕ್ಯಾಪ್ಟನ್ ಗೆಹಾನಿ ಅವರು ವಿಮಾನ ಚಲಾಯಿಸಿದರು. 30 ನಿಮಿಷಗಳ ಕಾಲ 200 ಕಿ.ಮೀ ದೂರ ಸುತ್ತಾಡಿದ ನಂತರ ವಿಮಾನ ವಾಯನೆಲೆಗೆ ಬಂದಿಳಿಯಿತು ಎಂದು ಎಂದು ರಾಷ್ಟ್ರಪತಿ ಕಚೇರಿಯ ಪ್ರಕಟಣೆ ತಿಳಿಸಿದೆ.

ವಿಮಾನ ಹಾರಾಟದ ನಂತರ ಮುರ್ಮು ಅವರು ಸಂದರ್ಶಕರ ಪುಸ್ತಕದಲ್ಲಿ, ‘ಇದೇ ಮೊದಲ ಬಾರಿಗೆ ಎಐಎಫ್‌ನ ರಫೇಲ್ ಯುದ್ಧ ವಿಮಾನದಲ್ಲಿ ಸಂಚರಿಸಿದೆ. ಇದು ನನಗೆ ಮರೆಯಲಾಗದ ಅನುಭವ. ಈ ಹಾರಾಟವು, ರಾಷ್ಟ್ರದ ರಕ್ಷಣಾ ಸಾಮರ್ಥ್ಯದ ಬಗ್ಗೆ ನನ್ನಲ್ಲಿ ಹೊಸ ಹೆಮ್ಮೆಯ ಭಾವ ಮೂಡಿಸಿದೆ. ಇದಕ್ಕಾಗಿ ಐಎಎಫ್ ಮತ್ತು ಅಂಬಾಲದ ವಾಯುಪಡೆ ನಿಲ್ದಾಣದ ತಂಡವನ್ನು ನಾನು ಅಭಿನಂದಿಸುತ್ತೇನೆ’ ಎಂದು ಟಿಪ್ಪಣಿ ಬರೆದಿದ್ದಾರೆ.

ಶಿವಾಂಗಿಯೊಂದಿಗೆ ಫೋಟೊ

ದ್ರೌಪದಿ ಮುರ್ಮು ಅವರು ರಫೇಲ್ ವಿಮಾನದಲ್ಲಿ ಹಾರಾಟ ಆರಂಭಿಸುವ ಮುನ್ನ, ದೇಶದ ಮೊದಲ ಮಹಿಳಾ ರಫೇಲ್ ಯುದ್ಧ ವಿಮಾನ ಪೈಲಟ್ ಶಿವಾಂಗಿ ಸಿಂಗ್ ಅವರೊಂದಿಗೆ ಫೋಟೊಗೆ ಪೋಸ್ ನೀಡಿದ್ದಾರೆ. ‘ಆಪರೇಷನ್ ಸಿಂಧೂರ್’ ಸಮಯದಲ್ಲಿ ಪಾಕಿಸ್ತಾನದ ಪರ ಸಾಮಾಜಿಕ ಮಾಧ್ಯಮ ನಿರ್ವಹಣಾ ಸಂಸ್ಥೆಯೊಂದು ಶಿವಾನಿ ಸಿಂಗ್ ಅವರನ್ನು ಸೆರೆಹಿಡಿಯಲಾಗಿದೆ ಎಂದು ಹೇಳಿಕೊಂಡಿತ್ತು. ಈ ಹೇಳಿಕೆಯನ್ನು ‘ಫ್ಯಾಕ್ಟ್ ಚೆಕ್’ ನಡೆಸಿದ ಪಿಐಬಿ, ‘ಇದೊಂದು ಸುಳ್ಳು ಹೇಳಿಕೆ’ ಎಂದು ಸ್ಪಷ್ಟಪಡಿಸಿತ್ತು.



ಆಶಿಕಾ ರಂಗನಾಥ್, ದುಷ್ಯಂತ್

'ಗತವೈಭವ'ಕ್ಕೆ ಶಿವರಾಜ್‌ಕುಮಾರ್ ಸಾಥ್

ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ನ.14ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಎರಡನೇ ಹಾಡನ್ನು ನಟ ಶಿವರಾಜ್‌ಕುಮಾರ್ ಇತ್ತೀಚೆಗೆ ರಿಲೀಸ್ ಮಾಡಿದರು.

'ಶಿಪ್ ಸಾಂಗ್' ಶೀರ್ಷಿಕೆಯ ಈ ಹಾಡನ್ನು ಪೋರ್ಚುಗಲ್‌ನಲ್ಲಿ ಹಡಗಿನಲ್ಲಿ ಚಿತ್ರೀಕರಿಸಲಾಗಿದೆ. ಸುನಿ ಅವರೇ ಬರೆದಿರುವ ಈ ಹಾಡನ್ನು ಕೈಲಾಶ್ ಖೇರ್, ಚೇತನ್ ನಾಯಕ್ ಹಾಗೂ ಚಿನ್ಮಯಿ ಎಲ್. ಹಾಡಿದ್ದಾರೆ. ಜೂಡಾ ಸ್ಯಾಂಡಿ ಸಂಗೀತ ಒದಗಿಸಿದ್ದು, ಭೂಷಣ್ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಹಡಗಿನ ಮೇಲೆ ದುಷ್ಯಂತ್ ಹಾಗೂ ಆಶಿಕಾ ರಂಗನಾಥ್ ಹೆಜ್ಜೆ ಹಾಕಿದ್ದಾರೆ.

ಎಲ್ಲಾ ಪ್ರಕಾರದ ಸಿನಿಮಾಗಳ ಪ್ರಯೋಗ ಮಾಡಿರುವ ಸಿಂಪಲ್ ಸುನಿ, ಈ ಸಿನಿಮಾ ಮೂಲಕ ಪ್ರೇಮಕಥೆಯೊಂದನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯಲ್ಲಿ ತೆರೆಗೆ ತರುತ್ತಿದ್ದಾರೆ. ಫ್ಯಾಂಟಸಿ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಈ ಚಿತ್ರದಲ್ಲಿ ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ದುಷ್ಯಂತ್ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಸಿನಿಮಾದಲ್ಲಿ ಅವರೆತ್ತುವ ಅವತಾರಕ್ಕೆ ಪೂರಕವಾಗಿ ಆಶಿಕಾ ಕೂಡಾ ಹಲವು ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಹಾಡು ಬಿಡುಗಡೆ ಮಾಡಿ ಮಾತನಾಡಿದ ಶಿವಣ್ಣ, 'ಗತವೈಭವ ಶೂಟಿಂಗ್ ಸೆಟ್‌ಗೆ ಒಮ್ಮೆ ಹೋಗಿದ್ದೆ. ಸಿಂಪಲ್ ಸುನಿ ಅವರ ಯೋಚನೆ ಚಿಕ್ಕದಿದ್ದರೂ ಸಿನಿಮಾ ನೋಡುವಾಗ ಅದು ದೊಡ್ಡದಾಗಿ ಕಾಣಿಸುತ್ತದೆ. ಅವರ ಚಿತ್ರಗಳಲ್ಲಿ ಕಮರ್ಷಿಯಲ್, ಜೀವನದ ಮೌಲ್ಯ, ಮೇಕಿಂಗ್ ಅದ್ಭುತವಾಗಿರುತ್ತದೆ. ಇಂದಿನ ಟ್ರೆಂಡ್‌ಗೆ ತಕ್ಕಂತೆ ಅಚ್ಚುಕಟ್ಟಾಗಿ ಸಿನಿಮಾ ಮಾಡುತ್ತಾರೆ. ಚಿತ್ರದ ಸಂಗೀತ ಹಾಗೂ ಛಾಯಾಚಿತ್ರಗ್ರಹಣ ಚೆನ್ನಾಗಿದೆ' ಎಂದರು.

ಮಾತಾ ಮೂವಿ ಮೇಕರ್ಸ್ ಹಾಗೂ ಸುನಿ ಈ ಚಿತ್ರ ನಿರ್ಮಾಣ ಮಾಡಿದ್ದು, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ. 'ಬಿಗ್‌ಬಾಸ್' ಖ್ಯಾತಿಯ ಕಿಶನ್ ಬಿಳಗಲಿ 'ಅನಾಮದೇವ' ಎಂಬ ಪಾತ್ರದಲ್ಲಿ ಈ ಸಿನಿಮಾದಲ್ಲಿ ನಟಿಸಿದ್ದಾರೆ.



ರೇಷ್ಮಾ

ಲವ್ ಯು ಮುದ್ದು ಟ್ರೇಲರ್ ಬಿಡುಗಡೆ



ಸಿದ್ದು ಮೂಲಿಮನಿ

'ಕೆಮಿಸ್ಟ್ರಿ ಆಫ್ ಕರಿಯಪ್ಪ' ನಿರ್ದೇಶಕ ಕುಮಾರ್ ಅವರ ಹೊಸ ಸಿನಿಮಾ 'ಲವ್ ಯು ಮುದ್ದು' ನ.7ರಂದು ತೆರೆಕಾಣುತ್ತಿದ್ದು, ಇತ್ತೀಚೆಗೆ ಸಿನಿಮಾದ ಟ್ರೇಲರ್ ಬಿಡುಗಡೆಯಾಯಿತು. ನಟಿ ಸಂಜನಾ ಆನಂದ್ ಅತಿಥಿಯಾಗಿ ಭಾಗವಹಿಸಿದ್ದರು.

ಪ್ರೀತಿಯನ್ನು ಪಡೆದುಕೊಳ್ಳುವ ಶಕ್ತಿ ಇಲ್ಲದೇ ಇದ್ದರೆ ಪ್ರೀತಿ ಮಾಡಬಾರದು ಎಂಬ ಎಳೆಯನ್ನು ಇಟ್ಟುಕೊಂಡು ಬರುತ್ತಿರುವ ಈ ಸಿನಿಮಾದಲ್ಲಿ ಸಿದ್ದು ಮೂಲಿಮನಿ ನಾಯಕನಾಗಿ ಹಾಗೂ ರೇಷ್ಮಾ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ.

ಟ್ರೇಲರ್ ಬಿಡುಗಡೆಗೊಳಿಸಿ ಮಾತನಾಡಿದ ಸಂಜನಾ ಆನಂದ್, 'ಚಿತ್ರರಂಗಕ್ಕೆ ನನ್ನನ್ನು ಪರಿಚಯಿಸಿದ್ದು ಕುಮಾರ್. ಅವರ ಬರವಣಿಗೆ ತುಂಬಾ ಇಷ್ಟವಾಗುತ್ತದೆ. 'ಕೆಮಿಸ್ಟ್ರಿ ಆಫ್ ಕರಿಯಪ್ಪ' ಎಷ್ಟು ಯಶಸ್ಸು ನೀಡಿತ್ತೋ ಅದರ ನೂರರಷ್ಟು ಯಶಸ್ಸನ್ನು ಈ ಸಿನಿಮಾ ನೀಡಲಿ' ಎಂದರು.

'ಇದು ನನ್ನ ಐದನೇ ಸಿನಿಮಾ. ಮಹಾರಾಷ್ಟ್ರದಲ್ಲಿ ನಡೆದ ಘಟನೆ ಇಟ್ಟುಕೊಂಡು ಸಿನಿಮಾ ಕಥೆ ಹೆಣೆಯಲಾಗಿದೆ. ಮನಸ್ಸಿಗೆ ಮುಟ್ಟುವ ಕಥೆ ಇದರಲ್ಲಿದೆ' ಎನ್ನುತ್ತಾರೆ ಕುಮಾರ್.

ಸಿನಿಮಾದಲ್ಲಿ ರಾಜೇಶ್ ನಟರಂಗ, ತಬಲಾ ನಾಣಿ, ಗಿರೀಶ್ ಶಿವಣ್ಣ, ಶ್ರೀವತ್ಸ ಮತ್ತು ಸ್ವಾತಿ ನಟಿಸಿದ್ದಾರೆ. ಕಿಶನ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಿಶನ್ ಟಿ.ಎನ್. ಚಿತ್ರ ನಿರ್ಮಾಣ ಮಾಡಿದ್ದಾರೆ. ಕೃಷ್ಣ ದೀಪಕ್ ಛಾಯಾಚಿತ್ರಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ ನಿರ್ದೇಶನ ಹಾಗೂ ಸಿ.ಎಸ್.ದೀಪು ಸಂಕಲನ ಚಿತ್ರಕ್ಕಿದೆ. ಜಗದೀಶ್ ಫಿಲ್ಮಂ ಚಿತ್ರವನ್ನು ರಾಜ್ಯದಾದ್ಯಂತ ವಿತರಣೆ ಮಾಡುತ್ತಿದೆ.

ನವೆಂಬರ್‌ನಲ್ಲಿ 'ಮೆಜೆಸ್ಟಿಕ್–2' ತೆರೆಗೆ



ಸಂಹಿತಾ ವಿನ್ಯಾ, ಭರತ್ ಕುಮಾರ್

ಅಮ್ಮಾ ಎಂಟರ್‌ಪ್ರೈಸಸ್ ಮೂಲಕ ಎಚ್.ಆನಂದಪ್ಪ ನಿರ್ಮಿಸಿರುವ 'ಮೆಜೆಸ್ಟಿಕ್-2' ಸಿನಿಮಾ ನವೆಂಬರ್‌ನಲ್ಲಿ ತೆರೆಕಾಣಲಿದೆ. ನಿರ್ಮಾಪಕ ಶಿಲ್ಪಾ ಶ್ರೀನಿವಾಸ್ ಪುತ್ರ ಭರತ್ ಕುಮಾರ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ.

ನಟಿ ಶ್ರುತಿ ಅವರು ನಾಯಕನ ತಾಯಿ ಪಾತ್ರವನ್ನು ನಿಭಾಯಿಸಿದ್ದಾರೆ. ಈಗಾಗಲೇ ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿವೆ ಎಂದಿದೆ ಚಿತ್ರತಂಡ. ಇತ್ತೀಚೆಗಷ್ಟೇ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ನೀಡಿದೆ.

ಈ ಚಿತ್ರಕ್ಕೆ ರಾಮು ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಭರತ್ ಕುಮಾರ್‌ಗೆ ಜೋಡಿಯಾಗಿ ಸಂಹಿತಾ ವಿನ್ಯಾ ನಟಿಸಿದ್ದಾರೆ. 'ಈಗಿನ ಮೆಜೆಸ್ಟಿಕ್ ಪ್ರದೇಶ ಹೇಗಿದೆ, ಅಲ್ಲಿ ನಡೆಯುವ ದಂಧೆಗಳು, ಅಕ್ರಮ ಚಟುವಟಿಕೆಗಳು ಹಾಗೂ ಅಲ್ಲಿ ರೌಡಿಸಂ ಹೇಗೆ ನಡೆಯುತ್ತದೆ ಎನ್ನುವುದನ್ನು ಅಲ್ಲಿಯೇ ಹುಟ್ಟಿ ಬೆಳೆದ ಹುಡುಗನೊಬ್ಬನ ಕಥೆಯ ಮೂಲಕ ಚಿತ್ರದಲ್ಲಿ ಹೇಳಲಾಗಿದೆ' ಎಂದಿದ್ದಾರೆ ರಾಮು.

ವಿಶೇಷವಾಗಿ ನಟಿ ಮಾಲಾಶ್ರೀ ನಾಯಕನ ಪ್ರವೇಶದ ಹಾಡಿನಲ್ಲಿ ನಟಿಸಿದ್ದಾರೆ. ವಿನು ಮನಸು ಸಂಗೀತ ನಿರ್ದೇಶನ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ, ಚಿನ್ನಯ್ಯ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ನ.14ಕ್ಕೆ ಕೈಟ್ ಬ್ರದರ್ಸ್ ರಿಲೀಸ್

ಭಜರಂಗ ಸಿನಿಮಾ ಲಾಂಛನದಲ್ಲಿ ವಿರೇನ್ ಸಾಗರ್ ಬಗಾಡೆ ನಿರ್ದೇಶಿಸಿರುವ 'ಕೈಟ್ ಬ್ರದರ್ಸ್' ಚಿತ್ರವು ನ.14ರಂದು ಬಿಡುಗಡೆಯಾಗಲಿದೆ.

ಮಂಜುನಾಥ್ ಬಿ.ಎಸ್, ರಜನಿಕಾಂತ್ ರಾವ್ ಹಾಗೂ ಮಂಜುನಾಥ್ ಬಗಾಡೆ ಈ ಸಿನಿಮಾವನ್ನು ನಿರ್ಮಿಸಿದ್ದಾರೆ.

ಚಿತ್ರದ ಕುರಿತು ಮಾಹಿತಿ ನೀಡಿದ ವಿರೇನ್, 'ಇದು ಮಕ್ಕಳ ಚಿತ್ರವಾದರೂ ಎಲ್ಲಾ ವಯಸ್ಸಿನವರೂ ನೋಡಬೇಕಾದ ಸಂದೇಶವಿರುವ ಚಿತ್ರ. ಹಳೆಯ ಸರ್ಕಾರಿ ಶಾಲೆಗಳನ್ನು ಸರ್ಕಾರವೇ ದುರಸ್ತಿ ಮಾಡಿಸಲಿ ಎಂದು ಸಮಾಜ ಕಾಯಬಾರದು. ಆ ಶಾಲೆಯಲ್ಲಿ ಕಲಿತವರು ಸಶಕ್ತರಾಗಿ ಬದುಕು ರೂಪಿಸಿಕೊಂಡಾಗ ಆ ಶಾಲೆಯನ್ನು ಅಭಿವೃದ್ಧಿಗೊಳಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು. ಇದೇ ವಿಷಯವನ್ನು ಇಟ್ಟುಕೊಂಡು ಚಿತ್ರದ ಕಥೆ ಹೆಣೆಯಲಾಗಿದೆ. ಇಲ್ಲಿ ಇಬ್ಬರು ವಿದ್ಯಾರ್ಥಿಗಳು ಅಹಮದಾಬಾದ್‌ನಲ್ಲಿ ನಡೆಯುವ ಗಾಳಿಪಟ ಸ್ಪರ್ಧೆಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ನಡೆಯುವ ಘಟನೆಗಳ ಮೇಲೆ ಕಥೆಯಿದೆ. ಅಲ್ಲಿ ಗೆದ್ದ ಹಣದಿಂದ ಶಾಲೆಯ ದುರಸ್ತಿ ಮಾಡಿಸುತ್ತಾರೆ. ಹಾಗಾಗಿ ಚಿತ್ರಕ್ಕೆ ಈ ಶೀರ್ಷಿಕೆ ಇಡಲಾಗಿದೆ. ಚಿತ್ರದಲ್ಲಿ ಪ್ರಣಿಲ್ ನಾಡಗೀರ್, ಸಮರ್ಥ ಆಶಿ, ವಿನೋದ್ ಬಗಾಡೆ, ಅನಂತ ದೇಶಪಾಂಡೆ, ಪ್ರಭು ಹಂಚಿನಾಳ, ಶ್ರೇಯಾ ಹರಿಹರ, ರಾಜೀವ್ ಸಿಂಗ್ ಹಲವಾಯಿ ಅಭಿನಯಿಸಿದ್ದಾರೆ' ಎಂದರು.

ಚಿತ್ರಕ್ಕೆ ಅನೀಶ್ ಚೆರಿಯನ್ ಸಂಗೀತ, ಅಶೋಕ್ ಕಶ್ಯಪ್ ಛಾಯಾಚಿತ್ರಗ್ರಹಣವಿದೆ. ಧಾರವಾಡದಲ್ಲೇ ಹೆಚ್ಚಿನ ಚಿತ್ರೀಕರಣ ನಡೆದಿದೆ. 'ನಾನು ಈವರೆಗೂ ಅರವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಛಾಯಾಚಿತ್ರಗ್ರಹಣ ಮಾಡಿದ್ದೇನೆ. ಈ ಸಿನಿಮಾದಲ್ಲಿ ಒಳ್ಳೆಯ ಕಥೆ ಮಾಡಿದ್ದಾರೆ. ಸಿನಿಮಾದಲ್ಲಿ ಕೆಲಸ ಮಾಡಿದ ಖುಷಿಯಿದೆ' ಎಂದರು ಅಶೋಕ್ ಕಶ್ಯಪ್.



ಅಶೋಕ್ ಕಶ್ಯಪ್, ವಿರೇನ್ ಸಾಗರ್ ಬಗಾಡೆ, ವಿನೋದ್ ಬಗಾಡೆ

ರಾಹುಲ್ ಹೇಳಿಕೆಗೆ ಬಿಜೆಪಿ ವಾಗ್ದಾಳಿ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಬಿಹಾರ ವಿಧಾನಸಭೆ ಚುನಾವಣಾ ಕಣ ರಂಗೇರುತ್ತಿದೆ. 'ಇಂಡಿಯಾ' ಕೂಟ ಮತ್ತು ಎನ್‌ಡಿಎ ನಡುವೆ ಹೇಳಿಕೆ–ಪ್ರತಿಹೇಳಿಕೆಗಳು ಆರಂಭಗೊಂಡಿವೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಪ್ರಚಾರ ಆರಂಭಿಸಿದ್ದಾರೆ. 'ಇಂಡಿಯಾ'ದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಅವರೊಂದಿಗೆ ಮುಜಾಫರನಗರ ಮತ್ತು ದರ್ಭಂಗಾದಲ್ಲಿ ಪ್ರಚಾರ ಸಭೆ ನಡೆಸಿದ್ದಾರೆ. ಪ್ರಧಾನಿ ಮೋದಿ ಅವರ ಕುರಿತು ರಾಹುಲ್ ಅವರು ಮಾಡಿದ ಭಾಷಣವು ಚುನಾವಣಾ ಪ್ರಚಾರದ ಕಾವು ಹೆಚ್ಚಿಸಿದೆ. ಅತ್ತ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ ಸಿಂಗ್ ಪ್ರಚಾರ ನಡೆಸಿದ್ದು, ಕಾಂಗ್ರೆಸ್ ಮತ್ತು ಆರ್‌ಜೆಡಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ

'ಮತಕ್ಕಾಗಿ ಮೋದಿ ಕುಣಿಯಲೂ ಸಿದ್ಧ'




'ಪ್ರಧಾನಿ ಮೋದಿ ಅವರಿಗೆ ನಿಮ್ಮ ಮತಗಳು ಬೇಕಷ್ಟೆ. ಇದಕ್ಕಾಗಿ ಅವರ ಏನು ಬೇಕಿದ್ದರೂ ಮಾಡುತ್ತಾರೆ. ಇಂಥದ್ದೊಂದು ನಾಟಕವಾಡಿ ನಾವು ನಿಮಗೆ ಮತ ನೀಡುತ್ತೇವೆ ಎಂದು ಅವರಿಗೆ ಹೇಳಿ. ಅವರು ಅದನ್ನು ಮಾಡುತ್ತಾರೆ. ನೋಡಿ ಸ್ವಾಮಿ, ಮೋದಿ ಅವರೇ ನೀವು ವೇದಿಕೆ ಮೇಲೆ ಬಂದು ಭಾಷಣ ಮಾಡಬೇಡಿ, ಕುಣಿಯಿರಿ ಎಂದು ಹೇಳಿ ನೋಡಿ, ಅದನ್ನೂ ಅವರು ಮಾಡುತ್ತಾರೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

'ಛತ್ ಪೂಜೆಯ ಸಮಯದಲ್ಲಿ ನಾನು ಯಮುನೆಯಲ್ಲಿ ಮಿಂದೇಳುತ್ತೇನೆ ಎಂದು ಮೋದಿ ಹೇಳಿದರು. ಒಂದು ಕಡೆ ಮಾಲಿನ್ಯಯುಕ್ತ ಯಮುನೆ. ಆ ನೀರಿನಲ್ಲಿ ಮುಳುಗಿದರೆ ನಿಮಗೆ ಅಲ್ಲಿಯೇ ರೋಗ ಬರುತ್ತದೆ. ಇನ್ನೊಂದು ಕಡೆ ಮೋದಿ ಅವರಿಗಾಗಿ ಸಣ್ಣದೊಂದು ಈಜುಕೊಳ. ಇವೆಲ್ಲವೂ ಅವರ ನಾಟಕ. ಮಾಧ್ಯಮದವರು ಕ್ಯಾಮೆರಾ ಹಿಡಿದು ಬರುತ್ತಾರೆ. ನೋಡಿ, ನೋಡಿ ಮೋದಿ ಅವರು ಯಮುನೆಯಲ್ಲಿ ಸ್ನಾನ ಮಾಡುತ್ತಾರೆ ಎನ್ನುತ್ತಾರೆ. ಯಾರೋ ಈ ಕೊಳಕ್ಕೆ ಸ್ವಚ್ಛ ನೀರು ಬಿಡುತ್ತಿದ್ದ ಪೈಪ್‌ನ ಫೋಟೊ ತೆಗೆದುಬಿಟ್ಟರು. ಆಮೇಲೆ ಮೋದಿ ಅವರು ಅಯ್ಯೋ ನಾನು ಯಮುನೆಯಲ್ಲಿ ಸ್ನಾನ ಮಾಡುವುದಿಲ್ಲ ಎನ್ನುತ್ತಾರೆ' ಎಂದು ಲೇವಡಿ ಮಾಡಿದರು.

'ಮೋದಿ ಅವರು ನಿಮಗೆ ಕಡಿಮೆ ಹಣದಲ್ಲಿ ಇಂಟರ್‌ನೆಟ್ ನೀಡಿದೆ. ಬಡವರಿಗೂ ಸಾಮಾಜಿಕ ಮಾಧ್ಯಮ ತಲುಪಿತು ಎನ್ನುತ್ತಾರೆ. ಆದರೆ, ಅವರು ಟೆಲಿಕಾಂ ಉದ್ಯಮವನ್ನು ಅಂಬಾನಿ ಅವರಿಗೆ ಮಾತ್ರ ನೀಡಿದರು. ಇದನ್ನು ಅವರು ಹೇಳು ವುದಿಲ್ಲ. ನೀವು ರೀಲ್ಸ್ ನೋಡಿಕೊಂಡು ಇರಬೇಕು. ಯಾಕೆಂದರೆ ಯುವಕರಿಗೆ ಉದ್ಯೋಗ ನೀಡಲು ಅವರಿಗೆ ಸಾಧ್ಯವಿಲ್ಲ. ರೀಲ್ಸ್ ನೋಡದೇ ಹೋದರೆ ನೀವು ಪ್ರಧಾನಿ, ನಿತೀಶ್ ಮನೆ ಮುಂದೆ ಉದ್ಯೋಗಕ್ಕಾಗಿ ಪ್ರತಿಭಟಿಸುತ್ತೀರಿ' ಎಂದರು.

'ಮಹಾಘಟಬಂಧನ ಅಲ್ಲ, ಕಳ್ಳರ ಕೂಟ'




ದರ್ಭಂಗಾ/ಸಮಷ್ಟಿಪುರ/ಬೆಗುಸರಾಯ್: 'ಇಂಡಿಯಾ' ಮೈತ್ರಿಕೂಟ 'ಮಹಾಘಟಬಂಧನ' ಅಲ್ಲ, ಅದು 'ಕಳ್ಳರ ಕೂಟ'ವಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಲೇವಡಿ ಮಾಡಿದ್ದಾರೆ.

ದರ್ಭಂಗಾನಲ್ಲಿ ಆಯೋಜಿಸಿದ್ದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಲಾಲುಪ್ರಸಾದ್ ಅವರು ಮೇವು, ಉದ್ಯೋಗಕ್ಕಾಗಿ ಭೂಮಿ ಹಗರಣಗಳಲ್ಲಿ ಭಾಗಿಯಾಗಿದ್ದಾರೆ. ಕಾಂಗ್ರೆಸ್ ₹12 ಲಕ್ಷ ಕೋಟಿ ಮೊತ್ತದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗಿಯಾಗಿದೆ. ಇದೊಂದು ಕಳ್ಳರ ಮೈತ್ರಿಕೂಟ' ಎಂದು ಅಮಿತ್ ಶಾ ಕರೆದಿದ್ದಾರೆ.

'ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಹಲವು ಯುವಕರಿಗೆ ಟಿಕೆಟ್ ನೀಡಿದೆ. ರಾಜಕೀಯ ಹಿನ್ನೆಲೆ ಇಲ್ಲದ ಮೈಥಿಲಿ ಠಾಕೂರ್ ಅವರಂಥವರನ್ನು ಕಣಕ್ಕಿಳಿಸಿದೆ. ಬದಲಿಗೆ ಲಾಲು ಅವರು ಮಗನನ್ನು ಬಿಹಾರ ರಾಜ್ಯದ ಮುಖ್ಯಮಂತ್ರಿಯಾಗಿಸಲು, ಸೋನಿಯಾಗಾಂಧಿ ಅವರು, ರಾಹುಲ್ ಗಾಂಧಿಯವರನ್ನು ಪ್ರಧಾನ ಮಂತ್ರಿ ಮಾಡಲು ಹೊರಟಿದ್ದಾರೆ. ಆ ಎರಡೂ ಸ್ಥಾನಗಳು ಖಾಲಿ ಇಲ್ಲ' ಎಂದು ಶಾ ಹೇಳಿದ್ದಾರೆ.

'ನೆಹರೂಗೆ ನೈಜ ಗೌರವ'



ಪಟ್ನಾ/ದರ್ಬಾಂಗ್(ಪಿಟಿಐ): 'ನವೆಂಬರ್ 14ರ ಜವಾಹರಲಾಲ್ ನೆಹರೂ ಜನ್ಮದಿನದಂದು ಬಿಹಾರ ಚುನಾವಣೆ ಫಲಿತಾಂಶ ಪ್ರಕಟವಾಗುತ್ತದೆ. ಜನರು ಎನ್‌ಡಿಎ ಮೈತ್ರಿಕೂಟವನ್ನು ಸಂಪೂರ್ಣ ಬಹುಮತದಿಂದ ಅಧಿಕಾರಕ್ಕೆ ತಂದರೆ, ನೆಹರೂ ಅವರಿಗೆ ಜನ್ಮದಿನದಂದು ನೀಡುವ ನೈಜ ಗೌರವವಾಗುತ್ತದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ವ್ಯಂಗ್ಯವಾಡಿದರು. ಬುಧವಾರ ಬರ್ಹ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು 'ನೀವು ಈ ಕಾರ್ಯವನ್ನು ನೆರವೇರಿಸುತ್ತೀರೋ ಇಲ್ಲವೋ?' ಎಂದು ರ‍್ಯಾಲಿಯಲ್ಲಿ ಭಾಗವಹಿಸಿದ್ದ ಜನರನ್ನು ಪ್ರಶ್ನಿಸಿದರು.

'ನೆಹರೂ ಅವರು ನಮ್ಮ ಪಕ್ಷಕ್ಕೆ ಸೇರದವರಿರಬಹುದು, ಅವರ ಸಿದ್ಧಾಂತವನ್ನು ಒಪ್ಪದಿರಬಹುದು. ಆದರೆ, ಅವರು ನಮ್ಮ ದೇಶದ ಮೊದಲ ಪ್ರಧಾನಿಯಾಗಿದ್ದರು. ನಾನು ಅವರನ್ನು ಗೌರವಿಸುತ್ತೇನೆ' ಎಂದು ಹೇಳಿದರು.

> ಛತ್ ಪೂಜಾವು ಬಿಹಾರ ಸಂಸ್ಕೃತಿಯ ಅಸ್ಮಿತೆ. ಇದನ್ನು ಮತ್ತು ಪ್ರಧಾನಿ ಅವರನ್ನೂ ಅವಮಾನಿಸಿರುವುದಕ್ಕಾಗಿ ಮಹಾಮೈತ್ರಿಕೂಟವು ಸೋಲುವಂತೆ ಜನರು ನೋಡಿಕೊಳ್ಳುತ್ತಾರೆ
> **ಸುಧಾಂಶು ತ್ರಿವೇದಿ,** ಬಿಜೆಪಿ ವಕ್ತಾರ

> ಇಂಥ ಹೇಳಿಕೆಗಳು ರಾಹುಲ್ ಅವರ ಊಳಿಗಮಾನ್ಯ ಮನಃಸ್ಥಿತಿ ತೋರಿಸುತ್ತದೆ. ಪ್ರಧಾನಿ ಮತ್ತು ಛತ್ ಪೂಜಾವನ್ನು ರಾಹುಲ್ ಅವಮಾನಿಸಿದ್ದಾರೆ
> **ಧರ್ಮೇಂದ್ರ ಪ್ರಧಾನ್,** ಕೇಂದ್ರ ಶಿಕ್ಷಣ ಸಚಿವ

> ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿ ಕುಟುಂಬಕ್ಕೂ ಸರ್ಕಾರಿ ಕೆಲಸ, ₹500ಕ್ಕೆ ಅಡುಗೆ ಅನಿಲ ಸಿಲಿಂಡರ್ ಮತ್ತು 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್, ಗುತ್ತಿಗೆ ನೌಕರರಿಗೆ ಕಾಯಂ ಉದ್ಯೋಗ ನೀಡುತ್ತೇವೆ
> **ತೇಜಸ್ವಿ,** ಆರ್‌ಜೆಡಿ ಮುಖಂಡ

ಎಸ್‌ಐಆರ್: ತಮಿಳುನಾಡು, ಕೇರಳ ವಿರೋಧ

ಪ್ರಜಾವಾಣಿ ವಾರ್ತೆ/ಪಿಟಿಐ

ತೆಂಕಾಶಿ/ತಿರುವನಂತಪುರ/ನವದೆಹಲಿ: ಚುನಾವಣಾ ಆಯೋಗವು ನ.4ರಿಂದ ನಡೆಸಲಿರುವ ಎರಡನೇ ಹಂತದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ತಮಿಳುನಾಡು ಹಾಗೂ ಕೇರಳ ಸರ್ಕಾರಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ.

'ತಮಿಳುನಾಡಿನಲ್ಲಿ ನ.2ರಂದು ಸರ್ವಪಕ್ಷಗಳ ಸಭೆ ಆಯೋಜಿಸಲಾಗಿದ್ದು, ಎಲ್ಲ ಪಕ್ಷಗಳು ಪಾಲ್ಗೊಳ್ಳಬೇಕು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮನವಿ ಮಾಡಿದ್ದಾರೆ.

ಕೇರಳದಲ್ಲಿ ನ.5ರಂದು ಸಭೆ: ಸಿಪಿಎಂ ನೇತೃತ್ವದ ಎಲ್‌ಡಿಎಫ್ ಸರ್ಕಾರವು ನ.5ರಂದು ಸರ್ವಪಕ್ಷಗಳ ಸಭೆಯನ್ನು ಕರೆದಿದೆ. 'ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂದರ್ಭದಲ್ಲಿ ಎಸ್‌ಐಆರ್ ಜಾರಿಗೊಳಿಸುವುದರಿಂದ ಉಂಟಾಗುವ ಪ್ರಾಯೋಗಿಕ ಸಮಸ್ಯೆಗಳ ಕುರಿತು ಸರ್ವಪಕ್ಷಗಳ ಸಭೆಯಲ್ಲಿ ಚರ್ಚಿಸಲಾಗುವುದು' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ತಿಳಿಸಿದ್ದಾರೆ.

ಕೇರಳ ಮುಖ್ಯ ಚುನಾವಣಾಧಿಕಾರಿ ರತನ್ ಯು. ಕೇಳ್ಕರ್ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಬುಧವಾರ ಸಭೆ ನಡೆಸಿದರು.

'ಈ ವಿಷಯ ನ್ಯಾಯಾಲಯದಲ್ಲಿ ಇರುವಾಗ, ಅನೇಕ ರಾಜ್ಯಗಳಲ್ಲಿ ಎಸ್‌ಐಆರ್ ಜಾರಿಗೆ ಮುಂದಾಗಿರುವುದರ ಹಿಂದೆ ದುರುದ್ದೇಶ ಅಡಗಿದೆ ಎಂದು ಸಿಪಿಎಂ ನಾಯಕ ಎಂ.ವಿ. ಜಯರಾಜನ್, ಕೇರಳ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷ ಸನ್ನಿ ಜೋಸೆಫ್ ಆರೋಪಿಸಿದ್ದಾರೆ.

ಮತದಾನ ಕೇಂದ್ರಗಳ ಸಂಖ್ಯೆ ಹೆಚ್ಚಳ

ಎಸ್‌ಐಆರ್ ಬಳಿಕ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಬಿಹಾರದ ಮಾದರಿಯಲ್ಲಿ ಹೆಚ್ಚಿನ ಮತಗಟ್ಟೆಗಳನ್ನು ಹೊಂದಲಿವೆ. ಅಲ್ಲಿ ಈ ಹಿಂದೆ ಇದ್ದ ಮತಗಟ್ಟೆಗಳ ಸಂಖ್ಯೆಯು 77,895ರಿಂದ 90,712ಕ್ಕೆ ಏರಿಕೆಯಾಗಲಿದೆ. ಮತದಾರರು ತಮ್ಮ ಮತ ದಾನದ ಹಕ್ಕನ್ನು ಚಲಾಯಿಸಲು ಸರದಿಯಲ್ಲಿ ಕಾಯುವ ಸಮಯ ಕಡಿಮೆಗೊಳಿಸುತ್ತದೆ.

> 'ಎಸ್‌ಐಆರ್ ಚುನಾವಣೆಯಲ್ಲಿ ವಂಚನೆ ಎಸಗಲು ಇರುವ ಏಕೈಕ ಮಾರ್ಗ. ಇದನ್ನು ನಾವು ಬಲವಾಗಿ ವಿರೋಧಿಸುತ್ತೇವೆ
> **ಪ್ರಿಯಾಂಕಾ ಗಾಂಧಿ ವಾದ್ರಾ,** ಸಂಸದೆ

ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ಭಾರಿ ಮಳೆ: ಮೂವರು ಸಾವು

'ಮೊಂಥಾ' ಚಂಡಮಾರುತ: ತಗ್ಗಿದ ಅಬ್ಬರ

ಪ್ರಜಾವಾಣಿ ವಾರ್ತೆ/ಪಿಟಿಐ

ಅಮರಾವತಿ/ಭುವನೇಶ್ವರ/ಹೈದರಾಬಾದ್: 'ಮೊಂಥಾ ಚಂಡಮಾರುತದ ತೀವ್ರತೆ ತಗ್ಗಿದೆ ಎಂದು' ಎಂದು ಭಾರತೀಯ ಹವಾಮಾನ ಇಲಾಖೆ ಬುಧವಾರ ಹೇಳಿದೆ. ಚಂಡಮಾರುತದ ಪರಿಣಾಮವು ಆಂಧ್ರಪ್ರದೇಶ ಮತ್ತು ತೆಲಂಗಾಣಕ್ಕೆ ತೀವ್ರವಾಗಿ ತಟ್ಟಿದೆ. ಒಡಿಶಾದಲ್ಲಿ ಭೂಕುಸಿತ ಸಂಭವಿಸಿದೆ, ಜಾರ್ಖಂಡ್‌ನಲ್ಲಿ ಮಳೆಯಾಗಿದೆ.

'ಮೊಂಥಾ' ಕಾರಣದಿಂದಾಗಿ ರಾಜ್ಯದಲ್ಲಿ ಇಬ್ಬರು ಮೃತಪಟ್ಟಿದ್ದಾರೆ' ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದರು. ತೆಲಂಗಾಣದ ಸೂರ್ಯಪೇಟೆ ಜಿಲ್ಲೆಯಲ್ಲಿ ತಲೆ ಮೇಲೆ ಮರ ಬಿದ್ದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಖಮ್ಮಂ ಜಿಲ್ಲೆಯಲ್ಲಿ ಟ್ರಕ್‌ನಲ್ಲಿ ಸಂಚರಿಸುತ್ತಿದ್ದಾಗ ಮಳೆ ನೀರಿನಲ್ಲಿ ಚಾಲಕ ಕೊಚ್ಚಿ ಹೋಗಿದ್ದಾರೆ.



ಚಂಡಮಾರುತದಿಂದ ಆಂಧ್ರ ಪ್ರದೇಶದಲ್ಲಿ ಸಂಭವಿಸಿದ ಹಾನಿ –ಪಿಟಿಐ ಚಿತ್ರ

ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ಭಾರಿ ಮಳೆಯಾಗಿದೆ. ತೆಲಂಗಾಣದ 8 ಜಿಲ್ಲೆಗಳಲ್ಲಿ ಹವಾಮಾನ ಇಲಾಖೆಯು ರೆಡ್ ಅಲರ್ಟ್ ಘೋಷಿಸಿದೆ.

ತೀವ್ರ ಮಳೆಗೆ ಒಳಗಾದ ಜಿಲ್ಲೆಗಳಲ್ಲಿ ಮುಖ್ಯಮಂತ್ರಿ ನಾಯ್ಡು ಅವರು ವೈಮಾನಿಕ ಸಮೀಕ್ಷೆ ನಡೆಸಿದರು. ವೇಗದ ಗಾಳಿ ಬೀಸಿದ್ದರಿಂದ ಆಂಧ್ರದಲ್ಲಿ ಸಾವಿರಾರು ಮರಗಳು ಧರೆಗುರುಳಿವೆ. ನೂರಾರು ವಿದ್ಯುತ್ ಕಂಬಗಳು ಬಿದ್ದಿವೆ. '380 ಕಿ.ಮೀ ರಸ್ತೆಗಳು, 14 ಸೇತುವೆಗಳಿಗೆ ಹಾನಿಯಾಗಿವೆ' ಎಂದು ನಾಯ್ಡು ಮಾಹಿತಿ ನೀಡಿದರು. 'ಒಡಿಶಾದಲ್ಲಿ 'ಮೊಂಥಾ'ದ ಪರಿಣಾಮವು ಹೆಚ್ಚೇನು ಆಗಿಲ್ಲ' ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಹೇಳಿದರು.

50 ಕೆ.ಜಿ ಅಕ್ಕಿ ವಿತರಣೆ

- ಮೀನುಗಾರರು ಮತ್ತು ನೇಕಾರರಿಗೆ ಬುಧವಾರದಿಂದ ₹50 ಕೆ.ಜಿ ಅಕ್ಕಿ, 1 ಕೆ.ಜಿ ಬೇಳೆ, 1 ಲೀಟರ್ ಅಡುಗೆ ಎಣ್ಣೆ, 1 ಕೆ.ಜಿ. ಈರುಳ್ಳಿ, 1 ಕೆ.ಜಿ. ಆಲೂಗೆಡ್ಡೆ ಮತ್ತು 1 ಕೆ.ಜಿ. ಸಕ್ಕರೆ ನೀಡಲು ಆಂಧ್ರ ಸರ್ಕಾರ ನಿರ್ಧರಿಸಿದೆ

ಬೆಳೆ ಹಾನಿ

- ಆಂಧ್ರದ ಭತ್ತ, ಹತ್ತಿ, ಜೋಳ ಮತ್ತು ಹೆಸರುಕಾಳು ಬೆಳೆಗಳಿಗೆ ಮತ್ತು ತೋಟಗಾರಿಕಾ ಬೆಳೆಗಳಿಗೆ ತೀವ್ರ ಹಾನಿಯಾಗಿದೆ. 87 ಸಾವಿರ ಹೆಕ್ಟೇರ್‌ನಷ್ಟು ಬೆಳೆಗಳು ನಾಶವಾಗಿವೆ. 59 ಸಾವಿರ ಹೆಕ್ಟೇರ್ ವಿಸ್ತೀರ್ಣದಲ್ಲಿನ ಬೆಳೆಗಳು ನೀರಿನಲ್ಲಿ ಮುಳುಗಿವೆ. ವೇಗದ ಗಾಳಿಗೆ ಕೊನಸೀಮಾ ಜಿಲ್ಲೆಯಲ್ಲಿನ ಭತ್ತ ಮತ್ತು ಬಾಳೆಮರಗಳು ನೆಲಸಮವಾಗಿವೆ
- ಮಳೆಯ ಕಾರಣ ಭತ್ತ ಮತ್ತು ಹತ್ತಿ ಬೆಳೆಗಳಿಗೆ ಆಗುವ ಹಾನಿಯನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಅಧಿಕಾರಿಗಳಿಗೆ ಸೂಚಿಸಿದರುಜನ

ಜೀವನ ಅಸ್ತವ್ಯಸ್ತ

- ತೆಲಂಗಾಣದ ನಲ್ಗೊಂಡದಲ್ಲಿ ಸರ್ಕಾರಿ ಗುರುಕುಲ ಶಾಲೆಗೆ ನೀರು ನುಗ್ಗಿದ್ದರಿಂದ 500 ವಿದ್ಯಾರ್ಥಿಗಳು ಮತ್ತು 26 ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದ ಸಿಬ್ಬಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು. ತೀವ್ರ ಮಳೆಯಾದ ಜಿಲ್ಲೆಗಳಲ್ಲಿನ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿತ್ತು. ಹಲವು ರೈಲುಗಳ ಸಂಚಾರ ಸ್ಥಗಿತಗೊಳಿಸಲಾಗಿತ್ತು

ಕೌರ್ ಪಡೆಯ ಕನಸಿಗೆ ಆಸ್ಟ್ರೇಲಿಯಾ ಸವಾಲು

ಮಹಿಳಾ ವಿಶ್ವಕಪ್ ಸೆಮಿಫೈನಲ್ ಇಂದು: ಭಾರತ– ಅಲೀಸಾ ಪಡೆ ಮುಖಾಮುಖಿ • ಶಫಾಲಿ ವರ್ಮಾ ಮೇಲೆ ಕಣ್ಣು



ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ ಪಿಟಿಐ ಚಿತ್ರಗಳು

ನವಿ ಮುಂಬೈ (ಪಿಟಿಐ): ಆತಿಥೇಯ ಭಾರತ ಮಹಿಳಾ ತಂಡವು ಗುರುವಾರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಏಳು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾದ ಸವಾಲನ್ನು ಎದುರಿಸಲಿದೆ.

ಚೊಚ್ಚಲ ವಿಶ್ವಕಪ್ ಜಯಿಸುವ ಕನಸು ಕಾಣುತ್ತಿರುವ ಹರ್ಮನ್‌ಪ್ರೀತ್ ಕೌರ್ ಬಳಗವು ಈ ಕಠಿಣ ಹಾದಿಯನ್ನು ಮೀರಿ ಫೈನಲ್ ಪ್ರವೇಶಿಸಬೇಕಿದೆ. ಪ್ರಸಕ್ತ ಟೂರ್ನಿಯಲ್ಲಿ ಆಸ್ಟ್ರೇಲಿಯಾ ತಂಡವು ಅಮೋಘ ಆಟವಾಡಿ ನಾಲ್ಕರ ಘಟ್ಟಕ್ಕೆ ಬಂದಿದೆ. ಆದರೆ ಭಾರತ ತಂಡವು ಏಳುಬೀಳುಗಳನ್ನು ಕಂಡು ಇಲ್ಲಿಗೆ ಬಂದಿದೆ.



ಅಲೀಸಾ ಹೀಲಿ



ಶಫಾಲಿ

ಎಂಟು ವರ್ಷಗಳ ಹಿಂದೆ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾದ ಎದುರು 115 ಎಸೆತಗಳಲ್ಲಿ ಅಜೇಯ 171 ರನ್ ಗಳಿಸಿದ್ದ ಹರ್ಮನ್‌ಪ್ರೀತ್ ಕೌರ್ ಅವರ ಆಟ ಇಂದಿಗೂ ಕ್ರಿಕೆಟ್ ಪ್ರಿಯರ ಮನದಲ್ಲಿದೆ. ಆ ಪಂದ್ಯದಲ್ಲಿ ಭಾರತ ಗೆದ್ದು ಫೈನಲ್ ಪ್ರವೇಶಿಸಿತ್ತು. ಅಂತಹದೇ ಮ್ಯಾಜಿಕ್ ಈ ಬಾರಿಯೂ ನಡೆಯುವುದೇ ಎಂಬ ನಿರೀಕ್ಷೆ ಗರಿಗೆದರಿದೆ.

ಬಲಾಢ್ಯ ಆಸ್ಟ್ರೇಲಿಯಾ ವಿರುದ್ಧ ಜಯಿಸುವುದೇ ಒಂದು ದೊಡ್ಡ ಸಾಧನೆ. ಲೀಗ್ ಹಂತದಲ್ಲಿ ಭಾರತ ತಂಡಕ್ಕೆ ಸೋಲುಣಿಸಿದ್ದ ಆಸ್ಟ್ರೇಲಿಯಾ ಸರ್ವ ರೀತಿಯಿಂದಲೂ ಬಲಾಢ್ಯವಾಗಿದೆ.

ಭಾರತ ತಂಡಕ್ಕೆ ಸ್ಮೃತಿ ಮಂದಾನ ಜೊತೆಗೆ ಉತ್ತಮ ಆರಂಭ ನೀಡುತ್ತಿದ್ದ ಪ್ರತೀಕಾ ರಾವಲ್ ಗಾಯಗೊಂಡು ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅವರ ಸ್ಥಾನಕ್ಕೆ ಬಂದಿರುವ ಶಫಾಲಿ ವರ್ಮಾ ಅವರ ಮೇಲೆ ಈಗ ಹೆಚ್ಚಿನ ಹೊಣೆಗಾರಿಕೆ ಇದೆ. ಸ್ಮೃತಿ, ಹರ್ಮನ್‌ಪ್ರೀತ್, ಹರ್ಲೀನ್ ಡಿಯೊಲ್, ರಿಚಾ ಘೋಷ್, ಜೆಮಿಮಾ ರಾಡ್ರಿಗಸ್, ಆಲ್‌ರೌಂಡರ್ ದೀಪ್ತಿ ಶರ್ಮಾ, ಅಮನ್ಜೋತ್ ಕೌರ್, ಸ್ನೇಹ ರಾಣಾ ಅವರೆಲ್ಲರಿಗೂ ತಮ್ಮ ಸಾಮರ್ಥ್ಯ ಹಾಗೂ ಅನುಭವವನ್ನು ಪಣಕ್ಕೊಡ್ಡುವ ಪಂದ್ಯ ಇದಾಗಿದೆ.

ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ತಮ್ಮ ನಾಯಕಿ ಹರ್ಮನ್‌ಪ್ರೀತ್ ಅವರಿಗೆ ಟ್ರೋಫಿ ಕಾಣಿಕೆ ನೀಡುವ ಛಲದೊಂದಿಗೆ ಆಡಿದರೆ ತಂಡಕ್ಕೆ ಜಯ ಒಲಿಯುವುದು ಕಷ್ಟವೇನಲ್ಲ. ಆದರೆ ಫೀಲ್ಡಿಂಗ್, ಬೌಲಿಂಗ್ ಮತ್ತು ಬ್ಯಾಟಿಂಗ್ ವಿಭಾಗಗಳಲ್ಲಿ ಒಂದು ಸಣ್ಣಲೋಪವೂ ದುಬಾರಿ ಆಗಬಹುದು.

ಆಸ್ಟ್ರೇಲಿಯಾ ತಂಡದ ನಾಯಕಿ ಅಲೀಸಾ ಹೀಲಿ, ಎಲಿಸ್ ಪೆರಿ, ಬೆತ್ ಮೂನಿ, ಆ್ಯಷ್ಲೆ ಗಾರ್ಡನರ್ ಅವರ ಅಬ್ಬರದ ಬ್ಯಾಟಿಂಗ್‌ಗೆ ಕಡಿವಾಣ ಹಾಕುವುದು ಮುಖ್ಯ. ಅಲ್ಲದೇ ಸ್ಪಿನ್ನರ್ ಅಲನಾ ಕಿಂಗ್, ಸೋಫಿ ಮಾಲಿನ್ ಹಾಗೂ ಕಿಮ್ ಗಾರ್ತ್ ಅವರ ಬೌಲಿಂಗ್ ಎದುರಿಸಿ ನಿಲ್ಲುವ ಸವಾಲು ಕೂಡ ಕೌರ್ ಪಡೆಯ ಮುಂದಿದೆ.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಲಾರಾ ಅಬ್ಬರ: ಫೈನಲ್‌ಗೆ ದಕ್ಷಿಣ ಆಫ್ರಿಕಾ



ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೊಲ್ವಾರ್ಟ್

ಗುವಾಹಟಿ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ನಾಯಕಿ ಬುಧವಾರ ದಾಖಲಿಸಿದ ಲಾರಾ ವೊಲ್ವಾರ್ಟ್ ಅವರು ಗಳಿಸಿದ ಶತಕ ಹಾಗೂ ಮರೈಝಾನ್ ಕಾಪ್ ಅವರ ಅಮೋಘ ಬೌಲಿಂಗ್ ಕ್ರಿಕೆಟ್ ಇತಿಹಾಸದ ಅವಿಸ್ಮರಣೀಯ ಸಂಗತಿಗಳಾಗಿ ದಾಖಲಾದವು. ಅವರ ಆಟದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 125 ರನ್‌ಗಳಿಂದ ಇಂಗ್ಲೆಂಡ್ ವಿರುದ್ಧ ಜಯಭೇರಿ ಬಾರಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಲಾರಾ (169; 143 ಎಸೆತ, 4X20, 6X4) ಅವರ ಅಮೋಘ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 319 ರನ್ ಗಳಿಸಿತು.

ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ತಂಡಕ್ಕೆ ಮರೈಝಾನ್ (20ಕ್ಕೆ5) ಅಡ್ಡಗೋಡೆಯಾದರು. ಇಂಗ್ಲೆಂಡ್ 42.3 ಓವರ್‌ಗಳಲ್ಲಿ 194 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ತಂಡದ ಮೂವರು ಅಗ್ರ ಬ್ಯಾಟರ್‌ಗಳು ಖಾತೆಯನ್ನೇ ತೆರೆಯಲಿಲ್ಲ. ಕೇವಲ 1 ರನ್‌ಗೆ 3 ವಿಕೆಟ್‌ಗಳು ಪತನವಾದವು. ಇದರಿಂದಾಗಿ ತಂಡವು ಅತ್ಯಲ್ಪ ಮೊತ್ತಕ್ಕೆ ಕುಸಿಯುವ ಆತಂಕ ಇತ್ತು.

ಈ ಹಂತದಲ್ಲಿ ನಾಯಕಿ ನ್ಯಾಟ್ ಶಿವರ್ ಬ್ರಂಟ್ (64; 76ಎ, 4X6, 6X1) ಮತ್ತು ಅಲೈಸ್ ಕ್ಯಾಪ್ಸಿ (50; 71ಎ, 4X6) ಅವರು ಅರ್ಧಶತಕ ದಾಖಲಿಸಿದರು. ತಂಡವನ್ನು ಗೆಲುವಿನ ಹಾದಿಗೆ ತರುವ ಪ್ರಯತ್ನ ಮಾಡಿದರು. ಆದರೆ ಸಾಧ್ಯವಾಗಲಿಲ್ಲ. ಬ್ಯಾಟರ್‌ಗಳಿಗೆ ಅಪಾರ ನೆರವು ನೀಡುತ್ತಿದ್ದ ಪಿಚ್‌ನಲ್ಲಿ ಮರೈಝಾನ್ ಯಶಸ್ವಿಯಾಗಿದ್ದು ವಿಶೇಷ.

ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ಮುಖಾಮುಖಿಯಾಗಲಿವೆ. ಅದರಲ್ಲಿ ಗೆದ್ದ ತಂಡವು ದಕ್ಷಿಣ ಆಫ್ರಿಕಾ ತಂಡವನ್ನು ಫೈನಲ್‌ನಲ್ಲಿ ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 319 (ಲಾರಾ ವೊಲ್ವಾರ್ಟ್ 169, ತಾಜ್ಮೀನ್ ಬ್ರಿಟ್ಸ್ 45, ಮರೈಝಾನ್ ಕಾಪ್ 42, ಕ್ಲೊಯೆ ಟ್ರಯನ್ ಔಟಾಗದೇ 33, ಲಾರೆನ್ ಬೆಲ್ 55ಕ್ಕೆ2, ಸೋಫಿ ಎಕ್ಲೆಸ್ಟೋನ್ 44ಕ್ಕೆ4) ಇಂಗ್ಲೆಂಡ್: 42.3 ಓವರ್‌ಗಳಲ್ಲಿ 194 (ನ್ಯಾಟ್ ಶಿವರ್ ಬ್ರಂಟ್ 64, ಅಲಿಸ್ ಕ್ಯಾಪ್ಸಿ 50, ಡ್ಯಾನಿ ವೈಟ್ ಹಾಜ್ 34, ಲಿನ್ಸೆ ಸ್ಮಿತ್ 27, ಮರೈಝಾನ್ ಕಾಪ್ 20ಕ್ಕೆ5, ನದಿನ್ ಡಿ ಕಿರ್ಕ್ 24ಕ್ಕೆ2) ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 125 ರನ್ ಜಯ.

ಪಂದ್ಯದ ಆಟಗಾರ್ತಿ: ಲಾರಾ ವೊಲ್ವಾರ್ಟ್.

ಸ್ಕ್ವಾಷ್: ಸೆಮಿಫೈನಲ್‌ಗೆ ಅನಾಹತ್



ಟೊರಂಟೊ, ಕೆನಡಾ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ಅನಾಹತ್ ಸಿಂಗ್ ಅವರು ಹಾಲಿ ಚಾಂಪಿಯನ್ ಟಿನ್ನೆ ಜೀಲಿಸ್ ಅವರಿಗೆ ಆಘಾತ ನೀಡಿ ಕೆನಡಿಯನ್ ಓಪನ್ ಸ್ಕ್ವಾಷ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಮಂಗಳವಾರ ತಡರಾತ್ರಿ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ್ತಿ ಅನಾಹತ್ 3-0ಯಿಂದ (12-10, 11-9, 11-9) ಬೆಲ್ಜಿಯಂನ ಎರಡನೇ ಶ್ರೇಯಾಂಕದ ಆಟಗಾರ್ತಿಯನ್ನು ನಿರಾಯಾಸವಾಗಿ ಸೋಲಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 43ನೇ ಕ್ರಮಾಂಕದಲ್ಲಿರುವ ಅನಾಹತ್ ಅವರು 36 ನಿಮಿಷ ನಡೆದ ಪಂದ್ಯದಲ್ಲಿ 7ನೇ ಕ್ರಮಾಂಕದ ಜೀಲಿಸ್ ಎದುರು ಸ್ಪಷ್ಟ ಮೇಲುಗೈ ಸಾಧಿಸಿದರು. ಈ ಮೂಲಕ, ಅಗ್ರ 10ರೊಳಗಿನ ಆಟಗಾರ್ತಿಯ ವಿರುದ್ಧ ಇದೇ ಮೊದಲ ಬಾರಿಗೆ ಗೆಲುವು ಸಾಧಿಸಿದರು.

ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ರೋಹಿತ್

ದುಬೈ (ಪಿಟಿಐ): ಭಾರತ ತಂಡದ ನಿಕಟಪೂರ್ವ ನಾಯಕ ರೋಹಿತ್ ಶರ್ಮಾ ಅವರು ಐಸಿಸಿ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಇದೇ ಮೊದಲ ಬಾರಿ ಅಗ್ರಸ್ಥಾನಕ್ಕೇರಿದ್ದಾರೆ.

38 ವರ್ಷ ವಯಸ್ಸಿನ ಮುಂಬೈ ಆಟಗಾರ ರೋಹಿತ್ ಅವರು ಎರಡು ಸ್ಥಾನ ಬಡ್ತಿ ಪಡೆದಿದ್ದಾರೆ. ಅವರ ವೃತ್ತಿಜೀವನದಲ್ಲಿ ಅಗ್ರಸ್ಥಾನಕ್ಕೇರಿದ್ದು ಇದೇ ಮೊದಲು.

ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಅಜೇಯ 121 ರನ್ ಗಳಿಸಿದ್ದರು. ಗೆಲುವಿನ ರೂವಾರಿಯಾಗಿದ್ದರು. ಸರಣಿಶ್ರೇಷ್ಠ ಗೌರವ ಕೂಡ ಗಳಿಸಿದ್ದರು. ರೋಹಿತ್ ಅವರು ಒಟ್ಟು 781 ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದಾರೆ. ರೋಹಿತ್ 2007ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಇತ್ತೀಚೆಗೆ ಅವರು ಟೆಸ್ಟ್ ಮತ್ತು ಟಿ20 ಮಾದರಿಗಳಿಗೆ ನಿವೃತ್ತಿ ಘೋಷಿಸಿದ್ದರು. ಏಕದಿನ ಕ್ರಿಕೆಟ್ ಮಾದರಿಯಲ್ಲಿ ಮಾತ್ರ ಮುಂದುವರಿದಿದ್ದಾರೆ.

ಈ ಸಾಧನೆಯಿಂದಾಗಿ ಅವರು ಐಸಿಸಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದ ಅಫ್ಗಾನಿಸ್ತಾನದ ಇಬ್ರಾಹಿಂ ಝದ್ರಾನ್ ಅವರನ್ನು ಹಿಂದಿಕ್ಕಿದರು. ಭಾರತದ ಶುಭಮನ್ ಗಿಲ್ ಅವರು ಮೂರನೇ ಸ್ಥಾನ ಪಡೆದರು. ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಅವರು ಕ್ರಮವಾಗಿ 6 ಮತ್ತು 9ನೇ ಸ್ಥಾನದಲ್ಲಿದ್ದಾರೆ.

ಹೈಲೊ ಓಪನ್: ಲಕ್ಷ್ಯ ಸೇನ್ ಮುನ್ನಡೆ



ಸಾರ್‌ಬ್ರೂಕನ್ (ಜರ್ಮನಿ): ಭಾರತದ ತಾರೆ ಲಕ್ಷ್ಯ ಸೇನ್ ಅವರು ಬುಧವಾರ ಐದನೇ ಶ್ರೇಯಾಂಕದ ಕ್ರಿಸ್ಟೊ ಪೊಪೋವ್ ಅವರಿಗೆ ಆಘಾತ ನೀಡಿ ಹೈಲೊ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಿಕ್ವಾರ್ಟರ್ ಫೈನಲ್ ತಲುಪಿದರು.

ಲಕ್ಷ್ಯ ಅವರು ಮೊದಲ ಸುತ್ತಿನಲ್ಲಿ 21-16, 22-20ರಿಂದ ತಮಗಿಂತ ಉನ್ನತ ಕ್ರಮಾಂಕದ ಫ್ರೆಂಚ್ ಆಟಗಾರನನ್ನು ಸೋಲಿಸಿದರು.

ಹಾಂಗ್‌ಕಾಂಗ್ ಓಪನ್ ಫೈನಲ್ ತಲುಪಿದ್ದ ಲಕ್ಷ್ಯ ಮುಂದಿನ ಸುತ್ತಿನಲ್ಲಿ ಸ್ವದೇಶದ ಎಸ್. ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಅವರನ್ನು ಎದುರಿಸಲಿದ್ದಾರೆ. ಶಂಕರ್ ಅವರು ಇನ್ನೊಂದು ಪಂದ್ಯದಲ್ಲಿ ಮಲೇಷ್ಯಾದ ಜುನ್ ಹಾವೊ ಲಿಯೊಂಗ್ ಅವರನ್ನು 21-14, 18-21, 21-16ರಿಂದ ಸೋಲಿಸಿದರು.

ಆದರೆ ಮತ್ತೊಬ್ಬ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಮೊದಲ ಸುತ್ತಿನಲ್ಲಿ ಸ್ವದೇಶದ ಕಿರಣ್ ಜಾರ್ಜ್ ಅವರಿಗೆ 19-21, 11-21ರಲ್ಲಿ ಸೋತರು.

ಲಯಕ್ಕೆ ಮರಳುವ ಸಂಕೇತ ರವಾನಿಸಿದ ಸೂರ್ಯ

ಮಳೆಯ ಪಾಲಾದ ಮೊದಲ ಪಂದ್ಯ



ಭಾರತ ತಂಡದ ನಾಯಕ ಸೂರ್ಯಕುಮಾರ್ ಬ್ಯಾಟಿಂಗ್ ಎಎಫ್‌ಪಿ ಚಿತ್ರ

ಕೆನ್‌ಬೆರಾ (ಪಿಟಿಐ): ಈ ವರ್ಷದ ಆರಂಭದಿಂದ ಪರದಾಡುತ್ತಿರುವ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಕೆಲವು ಆಕರ್ಷಕ ಹೊಡೆತಗಳನ್ನು ಬಾರಿಸಿ ಲಯಕ್ಕೆ ಮರಳುವ ಸೂಚನೆ ನೀಡಿದರು. ಆದರೆ ಬುಧವಾರ ಮಳೆ ಮತ್ತು ಪ್ರತಿಕೂಲ ಹವಾಮಾನದಿಂದಾಗಿ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಮೊದಲ ಟಿ20 ಪಂದ್ಯ ಅರ್ಧದಲ್ಲೇ ರದ್ದಾಯಿತು.

ನಾಯಕನ ಜೊತೆ ಉಪನಾಯಕ ಶುಭಮನ್ ಗಿಲ್ (ಅಜೇಯ 37, 20ಎಸೆತ, 4x4, 6x1) ಎಚ್ಚರಿಕೆಮಿಶ್ರಿತ ಆಕ್ರಮಣದ ಆಟವಾಡಿದರು. ಸೂರ್ಯ 24 ಎಸೆತಗಳಲ್ಲಿ ಅಜೇಯ 39 ರನ್ (4x3, 6x2) ಬಾರಿಸಿದರು. ಇವರಿಬ್ಬರು ಮುರಿಯದ ಎರಡನೇ ವಿಕೆಟ್‌ಗೆ 62 ರನ್ ಸೇರಿಸಿದರು. ಇವರಿಬ್ಬರು ದೊಡ್ಡ ಮೊತ್ತದತ್ತ ಸಾಗುವ ಸೂಚನೆ ಕಂಡಾಗ ಮಳೆಯ ಆಟ ಶುರುವಾಯಿತು.

ಆಗ ಭಾರತ 9.4 ಓವರುಗಳಲ್ಲಿ 1 ವಿಕೆಟ್‌ಗೆ 97 ರನ್ ಗಳಿಸಿತ್ತು. ಆ ಹಾದಿಯಲ್ಲಿ ಅಭಿಷೇಕ್ ಶರ್ಮಾ (19, 14ಎ) ಅವರ ವಿಕೆಟ್ ಕಳೆದುಕೊಂಡಿತು.

ಸೂರ್ಯ ಈ ವರ್ಷ ನೂರು ರನ್ ಸಹ ಗಳಿಸಿರಲಿಲ್ಲ. ಅವರ ಸ್ಟ್ರೈಕ್ ರೇಟ್ 110 ಕ್ಕಿಂತ ಕಡಿಮೆಯಿತ್ತು. ಆದರೆ ಈ ಮಹತ್ವದ ಸರಣಿಯ ಮೊದಲ ಪಂದ್ಯದಲ್ಲಿ ಅವರು ತಾವು ವಿಶ್ವದ ಅಗ್ರಮಾನ್ಯ ಆಟಗಾರನಾಗಿರುವುದೇಕೆ ಎಂಬುದನ್ನು ಸಮರ್ಥಿಸುವಂತೆ ಆಡಿದರು. ಹೇಜಲ್‌ವುಡ್ ಎಸೆತದಲ್ಲಿ ಚೆಂಡನ್ನು ಸ್ಕ್ವೇರ್‌ಲೆಗ್‌ನಲ್ಲಿ ಬೌಂಡರಿ ದಾಟಿಸಿದರು.

ನಥಾನ್ ಎಲಿಸ್ ಬೌಲಿಂಗ್‌ನಲ್ಲಿ ಸ್ಕ್ವೇರ್‌ಕಟ್‌ನಲ್ಲಿ ಚೆಂಡನ್ನು ಬೌಂಡರಿಗೆ ಚಿಮ್ಮಿಸಿದ ಅವರು, ಪುಲ್ ಹೊಡೆತದಲ್ಲಿ ಮಿಡ್‌ವಿಕೆಟ್‌ಗೆ ಸಿಕ್ಸರ್ ಎತ್ತಿದರು. ಗಿಲ್ ಕೂಡ ಹಿಂದೆಬೀಳದೇ ಸ್ಪಿನ್ನರ್ ಕುನ್ಹೆಮನ್ ಬೌಲಿಂಗ್‌ನಲ್ಲಿ ಸ್ಲಾಗ್‌ಸ್ವೀಪ್ ಮೂಲಕ ಸಿಕ್ಸರ್ ಎತ್ತಿದರು. ಕೊನೆಯ ಐದು ಓವರುಗಳಲ್ಲಿ (4.4ನೇ ಓವರಿನಿಂದ) ಭಾರತ 54 ರನ್ ಬಾಚಿತು.

ಪ್ರಶಸ್ತಿ ಸುತ್ತಿಗೆ ಪುಣೇರಿ ಪಲ್ಟನ್

ನವದೆಹಲಿ (ಪಿಟಿಐ): ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಪುಣೇರಿ ಪಲ್ಟನ್ ತಂಡವು ಬುಧವಾರ ತೆಲುಗು ಟೈಟನ್ಸ್ ತಂಡವನ್ನು ಮಣಿಸಿ ಪ್ರೊ ಕಬಡ್ಡಿ ಲೀಗ್‌ನಲ್ಲಿ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಅಸ್ಲಾಂ ಇನಾಮದಾರ್ ಬಳಗ 50-45ರಿಂದ ವಿಜಯ್ ಮಲಿಕ್ ಪಡೆಯನ್ನು ಸೋಲಿಸಿತು. ಅದರೊಂದಿಗೆ, ಶುಕ್ರವಾರ ನಡೆಯಲಿರುವ ಫೈನಲ್‌ನಲ್ಲಿ ಪುಣೇರಿ–ದಬಂಗ್ ಡೆಲ್ಲಿ ತಂಡಗಳ ಹಣಾಹಣಿಗೆ ವೇದಿಕೆ ಸಿದ್ಧವಾಯಿತು.

ಆರಂಭದಲ್ಲಿ 1-10ರಿಂದ ಹಿಂದಿದ್ದ ಅಸ್ಲಾಂ ಪಡೆಯು, ವಿರಾಮದ ವೇಳೆಗೆ 20-24ಕ್ಕೆ ಹಿನ್ನಡೆಯನ್ನು ತಗ್ಗಿಸಿಕೊಂಡಿತು. ನಂತರ ಆದಿತ್ಯ ಶಿಂದೆ–ಪಂಕಜ್ ಮೋಹಿತ್ ಜೋಡಿ ಎದುರಾಳಿ ತಂಡದ ಮೇಲೆ ಪ್ರಾಬಲ್ಯ ಸಾಧಿಸಿತು.

ಆದಿತ್ಯ ರೇಡಿಂಗ್‌ನಲ್ಲಿ 21 ಅಂಕ ಬಾಚುವ ಮೂಲಕ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಪಂಕಜ್ 'ಸೂಪರ್ ಟೆನ್' ಸಾಧನೆ ಮಾಡಿದರು. ಟೈಟನ್ಸ್ ತಂಡದ ಭರತ್ ಹೂಡಾ (22 ಪಾಯಿಂಟ್ಸ್) ಎಂದಿನಂತೆ ಉತ್ತಮ ಪ್ರದರ್ಶನ ನೀಡಿದರಾದರೂ, ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ.

ರಿಷಭ್ ಪಂತ್ ಬಳಗಕ್ಕೆ 'ಸತ್ವಪರೀಕ್ಷೆ'

ಭಾರತ 'ಎ'–ದಕ್ಷಿಣ ಆಫ್ರಿಕಾ 'ಎ' ಹಣಾಹಣಿ ಇಂದಿನಿಂದ: ದೇವದತ್ತ ಕಣದಲ್ಲಿ

• ಗಿರೀಶ ದೊಡ್ಡಮನಿ



ಅಭ್ಯಾಸದ ವೇಳೆ ರಿಷಭ್ ಪಂತ್ ಪಿಟಿಐ ಚಿತ್ರ

ಬೆಂಗಳೂರು: ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರು ಕ್ರೀಸ್‌ನಲ್ಲಿದ್ದಾಗ ವೈವಿಧ್ಯಮಯ ಹೊಡೆತಗಳನ್ನು ಕಣ್ತುಂಬಿಕೊಳ್ಳುವುದೇ ಹಬ್ಬವಿದ್ದಂತೆ. ವಿಕೆಟ್‌ಕೀಪಿಂಗ್ ಮಾಡುವಾಗಲೂ ತಮ್ಮ ಹಾಸ್ಯ ಚಟಾಕಿಗಳ ಮೂಲಕ ಬ್ಯಾಟರ್‌ಗಳನ್ನು ಕಿಚಾಯಿಸುತ್ತ, ಸಹ ಆಟಗಾರರನ್ನು ನಗಿಸುವುದು ಅವರ ಹವ್ಯಾಸ.

ಪಂದ್ಯದಲ್ಲಿ ಅವರು ಎಷ್ಟು ರನ್ ಗಳಿಸುತ್ತಾರೆ ಅಥವಾ ಎಷ್ಟು ಕ್ಯಾಚ್ ಪಡೆಯುತ್ತಾರೆ ಎಂಬುದಕ್ಕಿಂತಲೂ ಐದು ಅಥವಾ ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ತಂಡವನ್ನು ಸಂಕಷ್ಟದಿಂದ ಪಾರು ಮಾಡುವ ರೀತಿ ಅನನ್ಯ. ಆದರೆ ಸುಮಾರು ಮೂರು ತಿಂಗಳುಗಳಿಂದ ಅವರ 'ಆಟ–ಹುಡುಗಾಟ'ವನ್ನು ನೋಡುವ ಅವಕಾಶ ಕ್ರಿಕೆಟ್‌ಪ್ರಿಯರಿಗೆ ಲಭಿಸಿರಲಿಲ್ಲ. ಮ್ಯಾಂಚೆಸ್ಟರ್‌ನಲ್ಲಿ ಜುಲೈನಲ್ಲಿ ನಡೆದಿದ್ದ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಬ್ಯಾಟಿಂಗ್ ಮಾಡುವಾಗ ಕಾಲಿಗೆ ಚೆಂಡು ಬಡಿದು ಗಾಯಗೊಂಡಿದ್ದ ಅವರು ಇದೀಗ ಚೇತರಿಸಿಕೊಂಡಿದ್ದಾರೆ. ಗಾಯದಿಂದಾಗಿ ಅವರಿಗೆ ಈಚೆಗೆ ನಡೆದಿದ್ದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲು ಅವಕಾಶ ಲಭಿಸಿರಲಿಲ್ಲ.

ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗಲಿರುವ ದಕ್ಷಿಣ ಆಫ್ರಿಕಾ 'ಎ' ಎದುರಿನ 'ಟೆಸ್ಟ್'ನಲ್ಲಿ 28 ವರ್ಷದ ಪಂತ್ ಭಾರತ 'ಎ' ತಂಡದ ನಾಯಕರಾಗಿ ಕಣಕ್ಕಿಳಿಯಲಿದ್ದಾರೆ.

ನವೆಂಬರ್ 14ರಿಂದ ದಕ್ಷಿಣ ಆಫ್ರಿಕಾ ತಂಡವು ಭಾರತದಲ್ಲಿ ಟೆಸ್ಟ್ ಸರಣಿ ಆಡಲಿದೆ. ಆ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಮರಳಲು ರಿಷಭ್ ಅವರಿಗೆ ದಕ್ಷಿಣ ಆಫ್ರಿಕಾ ಎ ಎದುರಿನ ಎರಡು ಪಂದ್ಯಗಳು ಪೂರ್ವಾಭ್ಯಾಸದ ಕಣಗಳಾಗಿವೆ.

ಈ ತಂಡಕ್ಕೆ ಉಪನಾಯಕರಾಗಿರುವ ಸಾಯಿ ಸುದರ್ಶನ್ ಅವರಿಗೂ ತಮ್ಮ ಬ್ಯಾಟಿಂಗ್ ಕೌಶಲಕ್ಕೆ ಸಾಣೆ ಹಿಡಿಯುವ ಅವಕಾಶ ಇದಾಗಿದೆ. ತಮಿಳುನಾಡಿನ 24 ವರ್ಷದ ಸಾಯಿ ಅವರು ಈಚೆಗೆ ದೆಹಲಿಯಲ್ಲಿ ನಡೆದಿದ್ದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ಆಡಿದ್ದರು. ರಾಷ್ಟ್ರೀಯ ತಂಡದಲ್ಲಿ ಮೂರನೇ ಕ್ರಮಾಂಕದ ಸ್ಥಾನವನ್ನು ತುಂಬುವ ಭರವಸೆ ಮೂಡಿಸಿದ್ದಾರೆ. ಅವರಿಗೆ ಈ ಪಂದ್ಯದಲ್ಲಿ ಕನ್ನಡಿಗ ದೇವದತ್ತ ಪಡಿಕ್ಕಲ್ ಹಾಗೂ ರಜತ್ ಪಾಟೀದಾರ್ ಅವರ ಪೈಪೋಟಿಯೂ ಇದೆ.

ಆಲ್‌ರೌಂಡರ್‌ಗಳಾದ ಹರ್ಷ ದುಬೆ, ತನುಷ್ ಕೋಟ್ಯಾನ್ ಕೂಡ ತಂಡದಲ್ಲಿದ್ದಾರೆ. ವೇಗದ ವಿಭಾಗದ ಹೊಣೆ ಖಲೀಲ್ ಅಹಮದ್, ಅನ್ಷುಲ್ ಕಂಬೋಜ್ ಅವರ ಮೇಲೆ ಬೀಳಲಿದೆ. ಸ್ಪಿನ್ನರ್ ಸಾರಾಂಶ್ ಜೈನ್ ಅವರು ಈಚೆಗೆ ಇದೇ ಮೈದಾನದಲ್ಲಿ ನಡೆದಿದ್ದ ದುಲೀಪ್ ಟ್ರೋಫಿ ಪಂದ್ಯದಲ್ಲಿ ಅಮೋಘವಾಗಿ ಬೌಲಿಂಗ್ ಮಾಡಿದ್ದರು. ಆದ್ದರಿಂದ ಅವರಿಗೂ 11ರ ಬಳಗದಲ್ಲಿ ಆಡುವ ಅವಕಾಶ ಸಿಗಬಹುದು.

ಪ್ರವಾಸಿ ಬಳಗದಲ್ಲಿ ಖ್ಯಾತನಾಮ ಆಟಗಾರರು ಇಲ್ಲ. ಜುಬೇರ್ ಹಮ್ಜಾ ಅವರು ಲಯಕ್ಕೆ ಮರಳುವ ನಿರೀಕ್ಷೆಯಲ್ಲಿದ್ದಾರೆ. ತಂಡದಲ್ಲಿರುವ ಯುವ ಆಟಗಾರರು ತಮ್ಮ ದೇಶದ ಕ್ರಿಕೆಟ್ ಮಂಡಳಿಯ ಆಯ್ಕೆಗಾರರ ಗಮನ ಸೆಳೆಯುವ ಪ್ರಯತ್ನದಲ್ಲಿದ್ದಾರೆ. ಟೆಸ್ಟ್ ವಿಶ್ವಕಪ್ ವಿಜೇತ ನಾಯಕ ತೆಂಬಾ ಬವುಮಾ ಅವರು ಈ ಪಂದ್ಯದಲ್ಲಿ ಆಡುತ್ತಿಲ್ಲ. ಅವರು ನ.6ರಿಂದ ಶುರುವಾಗುವ ಎರಡನೇ ಪಂದ್ಯದಲ್ಲಿ ಆಡಲಿದ್ದಾರೆ. ಇದರಿಂದಾಗಿ ದಕ್ಷಿಣ ಆಫ್ರಿಕಾ ಎ ತಂಡಕ್ಕಿಂತಲೂ ಭಾರತ ಎ ತಂಡವೇ ಹೆಚ್ಚು ಬಲಾಢ್ಯವಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಪ್ಲೇ ಆಫ್ ಪಂದ್ಯಕ್ಕೆ ಬೆಂಗಳೂರು ಆತಿಥ್ಯ

ಬಿಲ್ಲೀ ಜೀನ್ ಕಿಂಗ್ ಕಪ್ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಬಿಲ್ಲೀ ಜೀನ್ ಕಿಂಗ್ ಕಪ್ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಯ 'ಜಿ' ಗುಂಪಿನ ಪ್ಲೇಆಫ್ ಪಂದ್ಯಗಳಿಗೆ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆತಿಥ್ಯ ವಹಿಸಲಿದೆ.

ಈ ಟೂರ್ನಿಯ ಪಂದ್ಯಗಳು ಭಾರತದಲ್ಲಿ ಮೊದಲ ಬಾರಿಗೆ ನಡೆಯುತ್ತಿವೆ. ಕಬ್ಬನ್ ಪಾರ್ಕ್‌ನಲ್ಲಿರುವ ಎಸ್.ಎಂ.ಕೃಷ್ಣ ಕ್ರೀಡಾಂಗಣದಲ್ಲಿ ನವೆಂಬರ್ 14ರಿಂದ 16ರವರೆಗೆ ನಡೆಯಲಿವೆ.

'ಬಿಲ್ಲೀ ಜೀನ್ ಕಿಂಗ್ ಕಪ್, ಬೆಂಗಳೂರು ಓಪನ್ ಟೆನಿಸ್ ಹಾಗೂ ಐಟಿಎಫ್ ಟೂರ್ನಿಗಳು ಮುಂಬರುವ ತಿಂಗಳುಗಳಲ್ಲಿ ನಗರದಲ್ಲಿ ಆಯೋಜನೆಗೊಳ್ಳುತ್ತಿವೆ. ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಪಂದ್ಯಗಳ ವೀಕ್ಷಣೆಗೆ ಆಗಮಿಸುವ ನಿರೀಕ್ಷೆ ಇದೆ. ತವರಿನಲ್ಲಿ ಪಂದ್ಯಗಳು ನಡೆಯುವ ಕಾರಣ ಭಾರತ ತಂಡಕ್ಕೆ ಒಳ್ಳೆಯ ಅವಕಾಶ ಸಿಗಲಿದೆ' ಎಂದು ಕೆಎಸ್‌ಎಲ್‌ಟಿಎ ಕಾರ್ಯದರ್ಶಿ ಎಂ.ಮಹೇಶ್ವರ ರಾವ್ ಅವರು ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಸಹಜಾ ಯಮಲಪಲ್ಲಿ

ಪ್ಲೇ ಆಫ್‌ನಲ್ಲಿ 21 ರಾಷ್ಟ್ರಗಳು ಆಡಲಿದ್ದು ತಲಾ ಮೂರರಂತೆ ಏಳು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಭಾರತ, ನೆದರ್ಲೆಂಡ್ಸ್ ಹಾಗೂ ಸ್ಲೊವೇನಿಯಾ 'ಜಿ' ಗುಂಪಿನಲ್ಲಿವೆ. ರೌಂಡ್‌ರಾಬಿನ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ.

ಅಂಕಿತಾ ರೈನಾ, ಭಮಿಡಿಪಾಟಿ ಶ್ರೀವಲ್ಲಿ ರಶ್ಮಿಕಾ, ಸಹಜಾ ಯಮಲಪಲ್ಲಿ, ಪ್ರಾರ್ಥನಾ ಜಿ.ಟಿ. ಹಾಗೂ ರಿಯಾ ಭಾಟಿಯಾ ಅವರು ಭಾರತ ತಂಡದಲ್ಲಿದ್ದಾರೆ. ಭಾರತವು ಪ್ಲೇಆಫ್ ಸುತ್ತಿಗೆ ಅರ್ಹತೆ ಪಡೆದಿರುವುದು ಇದು ಎರಡನೇ ಬಾರಿ.

ಪ್ಲೇಆಫ್ ಪಂದ್ಯಗಳು

ದಿನ	ಪಂದ್ಯ
ನ.14	ನೆದರ್ಲೆಂಡ್ಸ್– ಸ್ಲೊವೇನಿಯಾ
ನ.15	ಭಾರತ– ಸ್ಲೊವೇನಿಯಾ
ನ.16	ಭಾರತ– ನೆದರ್ಲೆಂಡ್ಸ್

ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣವನ್ನು ಈಚೆಗಷ್ಟೇ ನವೀಕರಿಸಲಾಗಿದ್ದು, ಬಿಲ್ಲೀ ಜೀನ್ ಕಿಂಗ್ ಕಪ್ ಟೂರ್ನಿಯ ಆಯೋಜನೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ

ಎಂ.ಮಹೇಶ್ವರರಾವ್, ಕೆಎಸ್‌ಎಲ್‌ಟಿಎ ಕಾರ್ಯದರ್ಶಿ

ನ.1 ರಿಂದ ಚಳಿಗಾಲದ ರೇಸ್

ಬೆಂಗಳೂರು: ಇಲ್ಲಿಯ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ನಲ್ಲಿ ನವೆಂಬರ್ 1 ರಿಂದ ಮುಂದಿನ ವರ್ಷದ ಮಾರ್ಚ್ 21ರವರೆಗೆ ಚಳಿಗಾಲದ ರೇಸ್‌ಗಳು ನಡೆಯಲಿವೆ.

ಬುಧವಾರ ನಡೆದ ಸುದ್ದಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಬಿಟಿಸಿ ಸ್ಟೀವರ್ಡ್ ರಮೇಶ್ ಮಂಜುನಾಥ್, 'ಚಳಿಗಾಲದ ರೇಸ್‌ನಲ್ಲಿ ಒಟ್ಟು 24 ದಿನಗಳನ್ನು ನಿಗದಿ ಮಾಡಲಾಗಿದೆ. ಝುವಾರೆ ಎಸ್. ಪೂನಾವಾಲಾ ಅವರು ಬಿಟಿಸಿಗೆ ಆರ್ಥಿಕವಾಗಿ ನೆರವಿನ ಹಸ್ತ ಚಾಚಿದ್ದು, ಉತ್ತಮವಾದ ಪ್ರಾಯೋಜಕತ್ವ ಮತ್ತು ಸ್ಟೇಕ್ಸ್‌ಗಳಿಗೆ ಸಹಾಯ ನೀಡುತ್ತಿದ್ದಾರೆ' ಎಂದರು.

ಜಿಎಸ್‌ಟಿ (ಶೇ 40) ಯಿಂದಾಗಿ ಬಿಟಿಸಿಯ ಆದಾಯದಲ್ಲಿ ಗಣನೀಯ ಇಳಿಕೆಯಾಗಿದೆ. ಇದರಿಂದಾಗಿ ಸ್ಟೇಕ್ಸ್ ಮೊತ್ತದಲ್ಲಿ ಭಾರಿ ಕಡಿತ ಮಾಡಬೇಕಿರುವುದು ಅನಿವಾರ್ಯ. ಇದನ್ನು ಸರಿದೂಗಿಸಲು ಪೂನಾವಾಲಾ ಅವರು ನೀಡಿರುವ ನೆರವು ಸಹಕಾರಿಯಾಗುತ್ತಿದೆ. ಬಿಟಿಸಿಗೆ ಪೂನಾವಾಲಾ ಅವರು ₹1 ಕೋಟಿಯನ್ನು ಕಾಣಿಕೆಯಾಗಿ ನೀಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಝುವಾರೆ ಪೂನಾವಾಲಾ, 'ರೇಸ್ ಚಟುವಟಿಕೆಗಳು ಮಂಕಾಗಬಾರದು. ಹಾಗಾಗಿ ಬಿಟಿಸಿಗೆ ಸಾಧ್ಯವಾದಷ್ಟು ನೆರವು ನೀಡಲು ಬದ್ಧರಾಗಿದ್ದೇವೆ. ಡರ್ಬಿ ರೇಸ್‌ಗೆ ₹1.5 ಕೋಟಿ ನೀಡುತ್ತಿದ್ದೇವೆ' ಎಂದರು.

ಬೆಂಗಳೂರು 1000 ಗಿನ್ನೀಸ್, ಬೆಂಗಳೂರು 2000 ಗಿನ್ನೀಸ್, ಮತ್ತು ಬೆಂಗಳೂರು ಓಕ್ಸ್ ಗಳ ಕನಿಷ್ಠ ಗ್ಯಾರಂಟಿ ಮೊತ್ತವನ್ನು ತಲಾ ₹40 ಲಕ್ಷಕ್ಕೆ ಏರಿಸಲಾಗಿದೆ. ಇದರಲ್ಲಿ ಶೇ 30 ಪೂನಾವಾಲಾ ಅವರ ಹಂಚಿಕೆ ಇರುತ್ತದೆ.

ಚಳಿಗಾಲದ ಡರ್ಬಿ ರೇಸ್ ಮೊತ್ತವನ್ನು ₹2 ಕೋಟಿಯಿಂದ ₹5 ಕೋಟಿಗೆ ಹೆಚ್ಚಿಸಲಾಗಿದೆ. ಜನವರಿಯಲ್ಲಿ ನಡೆಯಲಿದೆ. ಇದು ದೇಶದಲ್ಲಿಯೇ ಡರ್ಬಿಗೆ ಇರುವ ಅತಿ ದೊಡ್ಡ ಪ್ರಶಸ್ತಿ ಮೊತ್ತವಾಗಿದೆ. ಪೂನಾವಾಲಾ ಅವರು ಡರ್ಬಿ ರೇಸ್‌ಗೆ ₹1.5 ಕೋಟಿ ನೀಡಿದ್ದಾರೆ.

'ಈ ಎಲ್ಲ ಕಾಣಿಕೆಗಳನ್ನು ಮುಂದಿನ ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಲಾಗುವುದು. ಟರ್ಫ್ ಕ್ಲಬ್‌ಗಳ ವಹಿವಾಟಿನ ಮೇಲೆ ಹೇರಿರುವ ತೆರಿಗೆ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ಮೊಕದ್ದಮೆಯ ವಿಚಾರಣೆಯು ಶೀಘ್ರದಲ್ಲಿಯೇ ನಡೆಯಲಿದೆ. ಕ್ಲಬ್‌ಗಳ ವಹಿವಾಟಿನ ಬದಲು ಕ್ಲಬ್‌ಗಳು ಪಡೆವ ಕಮಿಷನ್ ಮೇಲೆ ತೆರಿಗೆ ಏರಿಸಲು ತೀರ್ಪು ಬಂದಲ್ಲಿ, ರೇಸ್ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಕಾಣಬಹುದು' ಎಂದು ಪೂನಾವಾಲಾ ಆಶಾಭಾವನೆ ವ್ಯಕ್ತಪಡಿಸಿದರು.

ಬ್ಯಾಡ್ಮಿಂಟನ್: ಪ್ರೀಕ್ವಾರ್ಟರ್‌ಫೈನಲ್‌ಗೆ ಋತ್ವಿಕ್, ಸನೀತ್

ಪ್ರಜಾವಾಣಿ ವಾರ್ತೆ


ಮಂಗಳೂರು: ಅಗ್ರಶ್ರೇಯಾಂಕದ ಋತ್ವಿಕ್ ಸಂಜೀವಿ ಸತೀಶ್ ಕುಮಾರ್, ಎಂಟನೇ ಶ್ರೇಯಾಂಕದ ಸನೀತ್ ದಯಾನಂದ್ ಸೇರಿದಂತೆ ಎಂಟು ಮಂದಿ 'ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್– 2025' ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಬುಧವಾರ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು.

ಪುರುಷರ ಸಿಂಗಲ್ಸ್‌ನ 3ನೇ ಶ್ರೇಯಾಂಕದ ಆಟಗಾರ, ಕನ್ನಡಿಗ ಮಿಥುನ್ ಮಂಜುನಾಥ್ ಮೊದಲ ಸುತ್ತಿನಲ್ಲೇ ಸೋತು ಟೂರ್ನಿಯಿಂದ ನಿರ್ಗಮಿಸಿದರು.

ಇಲ್ಲಿನ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ ಊರ್ಜಿತ್ ಛಾಲಿಯಾ, ಆರ್ಯಮಾನ್ ಟಂಡನ್, ನುಮೇರ್ ಶೇಖ್, ಎ.ಆರ್. ರೋಹನ್ ಕುಮಾರ್ ಆನಂದಾಸ್ ರಾಜ್‌ಕುಮಾರ್, ಶೌರ್ಯ ಗುಲ್ಲಯ್ಯ ಹಾಗೂ ಪ್ರಣಯ್ ಶೆಟ್ಟಿಗಾರ್ ಅವರೂ ಪ್ರಿಕ್ವಾರ್ಟರ್ ಫೈನಲ್ ತಲುಪಿದರು.

ಋತ್ವಿಕ್ ಸಂಜೀವಿ ಸತೀಶ್ ಕುಮಾರ್ ಅವರು ಜಿನ್‌ಪಾಲ್ ಸೊನ್ನ ಅವರನ್ನು 21-18, 15-21, 21-14ರಿಂದ ಸೋಲಿಸಿದರು.

ಸನೀತ್ ದಯಾನಂದ್ ಅವರು ಆದಿತ್ಯ ಗುಪ್ತ ಅವರನ್ನು 21-19, 21-13 ನೇರ ಗೇಮ್‌ಗಳಿಂದ ಮಣಿಸಿದರು. ಆರ್ಯಮಾನ್ ಟಂಡನ್ ಅವರು 21-12, 19-21, 21-14ರಿಂದ ಸಿದ್ಧಾರ್ಥ್ ಪ್ರತಾಪ್ ಸಿಂಗ್ ವಿರುದ್ಧ ಗೆದ್ದರು. ನುಮೇರ್ ಶೇಖ್ ಅವರು ಆದಿತ್ಯ ತ್ರಿಪಾಠಿ ವಿರುದ್ಧ 22-20, 21-15ರ ನೇರ ಗೇಮ್‌ಗಳಿಂದ ಗೆದ್ದರು. ಎ.ಆರ್. ರೋಹನ್ ಕುಮಾರ್ ಆನಂದಾಸ್ ರಾಜ್‌ಕುಮಾರ್ ಅವರು ಅಖಿಲ್ ರಾವ್ ಸೂರ್ಯನೇನಿ ವಿರುದ್ಧ 21-9, 21-17ರಿಂದ ಗೆದ್ದು ಬೀಗಿದರು.



ಭಾರತದ ಜೈನಾಬ್ ಅವರನ್ನು ಸೋಲಿಸಿ ಪ್ರಿಕ್ವಾರ್ಟರ್ ಫೈನಲ್ ತಲುಪಿದ ಅಮೆರಿಕದ ಇಷಿಕಾ ಜೈಸ್ವಾಲ್

ಪ್ರಣಯ್ ಶೆಟ್ಟಿಗಾರ್ ಅವರು ತೀವ್ರ ಹಣಾಹಣಿಯಿಂದ ಕೂಡಿದ ಪಂದ್ಯದಲ್ಲಿ ಶಂಕರ್ ಸಾರಸ್ವತ್ ವಿರುದ್ಧ 22-10, 23-25, 21-11ರಿಂದ ಗೆದ್ದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಮೆರಿಕದ ಇಷಿಕಾ ಜೈಸ್ವಾಲ್ ಅವರು ಭಾರತದ ಜೈನಾಬ್ ಸಯೀದ್ ಅವರನ್ನು 21-14, 12-21, 21-15ರಿಂದ ಸೋಲಿಸಿದರು. 5ನೇ ಶ್ರೇಯಾಂಕದ ಅದಿತಿ ಭಟ್ ಅವರು ತನ್ವಿ ಪತ್ರಿ ವಿರುದ್ಧ 4-21, 14-21ರಿಂದ ಸೋತು ಆಘಾತ ಅನುಭವಿಸಿದರು. ನವ್ಯಾ ಖಂಡೇರಿ ಅವರು 15-21, 21-15, 21-18ರಿಂದ ಗೆದ್ದರು.

ಡಯಾಂಕಾ ವಾಲ್ದಿಯ ಅವರು 17-21, 21-10, 21-15ರಿಂದ ಆದ್ಯಾ ಶೈನ್ ವಿರುದ್ಧ ಗೆಲುವಿನ ನಗೆ ಬೀರಿದರು. ರುಜುಲಾ ರಾಮು ಅವರು 10ನೇ ಶ್ರೇಯಾಂಕದ ಯಶ್ವಿ ಭಟ್ ಅವರಿಗೆ 21- 13, 21-16 ರಿಂದ ಸೋಲಿನ ರುಚಿ ತೋರಿಸಿದರು.

ಕನ್ನಡಿಗ ಮಿಥುನ್ ಮಂಜುನಾಥ್ ಅವರನ್ನು ಆರ್ಯಮಾನ್ ಟಂಡನ್ ಅವರು ಮೊದಲ ಸುತ್ತಿನಲ್ಲಿ 11-21, 21-14, 21-17ರಿಂದ ಸೋಲಿಸಿದರು.

ಕರ್ನಾಟಕದ ಅನನ್ಯಾ ಪ್ರವೀಣ್ ಅವರ ಸವಾಲು ಕೂಡಾ ಮೊದಲ ಸುತ್ತಿನಲ್ಲೇ ಅಂತ್ಯವಾಯಿತು. ಪ್ರಶಂಸಾ ಬೋನಮ್ ವಿರುದ್ಧದ ಮೊದಲ ಗೇಮ್‌ನಲ್ಲಿ ಮುನ್ನಡೆ ಗಳಿಸಿದ್ದ ಅವರು ನಂತರ 21-17, 15-21, 19-21ರಿಂದ ಶರಣಾದರು.